ಸಂಪುಟ: 06 ಸಂಚಿಕೆ: 192 ಪುಟಗಳು: 08 ಭಾನುವಾರ 27 ಸೆಪ್ಟೆಂಬರ್ 2026 www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com

ಸಂಪಾದಕರು: ಟಿ. ಹೊಂಬೇಗೌಡ

RNI No. KARKAN/2021/80833

9448225696 + 91 8035621249 ₹5

# ಉದಯ ವಾಹಿನಿ

ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

**ಮುಂಜಾನೆ ಮಾತು**

ಯಾರ ಮಾತಿಗು ನೀ ಅಂಜಬೇಡ''
ಯಾರ ಆಸೆಯಂತೆಯು ನೀ
ಇರಬೇಡ ಯಾರನ್ನು ನಂಬಿ ನೀ
ಬದುಕಬೇಡ ನಿನ್ನ ಜೀವನ ನಿನಗೆ
ನೀ ಮರೆಯಬೇಡ''

## ಒಗ್ಗಟ್ಟಿನ ಮಂತ್ರ ಪಠಿಸಿದ ಮೈತ್ರಿ ನಾಯಕರು: ವಿಧಾನಪರಿಷತ್ ಚುನಾವಣೆ ನಾಲ್ಕೂ ಸ್ಥಾನ ಗೆಲ್ಲಲು ರಣತಂತ್ರ

• ಉದಯವಾಹಿನಿ, ಬೆಂಗಳೂರು

ಮುಂಬರುವ ದಿನಗಳಲ್ಲಿ ವಿಧಾನಪರಿಷತ್‌ನ ನಾಲ್ಕು ಸ್ಥಾನಗಳಿಗೆ ನಡೆಯಲಿರುವ ಚುನಾವಣೆಯನ್ನು ಒಗ್ಗೂಡಿ ಎದುರಿಸುವ ಕುರಿತಂತೆ ಬಿಜೆಪಿ–ಜೆಡಿಎಸ್ ಮೈತ್ರಿ ಪಕ್ಷಗಳು ಒಮ್ಮತದ ನಿರ್ಧಾರ ಕೈಗೊಂಡಿವೆ.

ನಗರದ ಖಾಸಗಿ ಹೋಟೆಲ್‌ನಲ್ಲಿ ಶನಿವಾರ ಹಮ್ಮಿಕೊಂಡಿದ್ದ ಸಮನ್ವಯ ಸಮಿತಿ ಸಭೆಯಲ್ಲಿ ಎನ್‌ಡಿಎ ನಾಯಕರಾದ ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ, ಹೆಚ್.ಡಿ.ಕುಮಾರಸ್ವಾಮಿ, ಶೋಭಾ ಕರಂದ್ಲಾಜೆ, ರಾಜ್ಯ ಬಿಜೆಪಿ ಅಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಪಕ್ಷ ನಾಯಕ ಆರ್. ಅಶೋಕ್ ಸೇರಿದಂತೆ ಜೆಡಿಎಸ್ ನಾಯಕರು ಭಾಗಿಯಾದರು. ನಾಲ್ಕು ಸ್ಥಾನಗಳಿಗೆ ನಡೆಯುವ ವಿಧಾನಪರಿಷತ್ ಚುನಾವಣೆಯನ್ನು ಎಲ್ಲರೂ ಒಗ್ಗಟ್ಟಾಗಿ ಎದುರಿಸಬೇಕು. ಮೈತ್ರಿ ಹಿನ್ನೆಲೆಯಲ್ಲಿ ಎಲ್ಲಾ ನಾಲ್ಕು ಸ್ಥಾನಗಳನ್ನು ಗೆಲ್ಲಲೇಬೇಕು. ಮೈತ್ರಿಯೊಳಗೆ ವೈಮನಸ್ಸು ಬರುವ ರೀತಿ ಕಾಂಗ್ರೆಸ್ ಪ್ರಯತ್ನಿಸಬಹುದು. ಬಹಳ ಎಚ್ಚರಿಕೆಯಿಂದ ಕೆಲಸ ಮಾಡಬೇಕು. ಮೂರು ಕ್ಷೇತ್ರಗಳಲ್ಲಿ ಬಿಜೆಪಿ ಶಾಸಕರಿದ್ದಾರೆ. ಬೆಂಗಳೂರು ಶಿಕ್ಷಕರ ಕ್ಷೇತ್ರ ಕೂಡ ಎನ್‌ಡಿಎ ತೆಕ್ಕೆಗೆ ಬರಬೇಕು. ಹೀಗಾಗಿ ಎಲ್ಲರೂ ಒಮ್ಮತದಿಂದ ಕೆಲಸ ಮಾಡಬೇಕು ಎಂದು ನಾಯಕರು ಕಿವಿಮಾತು ಹೇಳಿದ್ದಾರೆ. ಒಗ್ಗಟ್ಟಿನ ಮಂತ್ರವು ಮುಂದಿನ ಸಾರ್ವತ್ರಿಕ ಚುನಾವಣೆಗೆ ಬುನಾದಿಯಾಗಲಿದೆ. ಬಿಜೆಪಿ



– ಜೆಡಿಎಸ್ ಬದಲು ಎನ್‌ಡಿಎ ಅಭ್ಯರ್ಥಿ ಎಂದು ಹೋರಾಡಬೇಕು ಎಂದು ನಾಯಕರು ಕರೆ ನೀಡಿದ್ದಾರೆ ಎನ್ನಲಾಗಿದೆ. ಸಭೆ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ ಬಿಜೆಪಿ

**ಒಟ್ಟಾಗಿ ಒಂದಾಗಿ ಹೋರಾಟ**

ರಾಜ್ಯದ ಆಡಳಿತ ಪಕ್ಷದಲ್ಲಿ ಕಾಂಗ್ರೆಸ್ ಶಾಸಕರೇ ಮುಖ್ಯಮಂತ್ರಿಗಳ ಬಗ್ಗೆ ವಿಶ್ವಾಸ ಕಳೆದುಕೊಳ್ಳುತ್ತಿದ್ದಾರೆ. ಮುಖ್ಯಮಂತ್ರಿಗಳಿಗೆ ಆಡಳಿತದ ಮೇಲೆ ಹಿಡಿತ ಸಿಗುತ್ತಿಲ್ಲ. ಹಣಕಾಸು ಇಲಾಖೆಯು ಬರೆದ ಪತ್ರದ ಮೂಲಕ ಇದೆಲ್ಲ ಜಗಜ್ಜಾಹೀರಾಗಿದೆ. ಖಜಾನೆಯಲ್ಲಿ ಹಣ ಇಲ್ಲ. ಡಿ.ಕೆ.ಶಿವಕುಮಾರ್ ನೇತೃತ್ವದ ಕಾಂಗ್ರೆಸ್ ಸರ್ಕಾರವು ಕೇವಲ ಘೋಷಣೆಗೆ ಮಾತ್ರ ಸೀಮಿತವಾಗಿದೆ. ಮುಂದಿನ ದಿನಗಳಲ್ಲಿ ಎರಡೂ ಪಕ್ಷಗಳು ಒಟ್ಟಾಗಿ ಒಂದಾಗಿ ಹೋರಾಟಗಳನ್ನು ಮಾಡುವುದು.

ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ಶಿಕ್ಷಕರ ಕ್ಷೇತ್ರ ಹಾಗೂ ಎರಡು ಪದವೀಧರ ಕ್ಷೇತ್ರಗಳ ವಿಧಾನಪರಿಷತ್ ಚುನಾವಣೆ ನಡೆಯಲಿದೆ. ಎಲ್ಲಾ 4 ಕ್ಷೇತ್ರಗಳಲ್ಲಿ ಬಿಜೆಪಿ ಮತ್ತು ಜೆಡಿಎಸ್ ಪಕ್ಷಗಳು ಒಟ್ಟಾಗಿ, ಒಂದುಗೂಡಿ ಚುನಾವಣೆ ಎದುರಿಸಲಿವೆ. ನಾಲ್ಕು ಕ್ಷೇತ್ರಗಳನ್ನೂ ನಾವು ಗೆಲ್ಲಬೇಕು. ಆ ನಿಟ್ಟಿನಲ್ಲಿ ಒಟ್ಟಾಗಿ ಹೋರಾಟ ಮಾಡಬೇಕು ಅಂತ ತೀರ್ಮಾನ ಮಾಡಲಾಗಿದೆ.

ಕ್ಷೇತ್ರವಾರು ಯಾರ್ಯಾರು ಜವಾಬ್ದಾರಿ ಹೊಂದಿರಬೇಕು ಎಂಬುದರ ಘೋಷಣೆ ಮಾಡಿದ್ದೇವೆ ಎಂದರು. ಯಾವ ರೀತಿ ಮುಂದೆ ರಾಜ್ಯದಲ್ಲಿ ಪಕ್ಷ ಅಧಿಕಾರಕ್ಕೆ ಬರಬೇಕು ಎಂಬ ಬಗ್ಗೆ ಚರ್ಚಿಸಿದ್ದೇವೆ. ರಾಜ್ಯದಲ್ಲಿ ಎನ್‌ಡಿಎ ಸರ್ಕಾರ ಅಧಿಕಾರಕ್ಕೆ ತರುವ ಬಗ್ಗೆಯೂ ನಾವು ಚರ್ಚೆ ಮಾಡಿದ್ದೇವೆ ಎಂದು ವಿಜಯೇಂದ್ರ ತಿಳಿಸಿದರು.

## 2,500 ಬರ ಪರಿಹಾರ: ರೈತ ಏನು ಭಿಕ್ಷುಕನೇ ಎಂದು ರಾಜ್ಯ ಸರ್ಕಾರದ ವಿರುದ್ಧ ಹೆಚ್‌ಡಿಕೆ ಕಿಡಿ

• ಉದಯವಾಹಿನಿ, ಬೆಂಗಳೂರು

ರಾಜ್ಯ ಸರ್ಕಾರ ಘೋಷಿಸಿರುವ 2,500 ರೂಪಾಯಿ ಬರ ಪರಿಹಾರದ ಬಗ್ಗೆ ತೀವ್ರ ಆಕ್ರೋಶ ವ್ಯಕ್ತಪಡಿಸಿರುವ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ, ಸರ್ಕಾರದ ಯೋಗ್ಯತೆ ಇಷ್ಟೇ. ಹಿಂದಿನ ಮುಖ್ಯಮಂತ್ರಿ ಕಚೇರಿಯಲ್ಲಿ ಕಾಫಿ, ಟೀ ಕುಡಿಯಲು 200 ಕೋಟಿ ಖರ್ಚು ಮಾಡಿದ್ದರು. ನಿಮ್ಮ ಯೋಗ್ಯತೆಗೆ ರೈತರಿಗೆ 2,500 ರೂ. ಕೊಟ್ಟಿದ್ದೀರಲ್ಲ ಎಂದು ಕಿಡಿಕಾರಿದ್ದಾರೆ. ಕರ್ನಾಟಕ ವಿಧಾನಪರಿಷತ್ತಿಗೆ ಶಿಕ್ಷಕ ಮತ್ತು ಪದವೀಧರ ಕ್ಷೇತ್ರಗಳಿಂದ ನಡೆಯಲಿರುವ ಸಂಬಂಧಿಸಿದಂತೆ ಶನಿವಾರ ಎನ್‌ಡಿಎ ಮೈತ್ರಿಕೂಟದ ಮಿತ್ರ ಪಕ್ಷಗಳಾದ ಜೆಡಿಎಸ್ ಮತ್ತು ಬಿಜೆಪಿಯ ಸಮನ್ವಯ ಸಮಿತಿ ಸಭೆಯಲ್ಲಿ ಪಾಲ್ಗೊಳ್ಳುವ ಮುನ್ನ ಕೇಂದ್ರ ಸಚಿವರು ಮಾಧ್ಯಮಗಳ ಜೊತೆ ಮಾತನಾಡಿದರು. ಕಾಕ್ರೋಚ್ ಜನತಾ ಪಾರ್ಟಿ ಏಕೆ ಮೌನವಾಗಿದೆ ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ ಆಯಿತು ಎಂದು ನವದೆಹಲಿಯಲ್ಲಿ ಇನ್ನಿಲ್ಲದ ಗಲಾಟೆ ಎಬ್ಬಿಸಿದ ಕಾಕ್ರೋಚ್ ಜನತಾ ಪಾರ್ಟಿ ಮತ್ತು ಜೆನ್‌ಜೀಗಳು ಈಗೆಲ್ಲಿ ಹೋಗಿದ್ದಾರೆ. ಕರ್ನಾಟಕದಲ್ಲಿ ನಡೆಯುತ್ತಿರುವ ಮಿತಿ ಮೀರಿದ ಭ್ರಷ್ಟಾಚಾರ ಮತ್ತು ಕೆಪಿಎಸ್‌ಸಿಯಲ್ಲಿ ನಡೆದಿರುವ ಸಹಾಯಕ ಎಕ್ಸಿಕ್ಯೂಟಿವ್ ಇಂಜಿನಿಯರ್‌ಗಳ ನೇಮಕಾತಿ ಅಕ್ರಮ ಹಾಗೂ ಪಶುವೈದ್ಯರ ನೇಮಕಾತಿ ಅಕ್ರಮ ಸೇರಿದಂತೆ ಕಾಸಿಗಾಗಿ ಉದ್ಯೋಗಗಳನ್ನು ಮಾಡಿಕೊಳ್ಳುತ್ತಿರುವ ಭ್ರಷ್ಟಾಚಾರವನ್ನು ಏಕೆ ಪ್ರಶ್ನಿಸುತ್ತಿಲ್ಲ ಎಂದರು.

## ದರ್ಶನ್‌ಗೆ ಮತ್ತೆ ಶಾಕ್ ಮಾಫಿ ಸಾಕ್ಷಿ ಹೇಳಿಕೆ ಮುಂದೂಡುವಂತೆ ಸಲ್ಲಿಸಿದ್ದ ಅರ್ಜಿ ವಜಾ

• ಉದಯವಾಹಿನಿ, ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಆರೋಪಿಗಳಾಗಿರುವ ದರ್ಶನ್ ಹಾಗೂ ಪವಿತ್ರಾ ಗೌಡಗೆ ಶಾಕ್ ಎದುರಾಗಿದೆ. ಪ್ರದೋಷ್ ಮಾಫಿ ಸಾಕ್ಷಿ ಹೇಳಿಕೆ ಮುಂದೂಡುವಂತೆ ಸಲ್ಲಿಸಿದ್ದ ಅರ್ಜಿ ವಜಾಗೊಂಡಿದೆ. ಇತ್ತ ಪವಿತ್ರಾ ಗೌಡ ಜಾಮೀನು ಅರ್ಜಿಯನ್ನೂ ವಜಾಗೊಳಿಸಲಾಗಿದೆ. 59ನೇ ಸೆಷನ್ಸ್ ಕೋರ್ಟ್ ನ್ಯಾಯಾಧೀಶರು ಅರ್ಜಿ ವಜಾಗೊಳಿಸಿ ಆದೇಶಿಸಿದ್ದಾರೆ. ದರ್ಶನ್ ಪರ ವಾದಿಸಿದ ವಕೀಲ ಹಷ್ಮತ್ ಪಾಷ, ಹೈಕೋರ್ಟ್ ಆದೇಶದ ಪ್ರತಿ ಇಂದಷ್ಟೇ ಸಿಕ್ಕಿದೆ. ಹೈಕೋರ್ಟ್ ಆದೇಶ ಪ್ರಶ್ನಿಸಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸುತ್ತೇವೆ. ಹೀಗಾಗಿ, ಪ್ರದೋಷ್ ಸಾಕ್ಷಿ ಹೇಳಿಕೆ ದಾಖಲು ಪ್ರಕ್ರಿಯೆ ಮುಂದೂಡುವಂತೆ ಮನವಿ ಮಾಡಿದರು. ಪ್ರದೋಷ್‌ಗೆ ಮುನ್ನ ಬೇರೆ ಸಾಕ್ಷಿಗಳ ಹೇಳಿಕೆ ದಾಖಲು ಮಾಡಿಕೊಳ್ಳಿ. ನಾವು ಸಹಕಾರ ನೀಡುತ್ತೇವೆ. ಆದರೆ, ನಮಗೆ 10 ದಿನಗಳ ಕಾಲ ಸಮಯಾವಕಾಶ ಬೇಕು. ಹೈಕೋರ್ಟ್ ಆದೇಶದ ಪ್ರತಿ ಸಿಕ್ಕಿದೆ. ಅದನ್ನ ಪರಿಶೀಲನೆ ಮಾಡಬೇಕು. ಇವತ್ತು ಬೆಳಗ್ಗೆ ನಾವು ಅರ್ಜಿ ಸಲ್ಲಿಕೆ ಮಾಡಿದ್ದೇವೆ. ಲಿಸ್ಟ್‌ನಲ್ಲಿ ಇರೋರನ್ನ ಯಾರನ್ನು ಬೇಕಾದ್ರೂ ಹೇಳಿಕೆ ದಾಖಲು ಮಾಡಲಿ ವಕೀಲ ಹಷ್ಮತ್ ಪಾಷ ವಾದಿಸಿದರು. ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಸ್ವಲ್ಪ ಸಮಯ ಬೇಕಿದೆ. ಪ್ರಾಸಿಕ್ಯೂಷನ್ ಬೇರೆ ಸಾಕ್ಷಿಗಳ ಹೇಳಿಕೆ ನಡೆಸಲಿ. ಪ್ರದೋಷ್ ಹೇಳಿಕೆ ಮಾತ್ರ ಮುಂದೂಡಬೇಕು.

## ಸರ್ಕಾರದ ವೈಫಲ್ಯಗಳನ್ನು ಜನರೆದುರು ತೆರೆದಿಡಲು ಜೋಶಿ ಸಲಹೆ

• ಉದಯವಾಹಿನಿ, ಬೆಂಗಳೂರು

ವಿಧಾನ ಪರಿಷತ್ ಚುನಾವಣೆ ಹಿನ್ನೆಲೆ ಬೆಂಗಳೂರಿನಲ್ಲಿ ಎನ್‌ಡಿಎ ನಾಯಕರ ಸಭೆ ನಡೆದಿದ್ದು, ಚುನಾವಣೆ ಕಾರ್ಯತಂತ್ರ ಕುರಿತು ಸಮಾಲೋಚನೆ ನಡೆಸಿದರು.

ರಾಜ್ಯದಲ್ಲಿ ವಿಧಾನ ಪರಿಷತ್ ಚುನಾವಣೆಯನ್ನು ಎನ್‌ಡಿಎ ಮೈತ್ರಿಕೂಟ ಗಂಭೀರವಾಗಿ ಪರಿಗಣಿಸಿದ್ದು, ಆಡಳಿತಾರೂಢ ಕಾಂಗ್ರೆಸ್ ವಿರುದ್ಧ ಗೆಲುವಿಗೆ ಈಗಿನಿಂದಲೇ ಅಗತ್ಯ ಸಿದ್ಧತೆ ಕೈಗೊಳ್ಳುವ ಬಗ್ಗೆ ಚರ್ಚೆ ನಡೆಸಲಾಯಿತು. ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಶಿ, ಹೆಚ್.ಡಿ.ಕುಮಾರಸ್ವಾಮಿ, ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಪಕ್ಷ ನಾಯಕ ಆರ್.ಅಶೋಕ್, ಮಾಜಿ ಸಿಎಂ ಜಗದೀಶ್ ಶೆಟ್ಟರ್ ಮುಂತಾದ ನಾಯಕರು ಚುನಾವಣೆ ಕುರಿತ ಈ ಪೂರ್ವಭಾವಿ ಸಭೆಯಲ್ಲಿ ಮಹತ್ತರ ಚರ್ಚೆ ನಡೆಸಿದರು. ಮುಂದಿನ ದಿನಗಳಲ್ಲಿ ನಡೆಯುವ ವಿಧಾನ ಪರಿಷತ್ ಹಾಗೂ ಸ್ಥಳೀಯ ಸಂಸ್ಥೆಗಳ ಚುನಾವಣೆಯನ್ನು ಸಮರ್ಥವಾಗಿ ಎದುರಿಸಿ ಮೈತ್ರಿ ಅಭ್ಯರ್ಥಿಗಳನ್ನು ಗೆಲ್ಲಿಸಿಕೊಳ್ಳುವ ಕುರಿತು ಉಭಯ ಪಕ್ಷಗಳ ಮುಖಂಡರೂ ಪ್ರಮುಖ ವಿಷಯಗಳ ಮೇಲೆ ಸಮಾಲೋಚನೆ ನಡೆಸಿದರು.

## ರಾಜ್ಯದ 1.50 ಕೋಟಿ ಮತದಾರರ ಕೈಬಿಟ್ಟಿದ್ದಾರೆ: ಬಿ.ಕೆ ಹರಿಪ್ರಸಾದ್

• ಉದಯವಾಹಿನಿ, ಬೆಂಗಳೂರು

ಝೆನ್–ಜಿ ಮತದಾರರ ಹಕ್ಕು ಕಸಿಯುವ ಕೆಲಸವನ್ನ ಬಿಜೆಪಿ ಮಾಡುತ್ತಿದೆ ಎಂದು ಕೆಪಿಸಿಸಿ ಅಧ್ಯಕ್ಷ ಬಿ.ಕೆ ಹರಿಪ್ರಸಾದ್ ಆರೋಪಿಸಿದರು. ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಚುನಾವಣಾ ಆಯುಕ್ತರ ವಿರುದ್ಧ ಕಾಂಗ್ರೆಸ್ ಹಮ್ಮಿಕೊಂಡಿದ್ದ ಪ್ರತಿಭಟನೆಯಲ್ಲಿ ಮಾತನಾಡಿದ ಅವರು, ಮತದಾರರ ಪಟ್ಟಿಯಿಂದ ಅರ್ಹ ಮತದಾರರನ್ನ ಕೈಬಿಡಲಾಗುತ್ತಿದೆ ಎಂದು ಆರೋಪಿಸಿದರು.

2015 ರಿಂದ ಬಿಜೆಪಿ ಅಧಿಕಾರಕ್ಕೆ ಬಂದಮೇಲೆ ಚುನಾವಣಾ ಆಯೋಗ ಅಕ್ರಮ ಮಾಡುತ್ತಿದೆ. ಕರ್ನಾಟಕದಲ್ಲಿ ಸುಮಾರು 1.50 ಕೋಟಿ ಮತದಾರರನ್ನ ಮತದಾರರ ಪಟ್ಟಿಯಿಂದ ಕೈಬಿಡಲಾಗಿದೆ. ಅಲ್ಲದೆ, 65 ಲಕ್ಷ ಮತಗಳನ್ನು ಶಿಫ್ಟ್ ಮಾಡಲಾಗಿದೆ ಎಂದು ಕಿಡಿಕಾರಿದರು. ಪ್ರಜಾಪ್ರಭುತ್ವದ ಬುನಾದಿಯೇ ಮತದಾನ. ಅರ್ಹ ಮತದಾರರೊಬ್ಬರ ಹೆಸರನ್ನೂ ಮತದಾರರ ಪಟ್ಟಿಯಿಂದ ಕೈಬಿಡಬಾರದು. ಮತದಾರರಿಗೆ ಹೆಚ್ಚಿನ ಅಧಿಕಾರ ನೀಡಬೇಕು. ರಾಜೀವ್ ಗಾಂಧಿ ಕಾಲದಲ್ಲಿ 18 ವರ್ಷಕ್ಕೆ ಮತದಾನದ ಹಕ್ಕು ನೀಡಲಾಯಿತು.

ಭದ್ರತಾ ಮಂಡಳಿಯ ಸ್ವರೂಪದಲ್ಲಿ ಭಾರತ ಏಕೆ ಇರಬೇಕು ಎಂಬುದಕ್ಕೆ ಪ್ರಮುಖ ಕಾರಣ ಎಂದರೆ, ಇದು ವಿಶ್ವಸಂಸ್ಥೆಯ ಅತ್ಯಂತ ಪ್ರಮುಖ ಅಂಗಗಳಲ್ಲಿ ಒಂದಾಗಿದ್ದು, ಇಲ್ಲಿ ಜಾಗತಿಕ ರಾಜಕೀಯದ ನಿರ್ಧಾರಗಳು ಅಲ್ಲಿಯೇ ರೂಪುಗೊಳ್ಳುತ್ತವೆ ಎಂದು ನ್ಯೂಯಾರ್ಕ್‌ನಲ್ಲಿರುವ ವಿಶ್ವಸಂಸ್ಥೆಯಲ್ಲಿ ಭಾರತದ ಮಾಜಿ ಖಾಯಂ ಪ್ರತಿನಿಧಿ ಹಾಗೂ ರಾಯಭಾರಿ ಟಿ.ಎಸ್. ತಿರುಮೂರ್ತಿ ತಿಳಿಸಿದರು. ಇಲ್ಲಿ ಭಾಗವಹಿಸಿದಾಗಲೆಲ್ಲಾ, ನಾವು ಸಕಾರಾತ್ಮಕ ಕೊಡುಗೆ ನೀಡಿದ್ದೇವೆ ಎಂಬುದನ್ನು ಜನರು ಅರ್ಥಮಾಡಿಕೊಂಡಿದ್ದಾರೆ. ನಾವು ಖಾಯಂ ಸದಸ್ಯರಲ್ಲದಿದ್ದರೂ, ವಿಶ್ವಸಂಸ್ಥೆಯ ಭದ್ರತಾ ಮಂಡಳಿಯಲ್ಲಿ ಭಾರತವು ಸಕಾರಾತ್ಮಕ ಶಕ್ತಿಯಾಗಿ ಕಾರ್ಯನಿರ್ವಹಿಸಿದೆ. ಅನೇಕ ಸಂದರ್ಭಗಳಲ್ಲಿ ನಾವು ಅಭಿವೃದ್ಧಿಶೀಲ ರಾಷ್ಟ್ರಗಳ ಸಮೂಹ, ಅದರಲ್ಲೂ ವಿಶೇಷವಾಗಿ ಆಫ್ರಿಕಾದ ಪರವಾಗಿ ಧ್ವನಿ ಎತ್ತುತ್ತೇವೆ.ವೀಟೋ ಅಧಿಕಾರವನ್ನು ಪ್ರಶ್ನಿಸಲು ಸಾಧ್ಯವಾಗದಿದ್ದರೂ, ಭಾರತವು ಹಿಂದೆ ತನ್ನ ಕಾರ್ಯಸೂಚಿಯನ್ನು ಮುಂದಿಡಲು ಶಾಶ್ವತ ಸದಸ್ಯರೊಂದಿಗಿನ ಮೈತ್ರಿಗಳನ್ನು ಬಳಸಿಕೊಂಡಿದೆ. 2021ರಲ್ಲಿ ಭಾರತದ ಅಧ್ಯಕ್ಷತೆಯಲ್ಲಿ, ತಾಲಿಬಾನ್ ಸ್ವಾಧೀನದ ಎರಡು ವಾರಗಳ ನಂತರ, ಯಾವುದೇ ದೇಶಕ್ಕೆ ಬೆದರಿಕೆ ಹಾಕಲು ಅಥವಾ ದಾಳಿ ಮಾಡಲು ಅಫ್ಘಾನ್ ಪ್ರದೇಶವನ್ನು ಬಳಸಬಾರದು. ಭಯೋತ್ಪಾದಕರಿಗೆ ಆಶ್ರಯ ಅಥವಾ ತರಬೇತಿ ನೀಡಬಾರದು. ಭಯೋತ್ಪಾದಕ ಕೃತ್ಯಗಳನ್ನು ಯೋಜಿಸಿ ಮತ್ತು ಹಣಕಾಸು ಒದಗಿಸಬೇಕು ಎಂಬ ನಿರ್ಣಯವನ್ನು ಯುಎನ್‌ಎಸ್‌ಸಿ ಅಂಗೀಕರಿಸಿತು. ಈ ನಿರ್ಣಯವನ್ನು ಫ್ರಾನ್ಸ್, ಯುಕೆ ಮತ್ತು ಯುಎಸ್ ಪ್ರಾಯೋಜಿಸಿದ್ದವು ಮತ್ತು ರಷ್ಯಾ ಮತ್ತು ಚೀನಾ ಗೈರುಹಾಜರಾಗಿದ್ದು 13 ಮತಗಳನ್ನು ಪಡೆದವು. ಈ ಬಾರಿ ಭಾರತದ ಅಭಿಯಾನವು 'ಶಾಂತಿ' ಮಾನದಂಡಗಳು, ನಂಬಿಕೆ ಮತ್ತು ಸಮಗ್ರತೆಯ ಮೂಲಕ ಸಮಗ್ರ ಪ್ರಗತಿಯನ್ನು ಖಾತ್ರಿಪಡಿಸುವುದು ಎಂಬ ಪರಿಕಲ್ಪನೆಯನ್ನು ಕೇಂದ್ರವಾಗಿರಿಸಿಕೊಂಡಿದೆ.

ಭಾರತಕ್ಕೆ ಎಲ್ಲಾ ದೇಶಗಳು ಸೂಕ್ತ ಪರಿಗಣನೆ ನೀಡುತ್ತವೆ ಎಂಬ ವಿಶ್ವಾಸ ನಮಗಿದೆ ಎಂದು ವಿದೇಶಾಂಗ ವ್ಯವಹಾರಗಳ ಸಚಿವಾಲಯದ ವಕ್ತಾರ ರಣಧೀರ್ ಜೈಸ್ವಾಲ್ ತಿಳಿಸಿದ್ದಾರೆ. 202728ರ ಅವಧಿಯ ಸ್ಥಾನಕ್ಕಾಗಿ ಮೊದಲ ಬಾರಿಗೆ ಸ್ಪರ್ಧಿಸಿದ್ದ ಮಧ್ಯ ಏಷ್ಯಾದ ದೇಶವಾದ ಕಿರ್ಗಿಸ್ತಾನ್, ಫಿಲಿಪ್ಪಿನ್ಸ್ ವಿರುದ್ಧ ಜಯ ಸಾಧಿಸಿತ್ತು. ಇದೀಗ ತಜಕಿಸ್ತಾನ್ ಕೂಡ ಮಧ್ಯ ಏಷ್ಯಾಕ್ಕಾಗಿ ಅಂತಹದ್ದೇ ಗೆಲುವನ್ನು ಸಾಧಿಸುವ ನಿರೀಕ್ಷೆಯಲ್ಲಿದೆ.

### ಭಾರತ ಪ್ರಚಾರ ಕಾರ್ಯ ತೀವ್ರ

ಇದರ ನಡುವೆಯೇ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯ ಅಧಿವೇಶನದಲ್ಲಿ ಭಾರತವು ತನ್ನ ಪ್ರಚಾರ ಕಾರ್ಯವನ್ನು ತೀವ್ರಗೊಳಿಸಿದೆ. ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಪೆಸಿಫಿಕ್ ದ್ವೀಪ ರಾಷ್ಟ್ರಗಳು ಹಾಗೂ ಭಾರತ, ಬ್ರೆಜಿಲ್ ಮತ್ತು ದಕ್ಷಿಣ ಆಫ್ರಿಕಾಗಳ ಒಕ್ಕೂಟವಾದ ಐಬಿಎಸ್ ಎ ಜೊತೆಗೆ, ಕೆರಿಬಿಯನ್ ಸಮುದ್ರ ಮತ್ತು ಲ್ಯಾಟಿನ್ ಅಮೆರಿಕದ ದೇಶಗಳನ್ನು ಒಳಗೊಂಡಿರುವ ಕಾರಿಕೊಮ್ ಮತ್ತು ಸೆಲಾಕ್ ಗುಂಪುಗಳ ಪ್ರತಿನಿಧಿಗಳನ್ನು ಭೇಟಿ ಮಾಡಿದ್ದಾರೆ.



**ಪಾಕ್ ದುರಂಕಾರಿ ಚಾಟಿ ಭರ್ಜರಿ**



# ಪಾಕ್‌ಗೆ ಮುಖಭಂಗ
# ಭಾರತ ಉತ್ತುಂಗ





ಷರೀಫ್ ಅವರ ಭಾಷಣದಲ್ಲಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ದೃಢ ಮತ್ತು ದೀರ್ಘದರ್ಶಿ ನಾಯಕತ್ವಕ್ಕೆ ಧನ್ಯವಾದ ಅರ್ಪಿಸಿದರು. ಅಮೆರಿಕದ ನಾಯಕರ ಸಕಾಲಿಕ ಮಧ್ಯಸ್ಥಿಕೆಯು ದಕ್ಷಿಣ ಏಷ್ಯಾದಲ್ಲಿ ಲಕ್ಷಾಂತರ ಜನರ ಜೀವಗಳನ್ನು ಉಳಿಸಿದೆ ಎಂದರು. ಸುಮಾರು 23 ನಿಮಿಷಗಳ ಭಾಷಣದಲ್ಲಿ ಕಾಶ್ಮೀರ ವಿಷಯವನ್ನು ಪ್ರಸ್ತಾಪಿಸಿದ ಷರೀಫ್, 2025ರ ಸಂಘರ್ಷದಂತಹ ಪರಿಸ್ಥಿತಿ ಮರುಕಳಿಸದಿರಲು ಕಾಶ್ಮೀರ ಸಮಸ್ಯೆಗೆ ನ್ಯಾಯಯುತ ಪರಿಹಾರ ಅಗತ್ಯ ಎಂದು ವಾದಿಸಿದ್ದಾರೆ. ನ್ಯೂಯಾರ್ಕ್ ನಗರ ಮತ್ತು ಇಡೀ ಜಗತ್ತು ಭೀಕರ 9/11 ಭಯೋತ್ಪಾದಕ ದಾಳಿಯ 25ನೇ ವಾರ್ಷಿಕೋತ್ಸವವನ್ನು ಆಚರಿಸಿದ ಕೇವಲ ಎರಡು ವಾರಗಳ ನಂತರ ಷರೀಫ್ ಅವರ ಈ ವಿಲಕ್ಷಣ ಹೇಳಿಕೆಗಳು ಬಂದಿವೆ ಎಂಬುದನ್ನು ಭಾರತವು ವಿಶ್ವಸಂಸ್ಥೆಯ ಸಾಮಾನ್ಯ ಸಭೆಗೆ ನೆನಪಿಸಿತು. ಈ ಘಟನೆಯನ್ನು ನೆನಪಿನಲ್ಲಿಟ್ಟುಕೊಳ್ಳುವುದು ಮುಖ್ಯ. ಏಕೆಂದರೆ, ಆ ದಾಳಿಯ ರೂವಾರಿ ಒಸಾಮಾ ಬಿನ್ ಲಾಡೆನ್ ಪಾಕಿಸ್ತಾನಿ ಸೇನೆಯ ಪ್ರಮುಖ ಅಕಾಡೆಮಿಯ ಪಕ್ಕದಲ್ಲೇ ವಾಸಿಸುತ್ತಿದ್ದ ಎಂದು ಗಹ್ಲೋಟ್ ಚುಚ್ಚಿದರು.

**ಟ್ರಂಪ್‌ಗೆ ಧನ್ಯವಾದ ಹೇಳಿದ ಷರೀಫ್**

### ಪಾಕ್‌ನಿಂದ ಬೂಟಾಟಿಕೆ ಹೇಳಿಕೆ

ವಿಶ್ವಸಂಸ್ಥೆಯಲ್ಲಿ ಭಾರತದ ಕಾಯಂ ನಿಯೋಗದ ಪ್ರಥಮ ಕಾರ್ಯದರ್ಶಿ ಪೆಟಲ್ ಗಹ್ಲೋಟ್ ಮಾತನಾಡಿ, ಯಾವ ದೇಶವು ತನ್ನದೇ ಜನರ ವಿರುದ್ಧ ಒರಟಾಗಿ ನಡೆದುಕೊಳ್ಳುತ್ತಿದ್ದೆಯೋ ಅಂತಹ ದೇಶದಿಂದ ಪ್ರಜಾಸತ್ತಾತ್ಮ ಹಕ್ಕುಗಳು ಮತ್ತು ಮಾನವ ಮೌಲ್ಯಗಳ ಕುರಿತು ಬೂಟಾಟಿಕೆಯ ಭಾಷಣಗಳನ್ನು ಕೇಳುವಂತಾಗಿದೆ ಎಂದು ಲೇವಡಿ ಮಾಡಿದರು. ಆ ದೇಶದ ಆಡಳಿತ ಸೇನೆಯಿಂದ, ಸೇನೆಗಾಗಿ, ಸೇನೆಗೋಸ್ಕರ ಇದೆ. ಕೈಗೊಂಬೆಗಳು ಅಧಿಕಾರಕ್ಕೆ ಬರಬಹುದು ಮತ್ತು ಹೋಗಬಹುದು. ಅಲ್ಲಿ ಅಸಲಿ ನಿರ್ಧಾರಗಳನ್ನು ಯಾರು ತೆಗೆದುಕೊಳ್ಳುತ್ತಾರೆ ಎಂಬ ಗೊಂದಲ ಯಾರಿಗೂ ಬೇಡ. ಕಳೆದ ವರ್ಷ ನವೆಂಬರ್‌ನಲ್ಲಿ ತರಲಾದ 27ನೇ ಸಂವಿಧಾನ ತಿದ್ದುಪಡಿ ಮತ್ತು ಅದರ ನೈಜವಾದ ಆಡಳಿತಗಾರನಿಗೆ ನೀಡಲಾದ ಜೀವಿತಾವಧಿ ವಿನಾಯಿತಿಯೇ ಪಾಕಿಸ್ತಾನದ ನಿಜವಾದ ವಾಸ್ತವಾಂಶವನ್ನು ಬಿಂಬಿಸುತ್ತದೆ ಎಂದು ಗಹ್ಲೋಟ್ ಹೇಳಿದರು.

ಕಳೆದ ವರ್ಷದ ನ.ನಲ್ಲಿ ಪಾಕಿಸ್ತಾನದ ಸರ್ಕಾರವು ರಕ್ಷಣಾ ಪಡೆಗಳ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್‌ಗೆ ಯಾವುದೇ ಕಾನೂನು ಕ್ರಮಗಳಿಂದ ಜೀವಿತಾವಧಿ ವಿನಾಯಿತಿ ನೀಡುವ 27ನೇ ಸಂವಿಧಾನ ತಿದ್ದುಪಡಿಅವರು ಇಲ್ಲಿ ಉಲ್ಲೇಖಿಸಿದರು.

• ಉದಯವಾಹಿನಿ, ವಿಶ್ವಸಂಸ್ಥೆ

ಪಾಕಿಸ್ತಾನವನ್ನು ಕೈಗೊಂಬೆ ಸರ್ಕಾರ ಎಂದು ಬಣ್ಣಿಸಿರುವ ಭಾರತ, ವಿಶ್ವಸಂಸ್ಥೆಯಲ್ಲಿ ಪಾಕಿಸ್ತಾನ ವಿರುದ್ಧ ತೀವ್ರ ವಾಗ್ದಾಳಿ ನಡೆಸಿತು. ಪಾಕಿಸ್ತಾನದ ಸುಳ್ಳು ಮತ್ತು ವಂಚನೆಯನ್ನು ಟೀಕಿಸಿದ ಭಾರತ, ಇಸ್ಲಾಮಾಬಾದ್‌ನಿಂದ ಮುಂದುವರಿಯುವ ಭಯೋತ್ಪಾದನೆಗೆ ಪರಿಣಾಮ ಎದುರಾಗಲಿದೆ ಎಂದು ಎಚ್ಚರಿಸಿತು. ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ರೈಟ್ ಆಫ್ ರಿಪ್ಲೈ ಬಳಸಿಕೊಂಡು ಪ್ರತಿಕ್ರಿಯಿಸಿದ ಭಾರತ, ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಪಾಕಿಸ್ತಾನ ಪ್ರಧಾನಿ ಶೆಹಬಾಜ್ ಷರೀಫ್ ಮಾಡಿದ ಹೇಳಿಕೆಗಳಿಗೆ ತಿರುಗೇಟು ನೀಡಿತು. 2025ರಲ್ಲಿ ಭಾರತ ಮತ್ತು ಪಾಕಿಸ್ತಾನ ನಡುವಿನ ಸಂಘರ್ಷದ ಸಂದರ್ಭದಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ''ಸಕಾಲಿಕ ಮಧ್ಯಸ್ಥಿಕೆ'ಯನ್ನು ಷರೀಫ್ ಶ್ಲಾಘಿಸಿದ್ದರು. ಅಲ್ಲದೆ, ಅವರು ಮತ್ತೆ ಕಾಶ್ಮೀರ ವಿಷಯವನ್ನೂ ಪ್ರಸ್ತಾಪಿಸಿದ್ದರು.

ವಿಶ್ವಸಂಸ್ಥೆಯಲ್ಲಿನ ಭಾರತದ ಶಾಶ್ವತ ನಿಯೋಗದ ಪ್ರಥಮ ಕಾರ್ಯದರ್ಶಿ ಪೆಟಲ್ ಗೆಹ್ಲೋಟ್, ಪ್ರಜಾಸತ್ತಾತ್ಮಕ ಹಕ್ಕುಗಳು ಮತ್ತು ಮಾನವೀಯ ಮೌಲ್ಯಗಳ ಕುರಿತು ಪಾಕಿಸ್ತಾನ ಮಾಡಿರುವ ಹೇಳಿಕೆಗಳು ಕಪಟ ಉಪದೇಶವಾಗಿದ್ದು, ತನ್ನದೇ ಜನರಿಂದ ರಾಜಧಾನಿಯನ್ನು ಭದ್ರಪಡಿಸಿಕೊಳ್ಳುತ್ತಿರುವ ಸರ್ಕಾರದಿಂದ ಇಂತಹ ಹೇಳಿಕೆಗಳು ಬಂದಿವೆ ಎಂದು ಟೀಕಿಸಿದರು.

ಇದು ಸೇನೆಯ ಸರ್ಕಾರ, ಸೇನೆಯಿಂದ ಮತ್ತು ಸೇನೆಗಾಗಿ ಇರುವ ಸರ್ಕಾರ. ಅವರ ಗೊಂಬೆಗಳು ಬರಬಹುದು, ಹೋಗಬಹುದು. ಆದರೆ ನಿಜವಾಗಿ ಅಧಿಕಾರ ಯಾರ ಕೈಯಲ್ಲಿದೆ ಎಂಬ ಬಗ್ಗೆ ಯಾವುದೇ ಭ್ರಮೆ ಬೇಡ. ಪಾಕಿಸ್ತಾನದ ವಾಸ್ತವವನ್ನು ಅದರ 27ನೇ ಸಂವಿಧಾನ ತಿದ್ದುಪಡಿ ಹಾಗೂ ಅದರ ನೈಜ ಆಡಳಿತಗಾರನಿಗೆ ನೀಡಿರುವ ಜೀವಾವಧಿ ಕಾನೂನು ರಕ್ಷಣೆಯಿಂದ ಅರ್ಥಮಾಡಿಕೊಳ್ಳಬಹುದು ಎಂದು ಗೆಹ್ಲೋಟ್ ಹೇಳಿದರು. ಶೆಹಬಾಜ್ ಷರೀಫ್ ಸರ್ಕಾರ ಕಳೆದ ವರ್ಷ ನವೆಂಬರ್‌ನಲ್ಲಿ ಅಂಗೀಕರಿಸಿದ 27ನೇ ಸಂವಿಧಾನ ತಿದ್ದುಪಡಿಯನ್ನು ಅವರು ಉಲ್ಲೇಖಿಸಿದರು. ಈ ತಿದ್ದುಪಡಿ ಪಾಕಿಸ್ತಾನದ ರಕ್ಷಣಾ ಪಡೆಗಳ ಮುಖ್ಯಸ್ಥ, ಸೇನಾ ಮುಖ್ಯಸ್ಥ ಫೀಲ್ಡ್ ಮಾರ್ಷಲ್ ಅಸಿಮ್ ಮುನೀರ್ ಅವರಿಗೆ ಕಾನೂನು ಕ್ರಮದಿಂದ ಜೀವಾವಧಿ ರಕ್ಷಣೆ ನೀಡುತ್ತದೆ.

**1** ಸೇನೆಯಿಂದ, ಸೇನೆಗಾಗಿ, ಸೇನೆಯದ್ದೇ ಆಡಳಿತ

**2** ಭಯೋತ್ಪಾದನೆಗೆ ಮುಂದಾದ್ರೆ ತಕ್ಕ ಪರಿಣಾಮ ಕಟ್ಟಿಟ್ಟ ಬುತ್ತಿ

**3** ಯುಎನ್‌ನಲ್ಲಿ ಪಾಕಿ ಪ್ರಧಾನಿಯ ಬೆವರಿಳಿಸಿದ ಭಾರತೀಯ ನಿಯೋಗದ ಪ್ರಥಮ ಕಾರ್ಯದರ್ಶಿ

ಈ ಸಭೆಯು ಪಾಕಿಸ್ತಾನ ಮತ್ತು ಅದರ ನೀತಿಗಳನ್ನು ಅವು ನಿಜವಾಗಿರುವ ರೀತಿಯಲ್ಲೇ ಗುರುತಿಸುತ್ತದೆ ಎಂಬ ವಿಶ್ವಾಸ ನಮಗಿದೆ. ಅದರ ಪ್ರತಿನಿಧಿ ಸುಳ್ಳುಗಳನ್ನು ಹೇಳಿ ಬಿಂಬಿಸುವ ರೀತಿಯಲ್ಲಿ ಅಲ್ಲ. ವರ್ಷದಿಂದ ವರ್ಷಕ್ಕೆ ಸುಳ್ಳುಗಳನ್ನು ಪುನರಾವರ್ತಿಸುವುದರಿಂದ ಅವು ಸತ್ಯವಾಗುವುದಿಲ್ಲ.

ಪಾಕಿಸ್ತಾನದ ಭಯೋತ್ಪಾದನೆ, ವಂಚನೆ ಮತ್ತು ದ್ವಂದ್ವ ನೀತಿ ಅದಕ್ಕಾಗಲಿ ಅಥವಾ ಜಗತ್ತಿಗಾಗಲಿ ಯಾವುದೇ ಪ್ರಯೋಜನ ತರುವುದಿಲ್ಲ ಎಂದು ಹೇಳಿದರು.

ವಿಶ್ವಸಂಸ್ಥೆಯ ಸಾಮಾನ್ಯ ಸಭೆಯಲ್ಲಿ ಷರೀಫ್ ತಮ್ಮ ಭಾಷಣದಲ್ಲಿ ಟ್ರಂಪ್ ಅವರ ದೃಢನಿಶ್ಚಯದ ಮತ್ತು ದೂರದೃಷ್ಟಿಯ ನಾಯಕತ್ವವನ್ನು ಶ್ಲಾಘಿಸಿದ್ದರು. ದಕ್ಷಿಣ ಏಷ್ಯಾದಲ್ಲಿ ಕೋಟ್ಯಂತರ ಜೀವಗಳನ್ನು ಉಳಿಸಲು ಅಮೆರಿಕ ಅಧ್ಯಕ್ಷರ ಸಕಾಲಿಕ ಮಧ್ಯಸ್ಥಿಕೆ ನೆರವಾಯಿತು ಎಂದು ಹೇಳಿದ್ದರು. ಸುಮಾರು 23 ನಿಮಿಷಗಳ ಭಾಷಣದಲ್ಲಿ ಷರೀಫ್ ಕಾಶ್ಮೀರ ವಿಷಯವನ್ನೂ ಪ್ರಸ್ತಾಪಿಸಿದ್ದರು. 2025ರಲ್ಲಿ ಉಂಟಾದಂತಹ ಮತ್ತೊಂದು ಸಂಘರ್ಷದ ಅಂಚಿಗೆ ದಕ್ಷಿಣ ಏಷ್ಯಾ ಮತ್ತೆ ತಲುಪದಂತೆ ನ್ಯಾಯಯುತ ಮತ್ತು ಸಮಾನ ಪರಿಹಾರ ಅಗತ್ಯವಿದೆ ಎಂದು ಅವರು ಹೇಳಿದ್ದರು.





ಗೆಹ್ಲೋಟ್, ಷರೀಫ್ ಅವರ ವಿಚಿತ್ರ ಹೇಳಿಕೆಗಳು ನ್ಯೂಯಾರ್ಕ್ ನಗರ ಹಾಗೂ ಜಗತ್ತು ಸೆ.11, 2001ರ ಭಯೋತ್ಪಾದಕ ದಾಳಿಯ 25ನೇ ವಾರ್ಷಿಕೋತ್ಸವವನ್ನು ಆಚರಿಸಿದ ಕೇವಲ ಎರಡು ವಾರಗಳ ಬಳಿಕ ಬಂದಿವೆ.

ಈ ಸಂದರ್ಭವನ್ನು ನೆನಪಿನಲ್ಲಿಟ್ಟುಕೊಳ್ಳುವುದು ಮುಖ್ಯ. ಏಕೆಂದರೆ ಈ ದಾಳಿಯ ರೂವಾರಿ ಒಸಾಮಾ ಬಿನ್ ಲಾಡೆನ್ ಪಾಕಿಸ್ತಾನದ ಸೇನೆಯ ಪ್ರಮುಖ ತರಬೇತಿ ಅಕಾಡೆಮಿಯ ಪಕ್ಕದಲ್ಲೇ ವಾಸಿಸುತ್ತಿದ್ದ ಎಂದು ಗೆಹ್ಲೋಟ್ ಹೇಳಿದರು.

## ಹಾಲಿನ ದರ ಏರಿಕೆ ಸುಳಿವು ನೀಡಿದ ಡಿಕೆಶಿ: ಸಂಪುಟದಲ್ಲಿ ಚರ್ಚಿಸಿ ತೀರ್ಮಾನ, ರೈತರಿಗೆ ಸಿಹಿ, ಗ್ರಾಹಕರಿಗೆ ಕಹಿ?

### ನೆರೆಯ ರಾಜ್ಯಗಳಾದ ತೆಲಂಗಾಣ, ತಮಿಳುನಾಡು, ಆಂಧ್ರಪ್ರದೇಶಗಳಲ್ಲಿನ ಪರಿಸ್ಥಿತಿಯ ಬಗ್ಗೆ ವರದಿಗಳನ್ನು ಪಡೆದು, ಪರಿಶೀಲಿಸಿದ ನಂತರ ಮುಂದಿನ ತೀರ್ಮಾನ

• ಉದಯವಾಹಿನಿ, ಬೆಂಗಳೂರು

**1** ರೈತರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಹಾಲಿನ ದರ ಏರಿಕೆ ಮಾಡಬೇಕು ಎಂಬ ಬೇಡಿಕೆ

**2** ಜಿಲ್ಲಾ ಹಾಲು ಒಕ್ಕೂಟಗಳಿಂದ ಹಾಲಿನ ದರ 12ರೂ. ಹೆಚ್ಚಳ ಮಾಡಬೇಕೆಂಬ ಮನವಿ

**3** ಸಚಿವ ಸಂಪುಟ ಸಭೆಯಲ್ಲಿ ಚರ್ಚೆ ನಡೆಸಿ ಅಂತಿಮ ತೀರ್ಮಾನ ಎಂದ ಸಿಎಂ ಡಿಕೆಶಿ

ಹಾಲಿನ ದರ ಹೆಚ್ಚಳದ ಬಗ್ಗೆ ಸಂಪುಟ ಸಭೆಯಲ್ಲಿ ಚರ್ಚಿಸಿ ಅಂತಿಮ ತೀರ್ಮಾನ ಕೈಗೊಳ್ಳಲಾಗುವುದು ಎಂದು ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ತಿಳಿಸಿದ್ದಾರೆ. ನಗರದ ಫ್ರೀಡಂ ಪಾರ್ಕ್ ಬಳಿ ಶನಿವಾರ ಮಾಧ್ಯಮದವರ ಪ್ರಶ್ನೆಗಳಿಗೆ ಪ್ರತಿಕ್ರಿಯಿಸಿದ ಸಿಎಂ, ಹಾಲಿನ ದರ ಏರಿಕೆ ವಿಚಾರವಾಗಿ ಉತ್ತರಿಸಿ, ಜಿಲ್ಲ ಹಾಲು ಒಕ್ಕೂಟಗಳ ಅಧ್ಯಕ್ಷರು ನನ್ನನ್ನು ಭೇಟಿಯಾಗಿ ಲೀಟರ್‌ಗೆ 12 ರೂ. ಹೆಚ್ಚಳ ಮಾಡಿ. ಅದರಲ್ಲಿ 2 ರೂ. ಸಂಘಗಳಿಗೆ ಕೊಡಿ ಎಂದು ಮನವಿ ಮಾಡಿದ್ದಾರೆ. ನೆರೆಯ ರಾಜ್ಯಗಳಾದ ತೆಲಂಗಾಣ, ತಮಿಳುನಾಡು, ಆಂಧ್ರ ಪ್ರದೇಶಗಳಲ್ಲಿನ ಪರಿಸ್ಥಿತಿಯ ಬಗ್ಗೆ ವರದಿಗಳನ್ನು ಪಡೆದು, ಪರಿಶೀಲಿಸಿದ ನಂತರ ಮುಂದಿನ ತೀರ್ಮಾನ ಮಾಡುತ್ತೇವೆ ಎಂದು ಹೇಳಿದರು.

ಪ್ರಸ್ತುತ ಹಾಲಿನ ದರದಿಂದ ಸಂಘಗಳಿಗೆ ನಷ್ಟವಾಗುತ್ತಿದೆ. ಬೆಲೆ ವಿಚಾರದಲ್ಲಿ ರೈತರಲ್ಲಿ ಆಕ್ರೋಶವಿದೆ. 50 ಸಾವಿರ ಹಾಲು ಉತ್ಪಾದಕರು ಹಾಲಿನ ದರ ಏರಿಕೆಗೆ ಆಗ್ರಹಿಸಿದ್ದಾರೆ. ರೈತರು ಹಾಗೂ ಒಕ್ಕೂಟಗಳನ್ನು ರಕ್ಷಿಸಲು ನಮ್ಮ ಸರ್ಕಾರ ಬದ್ಧವಾಗಿದೆ. ಈ ನಿಟ್ಟಿನಲ್ಲಿ ಅಗತ್ಯ ಕ್ರಮ ಕೈಗೊಳ್ಳಲಿದ್ದೇವೆ ಎಂದರು. ಹಾಲಿನ ದರ ಹೆಚ್ಚಳಕ್ಕೆ ಒತ್ತಾಯಿಸಿ ಜಿಲ್ಲಾ ಒಕ್ಕೂಟ ಅಧ್ಯಕ್ಷರು ಇಂದು ಬೆಳಗ್ಗೆ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಮನವಿ ಸಲ್ಲಿಸಿದರು.

ಸಿಎಂ ಭೇಟಿ ಬಳಿಕ ಮಾಧ್ಯಮಗಳೊಂದಿಗೆ ಮಾತನಾಡಿದ್ದ ಬಮೂಲ್



ಅಧ್ಯಕ್ಷ ಡಿ.ಕೆ.ಸುರೇಶ್, ಮೂರು ತಿಂಗಳ ಹಿಂದೆ ಯುದ್ದದಿಂದಾಗಿ ಪೆಟ್ರೋಲ್, ಡಿಸೇಲ್ ಸೇರಿ ಅಗತ್ಯ ದಿನಬಳಕೆ ವಸ್ತುಗಳ ಬೆಲೆ ಏರಿಕೆಯಾಗಿದೆ. ಇದು ರೈತ, ಹಾಲು ಉತ್ಪಾದಕರ ಮೇಲೆ ಪರಿಣಾಮ ಬೀರುತ್ತಿದೆ. ಹಾಲು ಉತ್ಪಾದನೆಯಲ್ಲಿ ಮುಂಚೂಣಿಯಲ್ಲಿರುವ ರಾಜಸ್ಥಾನ, ಗುಜರಾತ್, ಮಹಾರಾಷ್ಟ್ರ ರಾಜ್ಯಗಳು ನಾಲ್ಕು ತಿಂಗಳ ಹಿಂದೆಯೇ ಹಾಲಿನ ಬೆಲೆ ಹೆಚ್ಚಿಸಿವೆ. ರಾಜ್ಯದಲ್ಲಿ ದರ ಏರಿಸಬೇಕೆಂದು ಹಾಲು ಒಕ್ಕೂಟಗಳು ಎರಡು ತಿಂಗಳಿಂದ ಪ್ರತಿಭಟನೆ ನಡೆಸಿದ್ದವು. ಅದಾಗ್ಯೂ ರೈತರು ಬೆಂಗಳೂರಿನಲ್ಲಿ ದೊಡ್ಡದಾಗಿ ಪ್ರತಿಭಟನೆ ಮಾಡಿದ್ದರು. ಲೀಟರ್‌ಗೆ 10 ರೂ. ಹೆಚ್ಚಿಸಬೇಕು ಎಂಬ ರೈತರು ಹಾಗೂ ಒಕ್ಕೂಟಗಳ ಮನವಿಗೆ ಸರ್ಕಾರ ಸ್ಪಂದಿಸಬೇಕು ಎಂದು ತಿಳಿಸಿದರು.

### ಪರಿಷತ್‌ನಲ್ಲಿ ನಡೆದಿದ್ದ ಚರ್ಚೆ

ಹಾಲಿನ ದರ ಏರಿಕೆಯ ಕುರಿತಾಗಿ ವಿಧಾನಪರಿಷತ್‌ನಲ್ಲಿ ಚರ್ಚೆ ನಡೆದಿತ್ತು. ಕಾಂಗ್ರೆಸ್ ಸದಸ್ಯ ಎಸ್ ರವಿ ಅವರು ಹಾಲಿನ ದರ ಏರಿಕೆ ಮಾಡುವಂತೆ ಮನವಿ ಮಾಡಿದ್ದರು. ರೈತರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಹಾಲಿನ ದರವನ್ನು 12 ರಷ್ಟು ಏರಿಕೆ ಮಾಡಲು ಮನವಿ ಮಾಡಲಾಗಿತ್ತು. ಅಲ್ಲದೆ ಇದೇ ಸಂದರ್ಭದಲ್ಲಿ ಎಚ್‌ಡಿ ಕುಮಾರಸ್ವಾಮಿ ಅವರ ಬೆಂಬಲವೂ ಬೇಕು ಎಂಬ ಅರ್ಥದಲ್ಲಿ ಎಸ್ ರವಿ ಜೆಡಿಎಸ್ ಸದಸ್ಯರಲ್ಲೂ ಮನವಿ ಮಾಡಿಕೊಂಡಿದ್ದರು. ರೈತರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ಈ ಕ್ರಮ ಕೈಗೊಳ್ಳಬೇಕು ಎಂದು ಮನವಿ ಮಾಡಿದ್ದರು.ಈ ನಡುವೆ ಸಿಎಂ ಡಿಕೆ ಶಿವಕುಮಾರ್ ಅವರು ಹಾಲಿನ ದರ ಏರಿಕೆ ಮಾಡುವ ಬಗ್ಗೆ ಸುಳಿವು ನೀಡಿದ್ದಾರೆ. ದರ ಏರಿಕೆ ಆದರೆ ರೈತರಿಗೆ ಇದರಿಂದ ಅನುಕೂಲ ಆಗಲಿದೆ. ಆದರೆ, ಗ್ರಾಹಕರ ಮೇಲೆ ಮತ್ತಷ್ಟು ಬರೆ ಬೀಳಲಿದೆ. ಆದರೆ ರೈತರಿಗೆ ಅನುಕೂಲ ಆಗುವ ನಿಟ್ಟಿನಲ್ಲಿ ದರ ಏರಿಕೆ ಮಾಡಬೇಕು ಎಂಬ ಮನವಿಯನ್ನು ಎಸ್ ರವಿ ಅವರು ಮಾಡಿದ್ದಾರೆ. ಹಾಗಾಗಿ ಸರ್ಕಾರ ನಿರ್ಧಾರ ಏನು ಎಂಬುವುದು ಸದ್ಯಕ್ಕೆ ಕುತೂಹಲ.



**ಈ ದಿನದ ದರ** ಪೆಟ್ರೋಲ್: 111.68₹/L ಡೀಸೆಲ್ : 99.56₹/L ಬಂಗಾರ: ₹ 15,268/Gram 24ct ₹ 13,995 /Gram 22ct ಬೆಳ್ಳಿ: ₹235.00/

# ಸತ್ತವರ ಹೆಸರಲ್ಲೂ ಸಾಲ ಮಂಜೂರು! ಹುಂಡೀಪುರ ಸಹಕಾರ ಸಂಘದ ಅಧ್ಯಕ್ಷರಿಂದ ಗಂಭೀರ ಆರೋಪ

• ಉದಯವಾಹಿನಿ, ಗುಂಡ್ಲುಪೇಟೆ

ನಕಲಿ ದಾಖಲೆಗಳನ್ನು ಸೃಷ್ಟಿಸಿ ಹುಂಡೀಪುರ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದಿಂದ ಕೋಟ್ಯಂತರ ರೂಪಾಯಿ ಸಾಲ ಮಂಜೂರು ಮಾಡಲಾಗಿದೆ ಎಂದು ಆರೋಪಿಸಿರುವ ಸಂಘದ ಅಧ್ಯಕ್ಷ ವೀರಪ್ಪ, ಪ್ರಕರಣದಲ್ಲಿ ಭಾಗಿಯಾಗಿರುವ ಎಲ್ಲರ ವಿರುದ್ಧ ಎಫ್‌ಐಆರ್ ದಾಖಲಿಸಿ ಉನ್ನತ ಮಟ್ಟದ ತನಿಖೆ ನಡೆಸಬೇಕು ಎಂದು ಆಗ್ರಹಿಸಿದರು.

ಪಟ್ಟಣದ ಪ್ರವಾಸಿಮಂದಿರದಲ್ಲಿ ದಾಖಲೆಗಳನ್ನ ಪ್ರದರ್ಶಿಸಿ ಮಾತನಾಡಿದ ಅವರು, ತಾವು ಸಂಘದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಪಾಸ್‌ಬುಕ್ ಎಂಟ್ರಿ ಮಾಡಿಸುವ ವೇಳೆ, ಆಡಳಿತ ಮಂಡಳಿಯ ಗಮನಕ್ಕೂ ಬಾರದಂತೆ ಮಾ.29 ರಂದು 1.72 ಕೋಟಿ ಸಾಲ ಮಂಜೂರಾಗಿರುವುದು ಬೆಳಕಿಗೆ ಬಂದಿದೆ ಎಂದು ಹೇಳಿದರು.


ಉದಯವಾಹಿನಿ ಚಿತ್ರ

ದಾಖಲೆ ಪರಿಶೀಲಿಸಿದಾಗ ಸಾಲ ಪಡೆದ 68 ಫಲಾನುಭವಿಗಳ ಪೈಕಿ ಕೆಲವರು ಈ ಹಿಂದೆಯೇ ಮೃತಪಟ್ಟವರಾಗಿದ್ದು, ಮತ್ತೆ ಕೆಲವರ ಹೆಸರಿನಲ್ಲಿ ಆರ್‌ಟಿಸಿ ದಾಖಲೆಗಳೇ ಇಲ್ಲ ಎಂದು ಆರೋಪಿಸಿದರು.ಈ ಕುರಿತು ಜೂ.26 ರಂದು ಸಹಕಾರ ಇಲಾಖೆಯ ಕಾರ್ಯನಿರ್ವಾಹಕ ಅಧಿಕಾರಿಗಳಿಗೆ ಲಿಖಿತ ದೂರು ನೀಡಿದ್ದರೂ ಒಂದು ತಿಂಗಳಾದರೂ ಕ್ರಮ ಕೈಗೊಂಡಿಲ್ಲ ಎಂದು ವೀರಪ್ಪ ದೂರಿದರು. ಅಕ್ರಮವಾಗಿ ಮಂಜೂರಾಗಿದ್ದ 1.12 ಕೋಟಿ ಹಣವನ್ನು ಮರುಪಾವತಿಸಿಕೊಂಡಿರುವುದಾಗಿ ತಿಳಿಸಿದ ಅವರು, ಅಕ್ರಮದ ಕುರಿತು ಮಾಹಿತಿ ನೀಡಿದ ಬಳಿಕವೂ ತಪ್ಪಿತಸ್ಥರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವ ಬದಲು ಎಂಡಿಸಿಸಿ ಬ್ಯಾಂಕ್‌ನ ಮ್ಯಾನೇಜರ್ ಶಿವಪ್ರಸಾದ್, ಸೂಪರ್‌ವೈಸರ್ ಕಾರ್ತಿಕ್ ಅವರನ್ನ ಮಾತ್ರ ಅಮಾನತುಗೊಳಿಸಲಾಗಿದೆ ಎಂದು ಆರೋಪಿಸಿದರು. ಸಾಲ ಮಂಜೂರಾತಿಗೂ ಮುನ್ನ ಹಾಗೂ ನಂತರ ನಡೆದ ಸಭೆಗಳ ನಡಾವಳಿಗಳಲ್ಲಿ ತಮ್ಮ ಸೇರಿದಂತೆ ನಿರ್ದೇಶಕರ ಸಹಿಗಳನ್ನು ನಕಲು ಮಾಡಲಾಗಿದೆ ಎಂದು ದಾಖಲೆಗಳನ್ನು ಪ್ರದರ್ಶಿಸಿದ ವೀರಪ್ಪ, ಸಂಘದ ಅರ್ಜಿ ಹಾಗೂ ದಾಖಲೆಗಳನ್ನ ಪರಿಶೀಲಿಸಬೇಕಾದ ಎಂಡಿಸಿಸಿ ಬ್ಯಾಂಕ್ ಮತ್ತು ಒಕ್ಕೂಟದ ಅಧಿಕಾರಿಗಳೂ ಅಕ್ರಮದಲ್ಲಿ ಶಾಮೀಲಾಗಿರುವ ಶಂಕೆ ವ್ಯಕ್ತಪಡಿಸಿದರು. ಈ ಪ್ರಕರಣದಲ್ಲಿ ತಮ್ಮ ಪಾತ್ರವೂ ಇದ್ದರೆ ತನಿಖೆ ನಡೆಸಿ ಕಾನೂನು ಕ್ರಮ ಕೈಗೊಳ್ಳಲಿ. ಇಂತಹ ಅಕ್ರಮಗಳು ಇತರೆ ಸಹಕಾರ ಸಂಘಗಳಲ್ಲೂ ನಡೆದಿರುವ ಸಾಧ್ಯತೆಯಿದ್ದು, ಸರ್ಕಾರದ ಹಣ ದುರ್ಬಳಕೆಯಾಗಿರುವ ಬಗ್ಗೆ ತನಿಖೆ ಅಗತ್ಯವಾಗಿದೆ. ಇಲ್ಲದಿದ್ದರೆ ನ್ಯಾಯಾಲಯದ ಮೊರೆ ಹೋಗುವುದಾಗಿ ಎಚ್ಚರಿಕೆ ನೀಡಿದರು.ಈ ವೇಳೆ ಮಾಜಿ ಶಾಸಕ ಬಿಜೆಪಿ ಚಾಮರಾಜನಗರ ಜಿಲ್ಲಾಧ್ಯಕ್ಷ ಸಿ.ಎಸ್.ನಿರಂಜನ್ ಕುಮಾರ್, ಮಂಡಲ ಅದ್ಯಕ್ಷ ಮಹದೇವಪ್ರಸಾದ್, ಪೀಕಾರ್ಡ್ ಬ್ಯಾಂಕ್ ಅದ್ಯಕ್ಷ ಮಾಡ್ರಹಳ್ಳಿ ನಾಗೇಂದ್ರ, ಎಸ್ಸಿ ಮೋರ್ಚಾ ಚಾಮರಾಜನಗರ ಜಿಲ್ಲಾಧ್ಯಕ್ಷ ಡಾ.ನವೀನ್ ಮೌರ್ಯ, ಜಿಲ್ಲಾ ಉಪಾಧ್ಯಕ್ಷ ಕಣ್ಣೇಗಾಲ ಸ್ವಾಮಿ, ಪುರಸಭಾ ಮಾಜಿ ಅಧ್ಯಕ್ಷ ಎಲ್.ಸುರೇಶ್, ನಾಗೇಶ್, ಬಸವರಾಜು, ಮಂಜು ಶಿಂಡನಪುರ, ನಮೋ ಮಂಜು ಶಿವಪುರ, ಯೋಗೇಶ್ ಹುಂಡೀಪುರ, ವೆಂಕಟೇಶ್, ನಂಜಪ್ಪ ಹಾಜರಿದ್ದರು.

# ಬಿತ್ತನೆ ಮಾಡಿದ್ದ ಅರ್ಧಕ್ಕಿಂತಲೂ ಅಧಿಕ ಬೆಳೆ ನಷ್ಟ, ಹಾಕಿದ ಬಂಡವಾಳವೂ ಕೈ ಸೇರಲ್ಲ ಎಂದು ರೈತರ ಅಳಲು

## ಚಾಮರಾಜನಗರ ಜಿಲ್ಲೆಯಲ್ಲಿ ಬರ ಮಿತಿ ಮೀರಿದ್ದು, ಬೇಸಿಗೆ ಮುನ್ನವೇ ಕುಡಿಯುವ ನೀರಿನ ಸಮಸ್ಯೆ ಉಲ್ಬಣಿಸಿದೆ. ಬೋರ್‌ವೆಲ್‌ನಲ್ಲಿ ನೀರಿಲ್ಲವಾಗಿದೆ.

• ಉದಯವಾಹಿನಿ, ಚಾಮರಾಜನಗರ

**1** ಯಳಂದೂರು ತಾಲ್ಲೂಕನ್ನು ತೀವ್ರ ಬರಪೀಡಿತ ತಾಲ್ಲೂಕು ಎಂದು ಘೋಷಣೆ

**2** ಜಿಲ್ಲೆಯಲ್ಲಿ ಮುಂಗಾರು ಮಳೆಯ ಅಭಾವ

**3** ಬಿತ್ತನೆ ಮಾಡಿದ್ದ ಅಧಿಕ ಬೆಳೆ ನಷ್ಟ

ಜಿಲ್ಲೆ ಬರದಿಂದ ತತ್ತರಿಸಿದೆ. ಜಾನುವಾರುಗಳ ಮೇವಿಗೂ ಪರಿತಪಿಸುವ ಸ್ಥಿತಿ ನಿರ್ಮಾಣವಾಗಿದೆ. ಮೇವನ್ನು ಹಣ ಕೊಟ್ಟು ಖರೀದಿಸಬೇಕಿದೆ. ನೀರಾವರಿ ಭೂಮಿ ಹೊಂದಿರುವವರು ಕೂಡ ಬಿತ್ತನೆ ಮಾಡಿ ಕೈ ಸುಟ್ಟುಕೊಂಡಿದ್ದಾನೆ. ಜಾನುವಾರಿಗೆ ಮೇವು ಸಿಗುತ್ತಿಲ್ಲ. ಹಸುಗಳನ್ನು ಮಾರಾಟ ಮಾಡಲಾಗುತ್ತಿದೆ. ಕೊಳ್ಳುವವರು ಕೂಡ ಇಲ್ಲದಾಗಿದೆ ಎಂದು ಜಿಲ್ಲೆಯ ರೈತರು ತಮ್ಮ ಅಳಲು ತೋಡಿಕೊಂಡಿದ್ದಾರೆ.

ರಾಜ್ಯ ಸರ್ಕಾರವು ಮೊದಲ ಪಟ್ಟಿಯಲ್ಲಿಯೇ ಚಾಮರಾಜನಗರ ಜಿಲ್ಲೆಯ ಐದೂ ತಾಲೂಕುಗಳಾದ ಹನೂರು, ಕೊಳ್ಳೇಗಾಲ, ಚಾಮರಾಜನಗರ, ಗುಂಡ್ಲುಪೇಟೆ ಯಳಂದೂರು ತಾಲ್ಲೂಕನ್ನು ತೀವ್ರ ಬರಪೀಡಿತ ತಾಲ್ಲೂಕು ಎಂದು ಘೋಷಣೆ ಮಾಡಿದೆ. ಶೀಘ್ರದಲ್ಲಿಯೇ ಕೇಂದ್ರದ ಬರ ಅಧ್ಯಯನ ತಂಡವು ಜಿಲ್ಲೆಗೆ ಆಗಮಿಸಲಿದೆ ಎಂದು ಜಂಟಿ ಕೃಷಿ ನಿರ್ದೇಶಕ ಭಾನುಪ್ರಕಾಶ್ ಮಾಹಿತಿ ನೀಡಿದ್ದಾರೆ.

ಜಿಲ್ಲೆಯಲ್ಲಿ ಮುಂಗಾರು ಮಳೆಯ ಅಭಾವದಿಂದಾಗಿ ರೈತರು ತತ್ತರಿಸಿದ್ದು, ಬಿತ್ತನೆ ಮಾಡಿದ್ದ ವಿಸ್ತೀರ್ಣದಲ್ಲಿ ಅರ್ಧಕ್ಕಿಂತಲೂ ಅಧಿಕ ಬೆಳೆ ನಷ್ಟವಾಗಿದೆ. ಸಾವಿರಾರು ಎಕರೆ ಪ್ರದೇಶದಲ್ಲಿ ಬೆಳೆ ಹಾನಿಯಾಗಿದ್ದು, ನೀರಾವರಿ ಭೂಮಿಯಲ್ಲೂ ಇದೇ ಪರಿಸ್ಥಿತಿ ಇದೆ.


ಉದಯವಾಹಿನಿ ಚಿತ್ರ

ಜನವರಿಯಿಂದ ಆಗಸ್ಟ್ ತಿಂಗಳಲ್ಲಿ ಜಿಲ್ಲೆಗೆ 396.8 ಮಿಲಿಮೀಟರ್ ವಾಡಿಕೆ ಮಳೆಯಾಗಬೇಕಿತ್ತು. ಆದರೆ, 271 ಮಿಲಿಮೀಟರ್ ಮಳೆ ಮಾತ್ರ ಆಗಿದೆ. ಮುಂಗಾರು ಮಳೆಗಾಲವಾದ ಜೂನ್, ಜುಲೈ ಹಾಗೂ ಆಗಸ್ಟ್ ತಿಂಗಳಲ್ಲಿ 193 ಮಿಲಿಮೀಟರ್ ವಾಡಿಕೆ ಮಳೆಗೆ 87 ಮಿಲಿಮೀಟರ್ ಮಳೆ ಮಾತ್ರ ಆಗುವ ಮೂಲಕ ಶೇ.55ರಷ್ಟು ಮಳೆ ಕೊರತೆ ಉಂಟಾಗಿದೆ. ಅದರಲ್ಲೂ ಜುಲೈನಲ್ಲಿ ಶೇ.69ರಷ್ಟು ಮಳೆ ಕೊರತೆ ಇದ್ದರೇ ಆಗಸ್ಟ್ ತಿಂಗಳಲ್ಲಿ ಶೇ.76ರಷ್ಟು ಮಳೆ ಕೊರತೆ ಉಂಟಾಗಿದೆ.ಜಿಲ್ಲೆಯಲ್ಲಿ ಪೂರ್ವ ಮುಂಗಾರು, ಮುಂಗಾರಿನಲ್ಲಿ 98,768 ಹೆಕ್ಟೇರ್‌ನಷ್ಟು ಕೃಷಿ ಬೆಳೆ ವಿಸ್ತೀರ್ಣವಿದ್ದು, ಆಗಸ್ಟ್ ಅಂತ್ಯದವರೆಗೆ 49 ಸಾವಿರ ಹೆಕ್ಟೇರ್‌ನಷ್ಟು ಭೂಮಿಯಲ್ಲಿ ಜೋಳ, ಸೂರ್ಯಕಾಂತಿ, ಅರಿಶಿಣ, ದ್ವಿದಳ ಧಾನ್ಯಗಳು ಬಿತ್ತನೆ ಮಾಡಲಾಗಿತ್ತು.

ಇದರಲ್ಲಿ 41 ಸಾವಿರ ಹೆಕ್ಟೇರ್‌ಗಿಂತಲೂ ಅಧಿಕ ಪ್ರದೇಶದಲ್ಲಿ ಬೆಳೆ ನಷ್ಟವಾಗಿದೆ. 11,500 ಹೆಕ್ಟೇರ್‌ನಲ್ಲಿ ಬಿತ್ತನೆ ಮಾಡಿದ್ದ ಸೂರ್ಯಕಾಂತಿ ಇಳುವರಿ ಬರದೇ ತತ್ತರಿಸಿದೆ. 14 ಸಾವಿರ ಹೆಕ್ಟೇರ್ ಜೋಳ, 6 ಸಾವಿರ ಹೆಕ್ಟೇರ್ ಮುಸುಕಿನ ಜೋಳ ಇದರೊಟ್ಟಿಗೆ ನೆಲಗಡಲೆ, ಎಳ್ಳು, ದ್ವಿದಳ ಧಾನ್ಯಗಳ ಬೆಳೆ ನಷ್ಟವಾಗಿದೆ ಎಂದು ಚಾಮರಾಜನಗರ ಕೃಷಿ ಇಲಾಖೆ ಜಂಟಿ ನಿರ್ದೇಶಕ ಭಾನುಪ್ರಕಾಶ್ ತಿಳಿಸಿದ್ದಾರೆ.

### ಪರಿಹಾರಕ್ಕೆ ಪ್ರಸ್ತಾವನೆ ಸಲ್ಲಿಕೆ

ಜಿಲ್ಲೆಯಲ್ಲಿ ಉಂಟಾದ ಬರ ಪರಿಸ್ಥಿತಿಗೆ ಸರ್ಕಾರದ ನಮೂನೆಗಳಡಿ ಪರಿಕರ ಸಹಾಯಧನಕ್ಕಾಗಿ ಕೃಷಿ ಇಲಾಖೆ ಬೆಳೆ ನಷ್ಟಕ್ಕೆ ಪ್ರಸ್ತಾವನೆ ಸಲ್ಲಿಸಿದೆ. ಎನ್‌ಡಿಆರ್‌ಎಫ್ ಮಾರ್ಗಸೂಚಿ ಪ್ರಕಾರ ಮಳೆಯಾಶ್ರಿತ ಪ್ರತಿ ಹೆಕ್ಟೇರ್ ಭೂಮಿಗೆ 8,500, ನೀರಾವರಿಗೆ 17,000 ಹಾಗೂ ದೀರ್ಘಾವಧಿ ಬೆಳೆ ಪ್ರತಿ ಹೆಕ್ಟೇರ್‌ಗೆ 22,500ರಂತೆ ಒಟ್ಟು 83.76 ಕೋಟಿ ರೂಪಾಯಿಗೂ ಅಧಿಕ ಪರಿಹಾರ ಧನಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

> ಬೋರ್‌ವೆಲ್ ಕೆಟ್ಟ ಪರಿಣಾಮ ಅಂತರ್ಜಲ ಕುಸಿದು ನೀರಿನ ಮೂಲಗಳು ಬರಿದಾಗುತ್ತಿವೆ. ಹಾಗಾಗಿ ಹಳ್ಳ-ತೊರೆಗಳನ್ನು ಹುಡುಕಿ ನೀರು ತರಬೇಕಿದೆ. ಸಂಬಂಧಪಟ್ಟ ಅಧಿಕಾರಿಗಳು ಸಮಸ್ಯೆ ಬಗೆಹರಿಸಿ. - ಮಾದೇಶ್, ಇಂಡಿಗನತ್ತ ಗ್ರಾಮಸ್ಥ

> ಜಾನುವಾರುಗಳಿಗೆ ಮೇವು ಪೂರೈಕೆ ಮಾಡುವುದೇ ಬಲು ಕಷ್ಟವಾಗಿದೆ. ಮೇವು ಪೂರೈಕೆ ಹಾಗೂ ಕುಡಿಯುವ ನೀರಿನ ವ್ಯವಸ್ಥೆಯನ್ನು ಜರೂರಾಗಿ ಮಾಡಬೇಕು. ರೈತ ಮೊದಲೇ ನಷ್ಟದಲ್ಲಿದ್ದು, ಬದಲಿ ಉದ್ಯೋಗವನ್ನಾದರೂ ಈ ಬರಗಾಲದಲ್ಲಿ ನೀಡಬೇಕು.
> - ಶಶಿ, ಯುವ ರೈತ, ಗುಂಡ್ಲುಪೇಟೆ

# ಕೊಡಗಿನಲ್ಲಿ ಕಂದು ಬಣ್ಣಕ್ಕೆ ತಿರುಗಿದ ಮಳೆ ನೀರು ಸ್ಥಳೀಯರ ಆತಂಕ

• ಉದಯವಾಹಿನಿ, ಮಡಿಕೇರಿ

ಕೊಡಗು ಜಿಲ್ಲೆಯಲ್ಲಿ ಗುರುವಾರ ಮಧ್ಯಾಹ್ನ ಆರಂಭಗೊಂಡ ಮಳೆ ಸಹ ಮುಂದುವರೆದಿದೆ. ಇದರ ನಡುವೆಯೇ ಜಿಲ್ಲೆಯ ಕೆಲವು ಭಾಗಗಳಲ್ಲಿ ಮಳೆ ನೀರು ಕಂದು ಬಣ್ಣಕ್ಕೆ ತಿರುಗಿರುವುದು ಸ್ಥಳೀಯರ ಆತಂಕಕ್ಕೆ ಕಾರಣವಾಗಿದೆ.

ಮಡಿಕೇರಿ ತಾಲೂಕಿನ ಎಮ್ಮೆಮಾಡು, ಮರುಗೋಡು ಸೇರಿದಂತೆ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಕಂದು ಬಣ್ಣದ ಮಳೆನೀರು ಕಂಡುಬಂದಿದೆ. ಇದಕ್ಕೆ ಕಾರಣವೇನು ಎಂಬ ಬಗ್ಗೆ ಸ್ಥಳೀಯರಲ್ಲಿ ಚರ್ಚೆ ಶುರುವಾಗಿದೆ. ಸಾಮಾನ್ಯವಾಗಿ ಪಾರದರ್ಶಕವಾಗಿ ಕಾಣುವ ಮಳೆನೀರು ಕೆಲವೆಡೆ ಕಂದು ಬಣ್ಣಕ್ಕೆ ತಿರುಗಿರುವುದು ಕಂಡುಬಂದಿದೆ. ಇದಕ್ಕೆ ಕಾರಣವೇನು ಎಂಬ ಬಗ್ಗೆ ಸ್ಥಳೀಯರಲ್ಲಿ ಗೊಂದಲ ಉಂಟಾಗಿದೆ. ಮೋಡ ಬಿತ್ತನೆ ಮಾಡಲಾಗಿದೆಯೇ? ಮೋಡ ಬಿತ್ತನೆಯಿಂದಲೇ ಮಳೆನೀರು ಕಂದು ಬಣ್ಣಕ್ಕೆ ತಿರುಗಿದೆಯೇ? ಎಂಬ ಚರ್ಚೆಯೂ ಇದೀಗ ನಡೆಯುತ್ತಿದೆ. ಆದರೆ ಮಳೆನೀರಿನ ಬಣ್ಣ ಬದಲಾವಣೆಗೆ ಹಲವು ನೈಸರ್ಗಿಕ ಕಾರಣಗಳಿರುವ ಸಾಧ್ಯತೆಯಿದೆ. ಮಳೆಯ ವೇಳೆ ಗಾಳಿಯಲ್ಲಿರುವ ಧೂಳು, ಮಣ್ಣಿನ ಸೂಕ್ಷ್ಮ ಕಣಗಳು ಸೇರಿದಂತೆ ವಿವಿಧ ಕಣಗಳು ಮಳೆಯೊಂದಿಗೆ ಕೆಳಗೆ ಬರುವುದರಿಂದ ನೀರಿನ ಬಣ್ಣ ಬದಲಾಗುವ ಸಾಧ್ಯತೆ ಇದೆ. ಮಳೆ ನೀರಿನ ಬಣ್ಣ ಬದಲಾವಣೆಗೆ ನಿಖರ ಕಾರಣವೇನು ಎಂಬ ಬಗ್ಗೆ ವೈಜ್ಞಾನಿಕ ಪರಿಶೀಲನೆಯ ಬಳಿಕವಷ್ಟೇ ಸ್ಪಷ್ಟವಾಗಬೇಕಿದೆ. ಹೀಗಾಗಿ ಕಂದು ಬಣ್ಣಕ್ಕೆ ತಿರುಗಿದ ಮಳೆ ನೀರಿನ ಮಾದರಿಯನ್ನು ಪರಿಶೀಲಿಸಿ, ಬಣ್ಣ ಬದಲಾವಣೆಯ ನೈಜ ಕಾರಣವನ್ನು ಪತ್ತೆಹಚ್ಚಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.


ಉದಯವಾಹಿನಿ ಚಿತ್ರ

# ದಸರಾ ಗಜಪಡೆಗೆ ಮರದ ಅಂಬಾರಿ ತಾಲೀಮು ಆರಂಭ

• ಉದಯವಾಹಿನಿ, ಮೈಸೂರು

ಜಂಬೂಸವಾರಿಯ ಮೆರವಣಿಗೆಯ ಚಿನ್ನದ ಅಂಬಾರಿ ಹೊರುವ ಕ್ಯಾಪ್ಟನ್ ಆಯ್ಕೆಯ ಪ್ರಕ್ರಿಯೆ ಭರದಿಂದ ಸಾಗಿದೆ. ಮಹೇಂದ್ರ ಆನೆಗೆ ಮರದ ಅಂಬಾರಿ ಹೊರುವ ತಾಲೀಮನ್ನು ಶುಕ್ರವಾರ ಸಾಂಪ್ರದಾಯಿಕವಾಗಿ ಪೂಜೆ ಸಲ್ಲಿಸುವ ಮೂಲಕ ಆರಂಭಿಸಲಾಗಿದೆ.ವಿಶ್ವವಿಖ್ಯಾತ ನಾಡಹಬ್ಬ ಮೈಸೂರು ದಸರಾ ಮಹೋತ್ಸವಕ್ಕೆ ದಿನಗಣನೆ ಆರಂಭವಾಗಿದ್ದು, ಗಜಪಡೆಯ ಮಹೇಂದ್ರ ಆನೆಗೆ ಮೊದಲ ಬಾರಿಗೆ ಮರದ ಅಂಬಾರಿಯನ್ನು ಹೊರಿಸುವ ಮೂಲಕ ಮೂರನೇ ಹಂತದ ತಾಲೀಮನ್ನು ಪ್ರಾರಂಭಿಸಲಾಗಿದೆ. ಸಂಪ್ರದಾಯದಂತೆ ಮರದ ಅಂಬಾರಿ ಕಟ್ಟುವುದಕ್ಕೂ ಮೊದಲು ಅರ್ಚಕ ಪ್ರಹ್ಲಾದ್ ರಾವ್ ನೇತೃತ್ವದಲ್ಲಿ ದಸರಾ ಗಜಪಡೆಯ ಎಲ್ಲಾ ಆನೆಗಳಿಗೆ ಪೂಜೆ ಸಲ್ಲಿಸಲಾಗಿದೆ.


ಉದಯವಾಹಿನಿ ಚಿತ್ರ

**ಡಿಸಿಎಫ್ ಪ್ರತಿಕ್ರಿಯೆ:** ಮೊದಲ ಹಂತದ ಲೇನ್ ತಾಲೀಮನ್ನು ಗಜಪಡೆಯ ಎಲ್ಲಾ ಆನೆಗಳು ತುಂಬಾನೇ ಚೆನ್ನಾಗಿ ಮಾಡಿವೆ. ಈಗಾಗಲೇ ಭಾರ ಹೊರುವ ತಾಲೀಮನ್ನು ಐದೂ ಆನೆಗಳು ಯಶಸ್ವಿಯಾಗಿ ಪೂರ್ಣಗೊಳಿಸಿವೆ. ಈಗ ಮೂರನೇ ಹಂತದ ತಾಲೀಮಿನ ಭಾಗ ನಡೆಯುತ್ತಿದೆ. ಮರದ ಅಂಬಾರಿಯನ್ನು ಕಟ್ಟಿ ವಿಜಯದಶಮಿಯಂದು ಅಂಬಾರಿ ಹೊರುವ ಸಂದರ್ಭದಲ್ಲಿರುವ ನಿರ್ದಿಷ್ಟ 1,000 ಕೆಜಿ (ಅಂಬಾರಿ 750 ಕೆಜಿ, ನಮ್ದಾ ಗಾದಿ 250 ಕೆಜಿ) ಭಾರ ಹೊರಿಸುವ ತಾಲೀಮನ್ನು ಪ್ರಾರಂಭಿಸಲಾಗಿದೆ. ಸುಗ್ರೀವ, ಮಹೇಂದ್ರ, ಧನಂಜಯ, ಏಕಲವ್ಯ ಹಾಗೂ ಪ್ರಶಾಂತ ಐದೂ ಆನೆಗಳಿಗೂ ಮರದ ಅಂಬಾರಿ ಕಟ್ಟಿ ತಾಲೀಮು ನಡೆಸಲಾಗುವುದು. ಈ ಐದೂ ಆನೆಗಳು ಅನುಭವ ಹೊಂದಿದ್ದು, ಕಳೆದ ಎರಡು ವರ್ಷಗಳಿಂದ ನೀಡಿದ್ದೇವೆ. ಸದ್ಯ ಮಹೇಂದ್ರ ಆನೆಗೆ ಮರದ ಅಂಬಾರಿ ತಾಲೀಮನ್ನು ನಡೆಸಲಾಯಿತು ಎಂದು ಡಿಸಿಎಫ್ ಡಾ. ಪ್ರಭುಗೌಡ ಹೇಳಿದ್ದಾರೆ.

**ಧನಂಜಯ ಆನೆಗೆ ಮಸ್ತಿ:** ಸುಗ್ರೀವ, ಮಹೇಂದ್ರ, ಧನಂಜಯ, ಏಕಲವ್ಯ ಹಾಗೂ ಪ್ರಶಾಂತ ಈ ಐದೂ ಆನೆಗಳಲ್ಲೇ ಅಂಬಾರಿ ಹೊರುವ ಆನೆಯನ್ನು ಆಯ್ಕೆ ಮಾಡಲಾಗುತ್ತಿದೆ. ಅಭಿಮನ್ಯು ಆನೆಯನ್ನು ಅಕ್ಟೋಬರ್ 5ರ ಸಾಯಂಕಾಲ 5 ಗಂಟೆಗೆ ಇಲ್ಲಿಗೆ ಕರೆತರಲಾಗುವುದು. ಗಜಪಡೆಯ ಎಲ್ಲಾ ಆನೆಗಳ ಆರೋಗ್ಯ ಚೆನ್ನಾಗಿದ್ದು, ದಿನಕ್ಕೆರಡು ಬಾರಿ ಆರೋಗ್ಯ ಪರೀಕ್ಷಿಸಲಾಗುತ್ತಿದೆ. ಎಲ್ಲಾ ಆನೆಗಳು ಗಟ್ಟಿಮುಟ್ಟಾಗಿವೆ. ನಾವು ನೀಡುವ ಆಹಾರಕ್ಕೆ ಹೊಂದಿಕೊಂಡಿವೆ. ಕೊಡುವ ಆಹಾರದಲ್ಲಿ ಹೆಚ್ಚು ಪ್ರೋಟೀನ್ ಇರುವುದರಿಂದ ಹೆಚ್ಚು ಆಹಾರ ಸೇವಿಸಿದ ಧನಂಜಯ ಆನೆಗೆ ಮಸ್ತಿ ರೀತಿ ಬಂದು ಹೀಟ್ ಆಗಿದೆ. ಸದ್ಯಕ್ಕೆ ತಾಲೀಮಿಗೆ ವಿಶ್ರಾಂತಿ ನೀಡಿದ್ದೇವೆ ಎಂದು ಡಿಸಿಎಫ್ ತಿಳಿಸಿದ್ದಾರೆ.

# ಬಿಡದಿ ಟೌನ್‌ಶಿಪ್ ಜಟಾಪಟಿ | ಹಳೇ ಹೆದ್ದಾರಿ ತಡೆದು ರೈತರ ಪ್ರತಿಭಟನೆ

• ಉದಯವಾಹಿನಿ, ರಾಮನಗರ

ಬಿಡದಿ ಟೌನ್ ಶಿಪ್ ಜಟಾಪಟಿ ಮುಂದುವರೆದಿದ್ದು, ನಿನ್ನೆ ಸಂಜೆ ರಸ್ತೆ ತಡೆ ಮಾಡಿ ಪ್ರತಿಭಟನೆ ಮಾಡ್ತಿದ್ದ ರೈತರ ಬಂಧನ ಹಿನ್ನಲೆ, ಚನ್ನಪಟ್ಟಣದ ಪೊಲೀಸ್ ಭವನದಲ್ಲಿ ರೈತರನ್ನ ಇರಿಸಲಾಗಿತ್ತು. ಇದೀಗ ಬಂಧನದ ಬಳಿಕವೂ ರೈತರ ಉಪವಾಸ ಸತ್ಯಾಗ್ರಹ ಮುಂದುವರೆದಿದ್ದು, ಸ್ಥಳಕ್ಕೆ ಡಿಸಿ ಬರಬೇಕು ಎಂದು ರೈತರು ಪಟ್ಟು ಹಿಡಿದಿದ್ದಾರೆ. ಇತ್ತ ಚನ್ನಪಟ್ಟಣದ ಗಾಂಧಿವೃತ್ತದಲ್ಲಿ ರಸ್ತೆ ತಡೆದು ಪ್ರತಿಭಟನೆ ನಡೆಸಲು ರೈತ ಸಂಘಟನೆಗಳ ಸಿದ್ಧತೆ ನಡೆಸಿದ್ದು, ಈ ಮಧ್ಯೆ ಭೈರಮಂಗಲ ಗ್ರಾಮದಲ್ಲೂ ಪೊಲೀಸ್ ಬಂದೋಬಸ್ತ್ ನಿಯೋಜಿಸಲಾಗಿದೆ. ಇತ್ತ ಪ್ರಾಣ ಹೋದ್ರೂ ಭೂಮಿ ಕೊಡಲ್ಲ ಎಂದು ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ಹತ್ತಾರು ರೈತರು ದಯಾಮರಣ ಕೋರಿ ರಾಷ್ಟ್ರಪತಿಗಳಿಗೆ ಪತ್ರ ಬರೆದ್ದಾರೆ. ಇನ್ನೂ ಟೌನ್‌ಶಿಪ್ ವಿರೋಧಿಸಿ ಪ್ರತಿಭಟನೆ ನಡೆಸುತ್ತಿದ್ದ ರೈತರ ಬಂಧನ ಖಂಡಿಸಿ ಸಂಘಟನೆಗಳಿಂದ ಪ್ರತಿಭಟನೆ ಜೋರಾಗಿದೆ. ಚನ್ನಪಟ್ಟಣದ ಗಾಂಧಿ ವೃತ್ತದಲ್ಲಿ ಪ್ರತಿಭಟನೆ ನಡೆಸಿ ಸರ್ಕಾರದ ವಿರುದ್ಧ ಆಕ್ರೋಶ ಹೊರಹಾಕಿದ್ದಾರೆ. ಬೆಂಗಳೂರು-ಮೈಸೂರು ಹಳೇ ಹೆದ್ದಾರಿ ತಡೆದು ಸಿಎಂ ಡಿಕೆಶಿ ಹಾಗೂ ಸಚಿವ ಹೆಚ್.ಸಿ.ಬಾಲಕೃಷ್ಣ ವಿರುದ್ಧ ರೈತರು ಘೋಷಣೆ ಕೂಗಿದ್ದಾರೆ.

# ಕಾಡಂಚಿನಲ್ಲಿ ಕೊಳವೆಬಾವಿ ಕೊರೆಸಲು ಅಡ್ಡಿಬೇಡ: ಸಿ.ಪುಟ್ಟರಂಗಶೆಟ್ಟಿ

• ಉದಯವಾಹಿನಿ, ಚಾಮರಾಜನಗರ

ಜಿಲ್ಲೆಯಲ್ಲಿ ಬರ ಪರಿಸ್ಥಿತಿ ಇರುವುದರಿಂದ ಅರಣ್ಯದಂಚಿನ ಗ್ರಾಮಗಳಿಗೆ ಕುಡಿಯುವ ನೀರು ಪೂರೈಸಲು ಕೊಳವೆ ಬಾವಿಗಳನ್ನು ಕೊರೆಸಲು ಅರಣ್ಯ ಇಲಾಖೆ ಅಡ್ಡಿಪಡಿಸಬಾರದು ಎಂದು ಜಿಲ್ಲಾ ಉಸ್ತುವಾರಿ ಸಚಿವ ಸಿ.ಪುಟ್ಟರಂಗಶೆಟ್ಟಿ ಅಧಿಕಾರಿಗಳಿಗೆ ಸೂಚಿಸಿದರು.

ನಗರದ ಜಿಲ್ಲಾ ಪಂಚಾಯಿತಿಯ ಕೆಡಿಪಿ ಸಭಾಂಗಣದಲ್ಲಿ ನಡೆದ ಜಿಲ್ಲಾಮಟ್ಟದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಕುಡಿಯುವ ನೀರಿನ ಕಾಮಗಾರಿ ವಿಳಂಬ ಕುರಿತು ಅಸಮಾಧಾನ ವ್ಯಕ್ತಪಡಿಸಿದ ಸಚಿವರು, ಕಾಡಂಚಿನ ಗ್ರಾಮಗಳಲ್ಲಿ ಕೊಳವೆಬಾವಿ ಕೊರೆಸಲು ಅರಣ್ಯ ಇಲಾಖೆಯಿಂದ ಅನುಮತಿ ಸಿಗುತ್ತಿಲ್ಲ ಎಂದು ಅಧಿಕಾರಿಗಳು ದೂರುತ್ತಿದ್ದಾರೆ ಎಂದರು.


ಉದಯವಾಹಿನಿ ಚಿತ್ರ

ಬರ ಪರಿಸ್ಥಿತಿಯಲ್ಲಿ ಕುಡಿಯುವ ನೀರಿನ ಕಾಮಗಾರಿಗೆ ಅಡ್ಡಿಪಡಿಸುವುದು ಸರಿಯಲ್ಲ. ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳ ಜೊತೆ ಚರ್ಚಿಸಿ ಕಾಮಗಾರಿಗೆ ಅನುಮತಿ ಪಡೆಯಬೇಕು ಎಂದು ನಿರ್ದೇಶನ ನೀಡಿದರು.

ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದಲ್ಲಿ ಅಂತರ್ಜಲಮಟ್ಟ ತೀರಾ ಕೆಳಮಟ್ಟಕ್ಕೆ ಕುಸಿದಿದ್ದು, ಹೊಸದಾಗಿ ಕೊಳವೆಬಾವಿ ಕೊರೆಸಿದರೆ ಸೂಕ್ಷ್ಮ ಪರಿಸರಕ್ಕೆ ಹಾನಿಯಾಗಲಿದೆ ಎಂದು ಬಿಆರ್‌ಟಿ ಡಿಸಿಎಫ್ ಶ್ರೀಪತಿ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಚಿವರು ಕೃಷಿ ಉದ್ದೇಶಕ್ಕೆ ಕೊಳವೆಬಾವಿ ಕೊರೆಸಲು ಅನುಮತಿ ಕೊಡಬೇಡಿ, ಕುಡಿಯುವ ನೀರು ಪೂರೈಕೆಯ ಉದ್ದೇಶಕ್ಕೆ ಕೊಡಿ ಎಂದರು.ಜಲಜೀವನ್ ಮಿಷನ್ ಯೋಜನೆಯಡಿ ಕಾಮಗಾರಿ ಪೂರ್ಣಗೊಳ್ಳುವ ಮುನ್ನವೇ ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರ ಮಾಡಿರುವುದು ಸರಿಯಲ್ಲ, ಕಾಮಗಾರಿ ಪೂರ್ಣಗೊಂಡ ನಂತರವೇ ಗ್ರಾಮ ಗ್ರಾಮ ಪಂಚಾಯಿತಿಗಳಿಗೆ ಹಸ್ತಾಂತರಿಸಬೇಕು. ಇಲ್ಲವಾದರೆ ಸಂಬಂಧಪಟ್ಟವರ ವಿರುದ್ಧ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಕೆ ನೀಡಿದರು.

ಕೊಳ್ಳೇಗಾಲ ಶಾಸಕ ಎ.ಆರ್. ಕೃಷ್ಣಮೂರ್ತಿ ಮಾತನಾಡಿ, ಪುರಾಣಿಪೋಡಿನಲ್ಲಿ ಕುಡಿಯುವ ನೀರಿನ ಸಮಸ್ಯೆಯಿದ್ದು, ತಕ್ಷಣ ಬಗೆಹರಿಸಬೇಕು.

ಹಾಡಿ ಪೋಡುಗಳಲ್ಲಿ ವಾಸವಾಗಿರುವ ಆದಿವಾಸಿಗಳ ಸಂಕಷ್ಟಕ್ಕೆ ಸ್ಪಂದಿಸಬೇಕು. ಸರ್ಕಾರದಿಂದ ಮಂಜೂರಾಗಿರುವ ಮನೆಗಳನ್ನು ಶೀಘ್ರ ಫಲಾನುಭವಿಗಳಿಗೆ ನಿರ್ಮಿಸಿಕೊಡಬೇಕು ಎಂದು ತಾಕೀತು ಮಾಡಿದರು.

# ಆಪರೇಷನ್ ಟೈಗರ್ ಸಕ್ಸಸ್: ರೈತನನ್ನು ಬಲಿ ಪಡೆದಿದ್ದ ಹುಲಿ ಸೆರೆ

• ಉದಯವಾಹಿನಿ, ಚಾಮರಾಜನಗರ

ರೈತನ ಮೇಲೆ ದಾಳಿ ಮಾಡಿ ಕೊಂದು ತಿಂದಿದ್ದ ಹುಲಿಯನ್ನು ಅರಣ್ಯ ಇಲಾಖೆ ಕಾರ್ಯಾಚರಣೆ ನಡೆಸಿ ಕೊನೆಗೂ ಸೆರೆ ಹಿಡಿದಿದ್ದು, ಹಲವು ಗ್ರಾಮಗಳ ರೈತರು, ಜನರು ನಿರಾಳರಾಗಿದ್ದಾರೆ. ಚಾಮರಾಜನಗರ ತಾಲ್ಲೂಕಿನ ಬಡಗಲಪುರದಲ್ಲಿ ರೈತ ಬಸವಣ್ಣ ಮೇಲೆ ದಾಳಿ ಮಾಡಿ ಭಕ್ಷಿಸಿದ್ದ ಹುಲಿಯನ್ನು ಚಾಮರಾಜನಗರ ತಾಲ್ಲೂಕಿನ ತಾವರೆಕಟ್ಟೆ ಮೋಳೆ ಗ್ರಾಮದ ಮರಗದಕೆರೆ ಬಳಿ ಶನಿವಾರ ಬೆಳಗ್ಗೆ ಸಾಕಾನೆಗಳಾದ ಕಂಜನ್ ಮತ್ತು ಈಶ್ವರ್ ಸಹಾಯದಿಂದ ಅರವಳಿಕೆ ಚುಚ್ಚುಮದ್ದು ನೀಡಿ ಸೆರೆ ಹಿಡಿಯಲಾಗಿದೆ. ಸೆರೆ ಹಿಡಿದ ವ್ಯಾಘ್ರವು ಗಂಡಾಗಿದ್ದು, 6 ರಿಂದ 7 ವರ್ಷದ್ದು ಎಂದು ಅಂದಾಜು ಮಾಡಲಾಗಿದೆ.ಎರಡು ಡ್ರೋನ್, ಶ್ವಾನದಳ ಮತ್ತು ಹುಲಿ ಜಾಡು ಪತ್ತೆಹಚ್ಚುವ ನುರಿತ ಗಿರಿಜನರು ಸೇರಿದಂತೆ 65ಕ್ಕೂ ಅಧಿಕ ಮಂದಿ ಹುಲಿ ಸೆರೆ ಕಾರ್ಯಾಚರಣೆಯಲ್ಲಿ ಭಾಗಿಯಾಗಿದ್ದರು ಎಂದು ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಉಪ ಅರಣ್ಯ ಸಂರಕ್ಷಣಾಧಿಕಾರಿ ಬಿ.ಎಸ್. ಶ್ರೀಪತಿ ಮಾಹಿತಿ ನೀಡಿದ್ದಾರೆ.12 ದಿನಗಳಿಂದ ನಿರಂತರ ಕಾರ್ಯಾಚರಣೆ ಕಳೆದ 14ರ ಸಂಜೆ ಚಾಮರಾಜನಗರ ತಾಲ್ಲೂಕಿನ ಬಡಗಲಪುರ ಗ್ರಾಮದ ಜಮೀನಿನಲ್ಲಿ ಹುಲಿ ದಾಳಿಗೆ ರೈತ ಬಸವಣ್ಣ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಅರಣ್ಯ ಸಿಬ್ಬಂದಿ ಸೆಪ್ಟೆಂಬರ್15 ರಿಂದಲೂ ಹುಲಿ ಸೆರೆ ಕಾರ್ಯಾಚರಣೆ ನಡೆಸಲಾಗುತ್ತಿತ್ತು.

# ಮೂರು ವರ್ಷಗಳಲ್ಲಿ ಅಭಿವೃದ್ಧಿಗೆ ಹೊಸ ವೇಗ

## ಸಾವಿರಾರು ಕೋಟಿ ಅನುದಾನ ತಂದು ಜಿಲ್ಲೆಗೆ ಅಭಿವೃದ್ಧಿಯ ಶ್ರೀಕಾರ: ಡಾ.ಎಂ.ಸಿ.ಸುಧಾಕರ್

• ಉದಯವಾಹಿನಿ, ಚಿಕ್ಕಬಳ್ಳಾಪುರ

ಜಿಲ್ಲಾ ಉಸ್ತುವಾರಿ ಸಚಿವರಾಗಿ ಮೂರು ವರ್ಷಗಳ ಅವಧಿಯಲ್ಲಿ ಚಿಕ್ಕಬಳ್ಳಾಪುರ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಹೊಸ ವೇಗ ನೀಡಿದ ತೃಪ್ತಿ ಇದೆ. ವಿವಿಧ ಕ್ಷೇತ್ರಗಳಿಗೆ ಸಾವಿರಾರು ಕೋಟಿ ರೂ.ಗಳ ಅನುದಾನ, ಯೋಜನೆಗಳು ಹಾಗೂ ಆಡಳಿತಾತ್ಮಕ ಅನುಮೋದನೆಗಳನ್ನು ತಂದು ಅಭಿವೃದ್ಧಿಗೆ ಶ್ರೀಕಾರ ಹಾಡಲಾಗಿದೆ ಎಂದು ಮಾಜಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಎಂ.ಸಿ.ಸುಧಾಕರ್ ಹೇಳಿದರು.

**1** ವಿವಿಧ ಕ್ಷೇತ್ರಗಳಿಗೆ ಸಾವಿರಾರು ಕೋಟಿ ರೂ.ಗಳ ಅನುದಾನ,

**2** ಕೈಗಾರಿಕೆ, ಹೂವಿನ ಮಾರುಕಟ್ಟೆಗೆ ಒತ್ತು

**3** ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆ ಕ್ರಮ

ನಗರದ ಜಿಲ್ಲಾ ಕಾರ್ಯನಿರತ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿ ನಡೆಸಿ ತಮ್ಮ ಮೂರು ವರ್ಷಗಳ ಅವಧಿಯ ಅಭಿವೃದ್ಧಿ ಕಾರ್ಯಗಳ ವಿವರ ನೀಡಿದ ಅವರು, ರೇಷ್ಮೆ, ಕೃಷಿ, ಕುಡಿಯುವ ನೀರು, ಕೈಗಾರಿಕೆ, ಆರೋಗ್ಯ, ಶಿಕ್ಷಣ, ಪ್ರವಾಸೋದ್ಯಮ ಹಾಗೂ ಮೂಲಸೌಕರ್ಯಕ್ಕೆ ವಿಶೇಷ ಆದ್ಯತೆ ನೀಡಲಾಗಿದೆ ಎಂದರು.

ಶಿಡ್ಲಘಟ್ಟಕ್ಕೆ 200 ಕೋಟಿ ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ರೇಷ್ಮೆ ನಗರಿ ಶಿಡ್ಲಘಟ್ಟದ ಬಹು ದಿನಗಳ ಬೇಡಿಕೆಯಾಗಿದ್ದ ಹೈಟೆಕ್ ರೇಷ್ಮೆಗೂಡು ಮಾರುಕಟ್ಟೆ ನಿರ್ಮಾಣಕ್ಕೆ 200 ಕೋಟಿ ಆಡಳಿತಾತ್ಮಕ ಅನುಮೋದನೆ ದೊರಕಿಸಿ, ಒಂದೇ ಹಂತದಲ್ಲಿ ಕಾಮಗಾರಿ ಪೂರ್ಣಗೊಳಿಸಲು ಕ್ರಮ ಕೈಗೊಳ್ಳಲಾಗಿದೆ. ಹನುಮಂತಪುರದ ಬಳಿ ಕಾಮಗಾರಿ ನಡೆಯುತ್ತಿದ್ದು, ತಲಾ 120 ಟನ್ ಸಾಮರ್ಥ್ಯದ ಎರಡು ಗೋದಾಮುಗಳು, ಸ್ವಯಂಚಾಲಿತ ಕನ್ವೇಯರ್ ವ್ಯವಸ್ಥೆ ಸೇರಿದಂತೆ ಆಧುನಿಕ ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ ಎಂದರು. ಶಿಡ್ಲಘಟ್ಟಕ್ಕೆ ರಾಮಸಮುದ್ರದಿಂದ ಶುದ್ಧ ಕುಡಿಯುವ ನೀರು ಪೂರೈಸಲು 35 ಕೋಟಿ ಯೋಜನೆ ಜಾರಿಗೊಳಿಸಲಾಗಿದೆ. ಶಿಡ್ಲಘಟ್ಟ ಮತ್ತು ಚಿಂತಾಮಣಿ ತಾಲ್ಲೂಕುಗಳ 164 ಕೆರೆಗಳಿಗೆ ಎಚ್.ಎನ್. ವ್ಯಾಲಿ ನೀರು ತುಂಬಿಸಲು 237 ಕೋಟಿ ಯೋಜನೆಗೆ ಅನುಮೋದನೆ ದೊರೆತಿದ್ದು, ಕಾಮಗಾರಿ ಪ್ರಗತಿಯಲ್ಲಿದೆ ಎಂದರು.

**ಕೈಗಾರಿಕೆ, ಹೂವಿನ ಮಾರುಕಟ್ಟೆಗೆ ಒತ್ತು**

ಜಿಲ್ಲೆಯಲ್ಲಿ ಕೈಗಾರಿಕಾ ಅಭಿವೃದ್ಧಿಗಾಗಿ ವಿವಿಧೆಡೆ ಒಟ್ಟು 10,928 ಎಕರೆ ಭೂಮಿಯನ್ನು ಮೀಸಲಿ ಡುವ ಪ್ರಕ್ರಿಯೆಗೆ ಒತ್ತು ನೀಡಲಾಗಿದೆ. ಜಂಗಮಕೋಟೆ ಭಾಗದಲ್ಲಿ 1,850 ಎಕರೆ ಭೂಸ್ವಾಧೀನ ಹಾಗೂ ಕೈಗಾರಿಕಾ ಪ್ರದೇಶ ಅಭಿವೃದ್ಧಿಗೆ ಕ್ರಮ ಕೈಗೊಳ್ಳಲಾಗಿದೆ. ಚಿಂತಾಮಣಿ ಭಾಗದ ಡೀಮ್ಡ್ ಫಾರೆಸ್ಟ್ ಸಮಸ್ಯೆಯನ್ನೂ ಸರ್ಕಾರದ ಮಟ್ಟದಲ್ಲಿ ಪ್ರಸ್ತಾಪಿಸಿ ಪರಿಹರಿಸಲು ಕ್ರಮವಹಿಸಲಾಗಿದೆ ಎಂದರು.

ಚಿಕ್ಕಬಳ್ಳಾಪುರದಲ್ಲಿ ಹೂ ಬೆಳೆಗಾರರ ಬಹುದಿನಗಳ ಬೇಡಿಕೆಯಾದ ಹೈಟೆಕ್ ಹೂವಿನ ಮಾರುಕಟ್ಟೆ ಗೆ 141 ಕೋಟಿ ಆಡಳಿತಾತ್ಮಕ ಅನುಮೋದನೆ ದೊರೆತಿದ್ದು, ಸುಮಾರು 20 ಎಕರೆ ಪ್ರದೇಶದಲ್ಲಿ ಮಾರುಕಟ್ಟೆ ನಿರ್ಮಾಣ ಉದ್ದೇಶಿಸಲಾಗಿದೆ ಎಂದರು.


ಉದಯವಾಹಿನಿ ಚಿತ್ರ

### ರೇಷ್ಮೆ ನಗರಿ ಶಿಡ್ಲಘಟ್ಟದ ಬಹು ದಿನಗಳ ಬೇಡಿಕೆ

> ನಂದಿ ಬೆಟ್ಟದಲ್ಲಿ ನಡೆದ ವಿಶೇಷ ಸಂಪುಟ ಸಭೆಯಲ್ಲಿ ನಂದಿಗ್ರಾಮ ಹಾಗೂ ಕೈವಾರದ ಪ್ರಾಥಮಿಕ ಆರೋಗ್ಯ ಕೇಂದ್ರಗಳನ್ನು ಸಮುದಾಯ ಆರೋಗ್ಯ ಕೇಂದ್ರಗಳಾಗಿ ಮೇಲ್ದರ್ಜೆಗೇರಿಸಲು, ಕೈವಾರ-ಅಲೀಪುರವನ್ನು ಪಟ್ಟಣ ಪಂಚಾಯಿತಿಗಳಾಗಿ ಮೇಲ್ದರ್ಜೆಗೇರಿಸಲು ನಂದಿಬೆಟ್ಟದಲ್ಲಿ 9 ಕೋಟಿ ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಿಸಲು ಅನುಮೋದನೆ ಪಡೆಯಲಾಗಿದೆ ಎಂದರು.

### ನಂದಿ ಬೆಟ್ಟಕ್ಕೆ ರೋಪ್‌ವೇ, ಪ್ರವಾಸೋದ್ಯಮಕ್ಕೆ ಉತ್ತೇಜನ

ನಂದಿಗಿರಿಧಾಮದ ಪ್ರವಾಸೋದ್ಯಮ ಅಭಿವೃದ್ಧಿಗೆ 93.40 ಕೋಟಿ ವೆಚ್ಚದ ರೋಪ್‌ವೇ ಯೋಜನೆ ರೂಪುಗೊಂಡಿದ್ದು, ಭೂಮಿ ಸಮಸ್ಯೆ ಪರಿಹರಿಸಿದ ಪರಿಣಾಮ ಲೋವರ್ ಟರ್ಮಿನಲ್ ಕಾಮಗಾರಿ ಆರಂಭವಾಗಿದೆ. ಪ್ರವಾಸಿಗರಿಗಾಗಿ ಪಾರ್ಕಿಂಗ್, ಆಹಾರ ಮಳಿಗೆ, ಕುಡಿಯುವ ನೀರು ಹಾಗೂ ಶೌಚಾಲಯ ಸೇರಿದಂತೆ ಹಲವು ಸೌಲಭ್ಯಗಳನ್ನು ಕಲ್ಪಿಸಲಾಗುತ್ತಿದೆ ಎಂದರು.

### ಆರೋಗ್ಯ ಕ್ಷೇತ್ರಕ್ಕೂ ವಿಶೇಷ ಆದ್ಯತೆ

ನಂದಿ ಮೆಡಿಕಲ್ ಕಾಲೇಜಿಗೆ ಆರಂಭದಲ್ಲಿ 530 ಕೋಟಿ ಅನುಮೋದನೆಯಾಗಿದ್ದರೂ 850 ಕೋಟಿಗೆ ಹೆಚ್ಚಿಸಲಾಗಿದೆ. ಬಾಕಿ ಉಳಿದಿದ್ದ 340 ಕೋಟಿ ಗುತ್ತಿಗೆದಾರರಿಗೆ ಬಿಡುಗಡೆ ಮಾಡಿಸಿ ಕಾಮಗಾರಿ ಮುಂದುವರಿಸಲು ಕ್ರಮ ಕೈಗೊಳ್ಳಲಾಗಿದೆ. ವೈದ್ಯಕೀಯ ಸಲಕರಣೆಗಳಿಗಾಗಿ 40 ಕೋಟಿ ಹಾಗೂ ಜಿಲ್ಲಾ ಆಸ್ಪತ್ರೆಯಲ್ಲಿ ಹಳೆಯ ಸಿಟಿ ಸ್ಕ್ಯಾನ್ ಬದಲಾವಣೆ, ಎಂಆರ್‌ಐ ಸ್ಕ್ಯಾನ್ ಸ್ಥಾಪನೆಗೆ 11 ಕೋಟಿ ಮಂಜೂರು ಮಾಡಿಸಲಾಗಿದೆ. ಸುಸಜ್ಜಿತ ಡಯಾಗ್ನಸ್ಟಿಕ್ ಲ್ಯಾಬ್‌ಗಾಗಿ 8 ಕೋಟಿ ಒದಗಿಸಲಾಗಿದೆ ಎಂದರು.

## ಮಿನಿ ನ್ಯೂಸ್

# ರೇಷ್ಮೆ ಗೂಡು ಮಾರುಕಟ್ಟೆ ವಹಿವಾಟು ಕುಸಿತ

• ಉದಯವಾಹಿನಿ, ತುಮಕೂರು


ಉದಯವಾಹಿನಿ ಚಿತ್ರ

ಜಿಲ್ಲೆಯ ಏಕೈಕ ರೇಷ್ಮೆ ಮಾರುಕಟ್ಟೆ ನಿಧಾನವಾಗಿ ಹಿನ್ನೆಲೆಗೆ ಸರಿಯುತ್ತಿದ್ದು, ವಹಿವಾಟು ವರ್ಷದಿಂದ ವರ್ಷಕ್ಕೆ ಕುಸಿಯುತ್ತಿದೆ.ನಗರದ ವಿನಾಯಕ ನಗರದಲ್ಲಿ ಸರ್ಕಾರಿ ದ್ವಿತಳಿ ರೇಷ್ಮೆಗೂಡಿನ ಮಾರುಕಟ್ಟೆ ಇದೆ. ಸಿಎಸ್ ಆರ್-2 ತಳಿಯ ರೇಷ್ಮೆಗೂಡಿನ ಮಾರಾಟ, ಖರೀದಿ ಇಲ್ಲಿ ನಡೆಯುತ್ತದೆ.

ಜಿಲ್ಲೆ ಒಳಗೊಂಡಂತೆ ಬೆಳಗಾವಿ, ಶಿವಮೊಗ್ಗ, ಹಾಸನ, ಕೋಲಾರ, ಚಿಕ್ಕಬಳ್ಳಾಪುರದ ರೇಷ್ಮೆ ಬೆಳೆಗಾರರು ಮಾರುಕಟ್ಟೆಗೆ ರೇಷ್ಮೆಗೂಡು ತರುತ್ತಾರೆ. ಇತ್ತೀಚೆಗೆ ಸಿಎಸ್ ಆರ್-2 ತಳಿಯ ರೇಷ್ಮೆ ಬೆಳೆಯುವುದು ಕಡಿಮೆಯಾಗುತ್ತಿದ್ದು, ಇದು ವಹಿವಾಟಿನ ಮೇಲೆ ಪ್ರಭಾವ ಬೀರಿದೆ.

2023-24ರ ಆರ್ಥಿಕ ವರ್ಷದಲ್ಲಿ 1,50,839 ಕೆ.ಜಿ ರೇಷ್ಮೆಗೂಡು ಮಾರುಕಟ್ಟೆಗೆ ಬಂದಿತ್ತು. ಆಗ 7.54 ಕೋಟಿ ವಹಿವಾಟು ಆಗಿ, 11.80 ಲಕ್ಷ ಮಾರುಕಟ್ಟೆ ಶುಲ್ಕ ಸಂಗ್ರಹವಾಗಿತ್ತು. 2025-26ನೇ ಸಾಲಿನಲ್ಲಿ 75,351 ಕೆ.ಜಿ ರೇಷ್ಮೆಗೂಡು ಬಂದಿದ್ದು, 6.04 ಕೋಟಿ ವಹಿವಾಟು ನಡೆದಿದೆ. 6.67 ಲಕ್ಷ ಶುಲ್ಕ ಸಂಗ್ರಹವಾಗಿದೆ.

ಚಿಕ್ಕನಾಯಕನಹಳ್ಳಿ, ತಿಪಟೂರು ಮತ್ತು ತುರುವೇಕೆರೆ ತಾಲ್ಲೂಕುಗಳನ್ನು ಸಿಎಸ್‌ಆರ್-2 ತಳಿ ಬೆಳೆಯುವ ಪ್ರದೇಶವನ್ನಾಗಿ ಗುರುತಿಸಲಾಗಿತ್ತು. ಮೂರು ತಾಲ್ಲೂಕುಗಳಲ್ಲಿ ರೇಷ್ಮೆ ಜಾಸ್ತಿ ಬೆಳೆಯುತ್ತಿದ್ದರು. ಈಗ ಬೇರೆ ಬೇರೆ ತಳಿ ಬೆಳೆಯಲು ಮುಂದಾಗಿದ್ದು, ಮಾರುಕಟ್ಟೆ ಬರುವ ರೇಷ್ಮೆಗೂಡಿನ ಪ್ರಮಾಣ ಇಳಿಕೆಯಾಗುತ್ತಿದೆ. ಪ್ರಸ್ತುತ ಜಿಲ್ಲೆಯ ಬಹುತೇಕ ಭಾಗಗಳಲ್ಲಿ ಹೈಬ್ರಿಡ್ ಡಬಲ್ ತಳಿ, ಎಫ್‌ಸಿ-1, ಎಫ್‌ಸಿ-2, ಸಿಬಿ, ಪ್ಯೂರ್ ಮೈಸೂರು (ಪಿಎಂ) ರೇಷ್ಮೆ ತಳಿ ಹೆಚ್ಚಾಗಿ ಬೆಳೆಯಲಾಗುತ್ತಿದೆ.

# ಡಿವೈಎಫ್‌ಐ ಸಮ್ಮೇಳನಕ್ಕೆ ಸಕಲ ಸಿದ್ಧತೆ ಬಾಗೇಪಲ್ಲಿಯಲ್ಲಿ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬಾಗೇಪಲ್ಲಿ

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿವೈಎಫ್‌ಐ) ವತಿಯಿಂದ 28ರವರೆಗೆ ಬಾಗೇಪಲ್ಲಿ ಪಟ್ಟಣದಲ್ಲಿ ನಡೆಯುವ ರಾಜ್ಯಮಟ್ಟದ 13ನೇ ಯುವಜನ ಸಮ್ಮೇಳನ ಹಾಗೂ ಬಹಿರಂಗ ಸಭೆಗೆ ಅಗತ್ಯ ಸಿದ್ಧತೆಗಳು ಭರದಿಂದ ಸಾಗುತ್ತಿವೆ. ಸಮ್ಮೇಳನದ ಅಂಗವಾಗಿ ಪಟ್ಟಣ ಹೊರವಲಯದ ಟಿ.ಬಿ.ಕ್ರಾಸ್‌ನಿಂದ ನ್ಯಾಷನಲ್ ಕಾಲೇಜಿನವರೆಗೆ ಡಿವಿಜಿ ಮುಖ್ಯರಸ್ತೆಯ ಮಧ್ಯ ಡಿವೈಎಫ್‌ಐನ ಬಾವುಟ ಮತ್ತು ಬಂಟಿಂಗ್ಸ್ ಹಾಕಲಾಗಿದೆ. ತಾಲ್ಲೂಕು ಪಂಚಾಯಿತಿ ಪಕ್ಕದ ಡಾ.ಬಿ.ಆರ್.ಅಂಬೇಡ್ಕರ್ ಭವನದ ಜಾಗದಲ್ಲಿ ಬೃಹತ್ ವೇದಿಕೆ ನಿರ್ಮಾಣ ಮಾಡಲಾಗಿದೆ. ವೇದಿಕೆ ಮೇಲೆ ಗಣ್ಯರಿಗೆ ಹಾಗೂ ಸಾರ್ವಜನಿಕರಿಗೆ 5 ಸಾವಿರಕ್ಕೂ ಹೆಚ್ಚು ಆಸನಗಳ ವ್ಯವಸ್ಥೆ ಮಾಡಲಾಗಿದೆ.ಸಮ್ಮೇಳನಕ್ಕೂ ಮುನ್ನ 26ರ ಬೆಳಗ್ಗೆ 10 ಗಂಟೆಗೆ ಚಿತ್ರಾವತಿ ಮೇಲ್ಸೇತುವೆಯಿಂದ ಡಿವಿಜಿ ಮುಖ್ಯರಸ್ತೆ ಮೂಲಕ ಡಾ.ಎಚ್.ಎನ್.ವೃತ್ತದವರೆಗೆ ರ್‍ಯಾಲಿ ನಡೆಯಲಿದೆ. 11ಕ್ಕೆ ಬಹಿರಂಗ ಸಭೆ ಹಮ್ಮಿಕೊಳ್ಳಲಾಗಿದೆ. ಸಭೆಯನ್ನು ನಟ ಪ್ರಕಾಶರಾಜ್ ಉದ್ಘಾಟಿಸಲಿದ್ದಾರೆ. ಮೂರು ದಿನಗಳ ಕಾರ್ಯಕ್ರಮದಲ್ಲಿ ಯುವಜನರ ಸಮಸ್ಯೆ, ಸೌಹಾರ್ದ ಸಮಾಜದಲ್ಲಿ ಯುವಜನರ ಪಾತ್ರ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಪ್ರಗತಿಪರ ಚಿಂತಕರು, ಸಾಹಿತಿಗಳು, ಹೋರಾಟಗಾರರು, ಶಿಕ್ಷಣ ತಜ್ಞರು ಮಾತನಾಡಲಿದ್ದಾರೆ.

# ಗುಣಮಟ್ಟವಿಲ್ಲದ ಔಷಧ; ಕ್ರಮದ ಎಚ್ಚರಿಕೆ

• ಉದಯವಾಹಿನಿ, ಮಡಿಕೇರಿ

ವ್ಯಾಪಾರಸ್ಥರು ಉತ್ತಮ ಗುಣಮಟ್ಟದ ಆಹಾರ ಮತ್ತು ಔಷಧವನ್ನು ಗ್ರಾಹಕರಿಗೆ ನೀಡಬೇಕು. ಈ ಸಂಬಂಧ ಯಾವುದೇ ದೂರು ಬಂದಲ್ಲಿ ಅಂತಹ ವ್ಯಾಪಾರಿಗಳ ವಿರುದ್ಧ ಕಠಿಣ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಕೊಡಗು ಜಿಲ್ಲಾ ಆಹಾರ ಸುರಕ್ಷತೆ ಮತ್ತು ಔಷಧಿ ನಿಯಂತ್ರಣ ಇಲಾಖೆಯ ಅಂಕಿತ ಅಧಿಕಾರಿ ಡಾ.ಅನಿಲ್ ಧಾವನ್ ಎಚ್ಚರಿಕೆ ನೀಡಿದರು. ಇಲ್ಲಿನ ಫಾರ್ಮಾ ಭವನದಲ್ಲಿ ಕೊಡಗು ಔಷಧಿ ವ್ಯಾಪಾರಸ್ಥರ ಸಂಘದಿಂದ ಶುಕ್ರವಾರ ನಡೆದ ವಿಶ್ವ ಔಷಧ ತಜ್ಞರ ದಿನಾಚರಣೆಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತೀಯೊಬ್ಬ ವ್ಯಾಪಾರಸ್ಥರು ಆಹಾರ ಪರವಾನಗಿ ಪಡೆಯಲೇಬೇಕು. ಪರವಾನಗಿ ಪಡೆಯದೇ ವ್ಯಾಪಾರ ನಡೆಸಬಾರದು ಎಂದರು. ಬದಲಾಗುತ್ತಿರುವ ಕಾನೂನು ಕಾಯಿದೆಗಳನ್ನು ಗಮನದಲ್ಲಿರಿಸಿಕೊಂಡು ಪ್ರತೀಯೊಬ್ಬ ಔಷಧ ವ್ಯಾಪಾರಿಯೂ ಪಾರದರ್ಶಕವಾಗಿ ವ್ಯವಹರಿಸಿ ಗ್ರಾಹಕರಿಗೆ ಸೇವಾ ಮನೋಭಾವದಿಂದ ಔಷಧಿಗಳನ್ನು ನೀಡಬೇಕು ಎಂದು ಹೇಳಿದರು.

ಕೊಡಗು ಔಷಧಿ ವ್ಯಾಪಾರಸ್ಥರ ಸಂಘದ ಅಧ್ಯಕ್ಷ ಅಂಬೆಕಲ್ಲು ಜೀವನ್ ಕುಶಾಲಪ್ಪ ಮಾತನಾಡಿ, ಕೊಡಗು ಜಿಲ್ಲೆಯಲ್ಲಿ ಸಂಘಕ್ಕೆ ಸ್ವಂತ ಭವನ ನಿರ್ಮಾಣವಾಗಿದ್ದು, ಇಲ್ಲಿ ಮುಂದಿನ ದಿನಗಳಲ್ಲಿ ವಿನೂತನ ಕಾರ್ಯಕ್ರಮಗಳು, ಸಭೆಗಳನ್ನು ಆಯೋಜಿಸುತ್ತಾ ಸಮಾಜಮುಖಿಯಾಗಿ ಸಂಘವನ್ನು ಕೊಂಡೊಯ್ಯಲಾಗುವುದು ಎಂದು ಹೇಳಿದರು. ಜಿಲ್ಲಾ ಸಹಾಯಕ ಔಷಧ ನಿಯಂತ್ರಕ ಅಜಯ್ ರಾಜ್ ಷಾ ಮಾತನಾಡಿ, ಔಷಧ ಮಾರಾಟದ ಹಲವಾರು ಕಾನೂನುಗಳು ಕೂಡ ಬದಲಾಗುತ್ತಲೇ ಇವೆ.

# ಒಂದು ತಿಂಗಳಿಂದ ಗ್ರಾಮಸ್ಥರ ನಿದ್ದೆಗೆಡಿಸಿದ್ದ ಚಿರತೆ ಕೊನೆಗೂ ಸೆರೆ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಮಂಡ್ಯ

ಜಿಲ್ಲೆಯ ಮದ್ದೂರು ತಾಲ್ಲೂಕಿನ ಹೆಚ್.ಹೊಸಹಳ್ಳಿ ಗ್ರಾಮದಲ್ಲಿ ಕಳೆದ ಒಂದು ತಿಂಗಳಿಂದ ಜನಸಾಮಾನ್ಯರು ಹಾಗೂ ರೈತರ ನಿದ್ದೆಗೆಡಿಸಿದ್ದ ಚಿರತೆ ಕೊನೆಗೂ ಅರಣ್ಯ ಇಲಾಖೆ ಇರಿಸಿದ್ದ ಬೋನಿಗೆ ಬಿದ್ದಿದೆ.ಕಳೆದ ಒಂದು ತಿಂಗಳಿಂದ ಹೆಚ್. ಹೊಸಹಳ್ಳಿ ಹಾಗೂ ಸುತ್ತಮುತ್ತಲಿನ ಗ್ರಾಮಗಳಲ್ಲಿ ಚಿರತೆ ಪ್ರತ್ಯಕ್ಷವಾಗಿ ನಿರಂತರ ಭಯದ ವಾತಾವರಣ ಸೃಷ್ಟಿಸಿತ್ತು. ಈ ಚಿರತೆಯು ಈವರೆಗೆ ಒಟ್ಟು 8 ಮೇಕೆಗಳು, 2 ನಾಯಿಗಳು, 1 ಹಸುವಿನ ಕರು ಹಾಗೂ 1 ಎಮ್ಮೆ ಕರುವನ್ನು ಬೇಟೆಯಾಡಿ ತಿಂದಿತ್ತು.ಚಿರತೆ ನಿರಂತರ ದಾಳಿಯಿಂದಾಗಿ ಜಮೀನುಗಳಿಗೆ ತೆರಳಲು ಗ್ರಾಮಸ್ಥರು ಹೆದರುತ್ತಿದ್ದರು. ಕೂಡಲೇ ಚಿರತೆಯನ್ನ ಸೆರೆಹಿಡಿಯುವಂತೆ ಸಾರ್ವಜನಿಕರು ತೀವ್ರ ಆಗ್ರಹಿಸಿದ್ದರು. ಜನರ ಬೇಡಿಕೆಗೆ ಅರಣ್ಯ ಇಲಾಖೆ ಸಿಬ್ಬಂದಿ ಗ್ರಾಮದಲ್ಲಿ ಬೋನ್ ಇರಿಸಿದ್ದರು. ಬೋನಿನೊಳಗೆ ನಾಯಿಯನ್ನ ಇರಿಸಲಾಗಿದ್ದು, ಅದನ್ನ ತಿನ್ನಲು ಬಂದ ಚಿರತೆ ಇಲಾಖೆಯ ಬಲೆಗೆ ಬಿದ್ದಿದೆ.ಚಿರತೆ ಸೆರೆಯಾಗುತ್ತಿದ್ದಂತೆ ಹೆಚ್.ಹೊಸಹಳ್ಳಿ ಗ್ರಾಮಸ್ಥರು ನಿಟ್ಟುಸಿರು ಬಿಟ್ಟಿದ್ದು, ಜೀವಭಯವಿಲ್ಲದೆ ಮುಕ್ತವಾಗಿ ಓಡಾಡುವಂತಾಗಿದೆ.

ಅಂತರಾಳದಿಂದ... EDITORIAL

# ಖಾದ್ಯ ತೈಲ ಆಮದು ಸುಂಕ ಕಡಿತ ಶ್ರೀಸಾಮಾನ್ಯನಿಗೆ ಲಾಭ ಲಭಿಸಲಿ



ದೇಶದಲ್ಲಿ ಹಬ್ಬಗಳ ಋತು ಆರಂಭಗೊಂಡಿರುವಂತೆಯೇ ಕೇಂದ್ರ ಸರಕಾರ ಖಾದ್ಯ ತೈಲ ಗ್ರಾಹಕರಿಗೆ ಸಿಹಿಸುದ್ದಿಯೊಂದನ್ನು ನೀಡಿದೆ. ಖಾದ್ಯ ತೈಲಗಳ ಮೇಲಿನ ಆಮದು ಸುಂಕದಲ್ಲಿ ಗಣನೀಯ ಇಳಿಕೆ ಮಾಡಿರುವ ಕೇಂದ್ರ ಸರಕಾರ ಇದರ ಲಾಭವನ್ನು ಗ್ರಾಹಕರಿಗೆ ವರ್ಗಾಯಿಸುವಂತೆ ಸೂಚಿಸಿದೆ. ಹೀಗಾಗಿ ಮುಂದಿನ ದಿನಗಳಲ್ಲಿ ಖಾದ್ಯ ತೈಲಗಳ ಬೆಲೆ ಏರಿಕೆಯ ಪ್ರವೃತ್ತಿಗೆ ಒಂದಿಷ್ಟು ಲಗಾಮು ಬೀಳುವ ಲಕ್ಷಣಗಳು ಗೋಚರಿಸುತ್ತಿವೆ. ಜಾಗತಿಕ ಮಟ್ಟದಲ್ಲಿ ತಲೆದೋರಿರುವ ಭೌಗೋಳಿಕ ರಾಜಕೀಯ ಅನಿಶ್ಚಿತತೆ, ಹವಾಮಾನ ಬದಲಾವಣೆಯ ಪರಿಣಾಮ ಖಾದ್ಯ ತೈಲ ಬೀಜಗಳ ಉತ್ಪಾದನೆಯಲ್ಲಿ ಒಂದಿಷ್ಟು ಕುಸಿತ ಕಂಡುಬಂದಿರುವುದರಿಂದಾಗಿ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಖಾದ್ಯ ತೈಲಗಳ ಬೆಲೆ ಏರುಗತಿಯಲ್ಲಿದೆ. ಈ ಮೂಲಕ ಸೀಮಾ ಸುಂಕ ಕಡಿತದಿಂದ ಖಾದ್ಯ ತೈಲ ಉತ್ಪಾದಕ ಕಂಪೆನಿಗಳ ಮೇಲಿನ ಆರ್ಥಿಕ ಹೊರೆ ಒಂದಿಷ್ಟು ಇಳಿಕೆಯಾಗಿದೆ. ಇದೇ ವೇಳೆ ಕೇಂದ್ರ ಸರಕಾರ ಈ ಆಮದು ಸುಂಕ ಕಡಿತದ ಲಾಭವನ್ನು ಕಂಪೆನಿಗಳು ಗ್ರಾಹಕರಿಗೆ ವರ್ಗಾಯಿಸಬೇಕೆಂದು ಸೂಚನೆ ನೀಡಿರುವುದರಿಂದ ಕಂಪೆನಿಗಳು ತಮ್ಮ ಉತ್ಪನ್ನಗಳ ಬೆಲೆಯಲ್ಲಿ ಒಂದಿಷ್ಟು ಇಳಿಕೆ ಮಾಡುವುದು ಬಹುತೇಕ ನಿಶ್ಚಿತವಾಗಿದೆ. ಸಹಜವಾಗಿ ಈ ಎಲ್ಲಾ ಬೆಳವಣಿಗೆಗಳು ಖಾದ್ಯ ತೈಲ ಗ್ರಾಹಕರ ಅದರಲ್ಲೂ ಜನಸಾಮಾನ್ಯರ ಮೇಲಿನ ಆರ್ಥಿಕ ಹೊರೆಯನ್ನು ಒಂದಿಷ್ಟು ತಗ್ಗಿಸಲಿದೆ. ಕಳೆದ ಕೆಲವು ವರ್ಷಗಳಿಂದ ಖಾದ್ಯ ತೈಲ ಉತ್ಪಾದನೆಯಲ್ಲಿ ಸ್ವಾವಲಂಬನೆ ಸಾಧಿಸುವ ನಿಟ್ಟಿನಲ್ಲಿ ಕೇಂದ್ರ ಸರಕಾರ ಹೆಜ್ಜೆ ಇರಿಸಿದ್ದರೂ ನಿರೀಕ್ಷಿತ ಪ್ರಮಾಣದಲ್ಲಿ ಯಶ ಕಂಡಿಲ್ಲ. ಖಾದ್ಯ ತೈಲಗಳಿಗಾಗಿನ ವಿದೇಶಿ ಅವಲಂಬನೆಯನ್ನು ಕಡಿಮೆ ಮಾಡುವ ಜತೆಯಲ್ಲಿ ದೇಶದಲ್ಲಿ ಈ ಉತ್ಪನ್ನಗಳ ಬೆಲೆಯನ್ನು ನಿಯಂತ್ರಣದಲ್ಲಿಡಲು ಸರಕಾರ ಪ್ರಯತ್ನಿಸುತ್ತಲೇ ಬಂದಿದೆ. ಆದರೆ ದೇಶದ ಬೇಡಿಕೆಗೆ ತಕ್ಕಷ್ಟು ಖಾದ್ಯ ತೈಲ ಬೀಜಗಳನ್ನು ಉತ್ಪಾದಿಸಲು ಸಾಧ್ಯವಾಗದಿರುವುದರಿಂದ ಭಾರತ ವಿದೇಶಗಳಿಂದ ಖಾದ್ಯ ತೈಲವನ್ನು ಆಮದು ಮಾಡಿಕೊಳ್ಳುತ್ತಿದೆ. ದೇಶದ ಈ ಸಂದಿಗ್ಧತೆಯನ್ನು ಕೆಲವು ಖಾದ್ಯ ತೈಲ ಕಂಪೆನಿಗಳು, ಕಾಳಸಂತೆಕೋರರು ಮತ್ತು ನಕಲಿ ಖಾದ್ಯ ತೈಲ ದಂಧೆಕೋರರು ದುರುಪಯೋಗಪಡಿಸಿಕೊಳ್ಳುತ್ತಲೇ ಬಂದಿದ್ದಾರೆ. ಇತ್ತೀಚೆಗಂತೂ ಮಾರುಕಟ್ಟೆಯಲ್ಲಿ ನಕಲಿ ಹಾಗೂ ಕಲಬೆರಕೆ ಖಾದ್ಯ ತೈಲಗಳ ಮಾರಾಟ ಮಿತಿಮೀರಿದೆ. ಅಗ್ಗದ ಬೆಲೆಯಲ್ಲಿ ಈ ತೈಲಗಳು ಲಭಿಸುವುದರಿಂದ ಜನಸಾಮಾನ್ಯರು ಬಹುಬೇಗನೆ ಈ ನಕಲಿ ಮತ್ತು ಕಲಬೆರಕೆ ಖಾದ್ಯ ತೈಲಗಳಿಗೆ ಮಾರುಹೋಗುತ್ತಿದ್ದಾರೆ. ಇನ್ನು ಕಾಳಸಂತೆಕೋರರಂತೂ ಮಾರುಕಟ್ಟೆಯಲ್ಲಿ ಬೇಡಿಕೆ ಅಧಿಕವಾಗಿರುವಾಗ ತಮ್ಮ ದಂಧೆ ಶುರುವಿಟ್ಟುಕೊಳ್ಳುವುದರಿಂದ ಹಬ್ಬದ ಋತುವಿನಲ್ಲಿ ಮಾರುಕಟ್ಟೆಗಳಲ್ಲಿ ಖಾದ್ಯ ತೈಲದ ಅಭಾವ ಕಾಣಿಸಿಕೊಳ್ಳುವುದು ಸಾಮಾನ್ಯವಾಗಿದೆ. ಸಹಜವಾಗಿ ಇದು ಮತ್ತಷ್ಟು ಬೆಲೆ ಹೆಚ್ಚಳಕ್ಕೆ ಕಾರಣವಾಗುತ್ತದೆ.

ಈ ಎಲ್ಲಾ ಅಕ್ರಮಗಳಿಗೆ ಕಡಿವಾಣ ಹಾಕಲು ಕೇಂದ್ರ ಸರಕಾರ ಖಾದ್ಯ ತೈಲ ಮಾರುಕಟ್ಟೆಯ ಮೇಲೆ ಸೂಕ್ತ ನಿಗಾ ಇರಿಸುವ ಅಗತ್ಯವಿದೆ. ಹೀಗಾದಾಗ ಮಾತ್ರವೇ ಆಮದು ಸುಂಕ ಕಡಿತದ ನೈಜ ಲಾಭ ಗ್ರಾಹಕರಿಗೆ ಅದರಲ್ಲೂ ಶ್ರೀಸಾಮಾನ್ಯನಿಗೆ ಲಭಿಸಲು ಸಾಧ್ಯ.

> ಇನ್ನು ಭಾರತ ತನ್ನ ಒಟ್ಟಾರೆ ಬೇಡಿಕೆಯ ಶೇ.60ಕ್ಕೂ ಅಧಿಕ ಪ್ರಮಾಣದ ಖಾದ್ಯ ತೈಲವನ್ನು ವಿದೇಶಗಳಿಂದ ಆಮದು ಮಾಡಿಕೊಳ್ಳುತ್ತಿರುವುದರಿಂದ ದೇಶಕ್ಕೂ ಇದರ ಬಿಸಿ ತಟ್ಟಿದೆ. ಇದರಿಂದಾಗಿ ದೇಶದಲ್ಲಿ ಸಸ್ಯಜನ್ಯ ಬಹುತೇಕ ಖಾದ್ಯ ತೈಲಗಳು ಗ್ರಾಹಕರ ಜೇಬನ್ನು ಸುಡುತ್ತಿವೆ. ಇದನ್ನು ಮನಗಂಡ ಕೇಂದ್ರ ಸರಕಾರ ಖಾದ್ಯ ತೈಲಗಳ ಆಮದು ಸುಂಕವನ್ನು ಕಡಿತಗೊಳಿಸಿ ಆದೇಶ ಹೊರಡಿಸಿದೆ.

## ಹೈ ಕೊಲೆಸ್ಟ್ರಾಲ್ ಕಡಿಮೆ ಮಾಡಲು ಸೂಪರ್ ಮನೆಮದ್ದು: ನಿತ್ಯ ಒಂದು ಚಮಚ ಈ ಪುಡಿ ಸೇವಿಸುವುದು ಆರೋಗ್ಯಕ್ಕೆ ಒಳ್ಳೆಯದು!

ಬಹುತೇಕರ ಮನೆಗಳಲ್ಲಿ ಬಹಳ ಹಿಂದಿನಿಂದಲೂ ಹುಳಿ ಆಮ್ಲಾ (ನೆಲ್ಲಿಕಾಯಿ) ನಮ್ಮ ಆಹಾರದ ಭಾಗವಾಗಿದೆ. ಹಸಿ ಆಮ್ಲಾ, ಆಮ್ಲಾ ಜ್ಯೂಸ್, ಆಮ್ಲಾ ಚಟ್ನಿ ಹಾಗೂ ಪುಡಿಯಂತಹ ವಿವಿಧ ರೂಪಗಳಲ್ಲಿ ಸೇವಿಸಲಾಗುತ್ತದೆ. ಮಾರುಕಟ್ಟೆಯಲ್ಲಿ ತುಂಬಾ ಕಡಿಮೆ ಬೆಲೆಗೆ ಸಿಗುವಂತಹ ಆಮ್ಲಾ 50ಕ್ಕೂ ಹೆಚ್ಚು ಆರೋಗ್ಯದ ಪ್ರಯೋಜನಗಳನ್ನು ಹೊಂದಿದೆ. ನೆಲ್ಲಿಕಾಯಿಯಲ್ಲಿ ವಿಟಮಿನ್ ಸಿ, ಫೈಬರ್ ಹಾಗೂ ಉತ್ಕರ್ಷಣ ನಿರೋಧಕಗಳಂತಹ ಪೋಷಕಾಂಶಗಳನ್ನು ಹೊಂದಿರುತ್ತದೆ. ಇದಕ್ಕಾಗಿಯೇ ಆಮ್ಲಾ ಹೈಕೊಲೆಸ್ಟ್ರಾಲ್ ಕಡಿಮೆ ಮಾಡುವ ಜೊತೆಗೆ ವಿವಿಧ ಆರೋಗ್ಯದ ಪ್ರಯೋಜನಗಳನ್ನು ಹೊಂದಿದೆ. ಆಯುರ್ವೇದದಲ್ಲಿ ಹೆಚ್ಚಿನ ಪ್ರಾಮುಖ್ಯತೆ ಹೊಂದಿರುವ ಈ ಸೂಪರ್‌ಫುಡ್ ಕುರಿತು ತಜ್ಞರು ವಿವರವಾಗಿ ತಿಳಿಸುವುದೇನು ಎಂಬುದನ್ನು ಅರಿತುಕೊಳ್ಳೋಣ.

**ಪೋಷಕಾಂಶಗಳ ಕಣಜ ಆಮ್ಲಾ:** ಆಮ್ಲಾ ವಿಟಮಿನ್ ಸಿಯಿಂದ ಸಮೃದ್ಧವಾಗಿದೆ. ಚಿಕ್ಕ ಆಮ್ಲಾದಲ್ಲಿ ಕಂಡುಬರುವ ವಿಟಮಿನ್ ಸಿ ಸುಮಾರು 20 ಕಿತ್ತಳೆ ಹಣ್ಣುಗಳಿಗೆ ಸಮನಾಗಿರುತ್ತದೆ. ದೇಹದಲ್ಲಿ ಕಾಲಜನ್ ಉತ್ಪಾದನೆ, ಉತ್ಕರ್ಷಣ ನಿರೋಧಕ ರಕ್ಷಣೆಗೆ ತುಂಬಾ ಉಪಯುಕ್ತವಾಗಿದೆ. ಚರ್ಮದ ಸಾಮಾನ್ಯ ಆರೋಗ್ಯ, ರೋಗನಿರೋಧಕ ವ್ಯವಸ್ಥೆಗೆ ವಿಟಮಿನ್ ಸಿ ಅವಶ್ಯವಾಗಿದೆ. ಜೊತೆಗೆ ಗ್ಯಾಲಿಕ್ ಆಮ್ಲ, ಎಲಾಜಿಕ್ ಆಮ್ಲ ಮತ್ತು ಫ್ಲೇವನಾಯ್ಡ್‌ಗಳಂತಹ ಶಕ್ತಿಶಾಲಿ ಉತ್ಕರ್ಷಣ ನಿರೋಧಕಗಳನ್ನು ಹೊಂದಿದೆ. ಈ ಅಂಶಗಳು ದೇಹಕ್ಕೆ ಒಳ್ಳೆಯದು. ಇವು ದೇಹದ ಜೀವಕೋಶಗಳನ್ನು ಸ್ವತಂತ್ರ ರಾಡಿಕಲ್‌ಗಳ ದಾಳಿಯಿಂದ ರಕ್ಷಣೆ ಮಾಡುತ್ತವೆ. ಹೈಕೊಲೆಸ್ಟ್ರಾಲ್ ಕಡಿಮೆ ಮಾಡಲು ಬೆಸ್ಟ್: ದೈನಂದಿನ ಆಹಾರದಲ್ಲಿ ಆಮ್ಲಾ ಸೇರಿಸುವುದರಿಂದ ಕೆಟ್ಟ ಕೊಲೆಸ್ಟ್ರಾಲ್ ಟ್ರೈಗ್ಲಿಸರೈಡ್‌ಗಳು ಕಡಿಮೆಯಾಗುತ್ತವೆ, ಉತ್ತಮ ಕೊಲೆಸ್ಟ್ರಾಲ್ ಅನ್ನು ಸ್ವಲ್ಪ ಹೆಚ್ಚಿಸುತ್ತದೆ ಎಂದು ಸಂಶೋಧನೆ ತಿಳಿಸಿದೆ. ಇನ್ಸುಲಿನ್ ಸಂವೇದನೆ ಹೆಚ್ಚಿಸುತ್ತದೆ, ಉಪವಾಸದ ರಕ್ತದಲ್ಲಿನ ಸಕ್ಕರೆ ಮಟ್ಟವನ್ನು ನಿಯಂತ್ರಿಸಲು ಸಹಾಯ ಮಾಡುತ್ತದೆ. ಪೂರ್ವ ಮಧುಮೇಹ ಹಾಗೂ ಟೈಪ್-2 ಮಧುಮೇಹ ಹೊಂದಿರುವವರಿಗೆ ಹೆಚ್ಚು ಪ್ರಯೋಜನವಾಗಿದೆ. ಆಮ್ಲಾದಲ್ಲಿರುವ ವಿಟಮಿನ್ ಸಿ ಕಾಲಜನ್ ಉತ್ಪಾದನೆಗೆ ಸಹಾಯವಾಗುತ್ತದೆ. ಇದು ಪರೋಕ್ಷವಾಗಿ ಚರ್ಮದ ಆರೋಗ್ಯಕ್ಕೂ ಹೆಚ್ಚು ಪ್ರಯೋಜನಕಾರಿಯಾಗಿದೆ. ಆಮ್ಲಾದಲ್ಲಿರುವ ಕರಗುವ ಫೈಬರ್ ಜೀರ್ಣಾಂಗ ವ್ಯವಸ್ಥೆಯಲ್ಲಿ ಕೊಲೆಸ್ಟ್ರಾಲ್ ಹೀರಿಕೊಳ್ಳುವಿಕೆ ಕಡಿಮೆ ಮಾಡುತ್ತದೆ, ಜೊತೆಗೆ ದೇಹದಿಂದ ಕೊಲೆಸ್ಟ್ರಾಲ್ ಹೊರಹಾಕಲು ತುಂಬಾ ಸಹಾಯ ಮಾಡುತ್ತದೆ.

**ಜೀರ್ಣಾಂಗಕ್ಕೂ ಅತ್ಯುತ್ತಮ:** ನೆಲ್ಲಿಕಾಯಿಯಲ್ಲಿ ಫೈಬರ್ ಕೂಡ ಇದೆ. ಆಮ್ಲಾದಲ್ಲಿರುವ ಫೈಬರ್ ಅಂಶವು ಜೀರ್ಣಾಂಗ ವ್ಯವಸ್ಥೆಯನ್ನು ಸುಧಾರಿಸುತ್ತದೆ. ಜೊತೆಗೆ ಮಲಬದ್ಧತೆಯ ಸಮಸ್ಯೆ ಕಡಿಮೆ ಮಾಡುತ್ತದೆ. ಕರುಳಿನಲ್ಲಿರುವ ಉತ್ತಮ ಬ್ಯಾಕ್ಟೀರಿಯಾಗಳಿಗೆ ಆಹಾರವಾಗಿ ಕಾರ್ಯನಿರ್ವಹಿಸುತ್ತದೆ. ನೆಲ್ಲಿಕಾಯಿಯಲ್ಲಿರುವ ಉತ್ಕರ್ಷಣ ನಿರೋಧಕಗಳು ಯಕೃತ್ತಿನಲ್ಲಿ ಆಕ್ಸಿಡೇಟಿವ್ ಒತ್ತಡ, ಉರಿಯೂತ ಕಡಿಮೆ ಮಾಡುತ್ತದೆ. ಕೊಬ್ಬಿನ ಯಕೃತ್ತಿನ ಸಮಸ್ಯೆಯಿಂದ ಪರಿಹಾರ ಪಡೆದುಕೊಳಲು ಸಹಾಯವಾಗುತ್ತದೆ. ನೆಲ್ಲಿಕಾಯಿಯಲ್ಲಿರುವ ಪೊಟ್ಯಾಸಿಯಮ್, ವಿಟಮಿನ್ ಸಿ ಅಧಿಕ ರಕ್ತದೊತ್ತಡ ನಿಯಂತ್ರಿಸುತ್ತದೆ. ಹೃದಯದ ಮೇಲಿನ ಒತ್ತಡ ಕಡಿಮೆ ಮಾಡುತ್ತದೆ. ಆಮ್ಲಾ ಕೆಟ್ಟ ಕೊಲೆಸ್ಟ್ರಾಲ್, ಟ್ರೈಗ್ಲಿಸರೈಡ್‌ಗಳನ್ನು ಕಡಿಮೆ ಮಾಡುವ ಮೂಲಕ ಉತ್ತಮ ಕೊಲೆಸ್ಟ್ರಾಲ್ ಮಟ್ಟ ಹೆಚ್ಚಿಸುತ್ತದೆ. ಅಪಧಮನಿಗಳ ಗೋಡೆಗಳಲ್ಲಿ ಕೊಬ್ಬು ಸಂಗ್ರಹವಾಗುವುದನ್ನು ತಡೆಯುತ್ತದೆ, ರಕ್ತ ಪರಿಚಲನೆ ಸುಧಾರಿಸುತ್ತದೆ ಹಾಗೂ ಶಕ್ತಿಶಾಲಿ ಉತ್ಕರ್ಷಣ ನಿರೋಧಕಗಳು ಹೃದಯ ಕೋಶಗಳನ್ನು ಆಕ್ಸಿಡೇಟಿವ್ ಒತ್ತಡದಿಂದ ರಕ್ಷಣೆ ಮಾಡುತ್ತದೆ. ಆಮ್ಲಾ ರಕ್ತವನ್ನು ತೆಳುಗೊಳಿಸಲು, ಹೃದಯಾಘಾತದ ಅಪಾಯ ಕಡಿಮೆ ಮಾಡುತ್ತದೆ ಎಂದು ಸಂಶೋಧನೆ ವಿವರಿಸುತ್ತದೆ. ಯಕೃತ್ತನ್ನು ಶುದ್ಧೀಕರಿಸಲು ನೆಲ್ಲಿಕಾಯಿ ಸಹ ಉಪಯುಕ್ತವಾಗಿದೆ. ಆಮ್ಲಾದಲ್ಲಿನ ಪ್ರಬಲವಾದ ಉತ್ಕರ್ಷಣ ನಿರೋಧಕಗಳು ಯಕೃತ್ತಿನಲ್ಲಿ ಸಂಗ್ರಹವಾಗಿರುವ ವಿಷ, ವಿಷಕಾರಿ ತ್ಯಾಜ್ಯವನ್ನು ದೇಹದಿಂದ ಹೊರಹಾಕಲು ತುಂಬಾ ಸಹಾಯ ಮಾಡುತ್ತದೆ. ಯಕೃತ್ತಿನಲ್ಲಿ ಹೆಚ್ಚುವರಿ ಕೊಬ್ಬು ಸಂಗ್ರಹವಾಗುವುದನ್ನು ತಡೆಯುತ್ತದೆ. ಕೊಬ್ಬಿನ ಪಿತ್ತಜನಕಾಂಗದ ಕಾಯಿಲೆಯ ಅಪಾಯ ಕಡಿಮೆ ಮಾಡಲು ಪ್ರಮುಖ ಪಾತ್ರವಹಿಸುತ್ತದೆ. ಆಮ್ಲಾದಲ್ಲಿನ ವಿಟಮಿನ್ ಸಿ ಯಕೃತ್ತಿನ ಕೋಶಗಳನ್ನು ಆಕ್ಸಿಡೇಟಿವ್ ಒತ್ತಡ, ಸ್ವತಂತ್ರ ರಾಡಿಕಲ್‌ಗಳಿಂದ ಉಂಟಾಗುವ ಹಾನಿಯನ್ನು ತಡೆಯುತ್ತದೆ. ಯಕೃತ್ತಿನ ಕಾರ್ಯವನ್ನು ಸುಧಾರಿಸುತ್ತದೆ, ಮತ್ತು ನಂತಹ ಯಕೃತ್ತಿನ ಕಿಣ್ವದ ಮಟ್ಟಗಳು ಸಮತೋಲನದಲ್ಲಿ ಇರಿಸಲು ತುಂಬಾ ಸಹಾಯ ಮಾಡುತ್ತದೆ. ಯಕೃತ್ತಿನ ಮೇಲೆ ಆಲ್ಕೋಹಾಲ್, ಅತಿಯಾದ ಮಾದಕವಸ್ತು ಬಳಕೆಯ ಹಾನಿಕಾರಕ ಪರಿಣಾಮಗಳನ್ನು ಕಡಿಮೆ ಮಾಡುತ್ತದೆ. ಜೀರ್ಣಾಂಗ ವ್ಯವಸ್ಥೆ ಉತ್ತೇಜಿಸುವ ಮೂಲಕ ಪಿತ್ತರಸ ಸ್ರವಿಸುವಿಕೆ ಹೆಚ್ಚಿಸುತ್ತದೆ. ಕೊಬ್ಬಿನ ಜೀರ್ಣಕ್ರಿಯೆ ಹೆಚ್ಚಿಸುತ್ತದೆ, ಯಕೃತ್ತಿನ ದಕ್ಷತೆ ಸುಧಾರಿಸಲು ತುಂಬಾ ಅನುಕೂಲವಾಗುತ್ತದೆ.



ವಿದ್ಯಾರ್ಥಿ ವಿಜಯ

ಡಾ.ಸುಧಾಕರ್ . ಜಿ. ಲಕ್ಕವಳ್ಳಿ
ಲೇಖಕರು
ಸಾಮಾಜಿಕ ಚಿಂತಕರು
92

# ಖಿನ್ನತೆಯ ನೆರಳಲ್ಲಿ ಬೆಳಕಿನ ಕಿರಣ

ಗೆಲುವಿನತ್ತ ಸಾಗಲು ಅಂಕಗಳಷ್ಟೇ ಸಾಲದು, ಸೋಲನ್ನು ಅರಗಿಸಿಕೊಳ್ಳುವ ಧೈರ್ಯ ಮತ್ತು ಸಕಾರಾತ್ಮಕ ಮನೋಧರ್ಮವೂ ಬೇಕು. ಅದರಲ್ಲೂ ಖಿನ್ನತೆಯ ಇರುಳನ್ನು ಎದುರಿಸುವ ಛಲವೇ ಮನಸ್ಸಿನ ಒಳಗಣ ಅಡಿಪಾಯವನ್ನು ಭದ್ರಗೊಳಿಸುತ್ತದೆ. ನರವಿಜ್ಞಾನ ಹೇಳುತ್ತದೆ, ಸಕಾರಾತ್ಮಕ ಚಿಂತನೆ ಮೆದುಳಿನ ರಸದೂತಗಳ ಸಮತೋಲನವನ್ನು ತಿದ್ದುತ್ತದೆ. ಒತ್ತಡ ಇಳಿದಂತೆ ಏಕಾಗ್ರತೆ ಚುರುಕಾಗುತ್ತದೆ, ಸ್ಮೃತಿಶಕ್ತಿ ಹೊಳೆಯುತ್ತದೆ.

ನಿಯಮಿತ ನಿದ್ರೆ, ನಿತ್ಯದ ವ್ಯಾಯಾಮ, ಸಾತ್ವಿಕ ಆಹಾರ, ಇವು ಮನೋಬಲದ ಮೂರು ಸ್ತಂಭಗಳು. ಇದು ಕೇವಲ ಸಲಹೆಯಲ್ಲ, ಮೆದುಳಿನ ಪುನರ್-ವ್ಯವಸ್ಥೆಯ ವಿಜ್ಞಾನ. ಖಿನ್ನತೆಯನ್ನು ದಾಟಿದ ಕಲಿಕಾರ್ಥಿ ಬದುಕನ್ನು ಹೊಸ ಕಣ್ಣಿನಿಂದ ನೋಡಲು ಕಲಿಯುತ್ತಾನೆ.

ಅವನಲ್ಲಿ ಆತ್ಮಪ್ರತ್ಯಯ, ಸಹನೆಯ ಸಿರಿ, ಅವಿರತ ಸಾಧನೆಯ ಬೆಂಕಿ ಮೂಡುತ್ತದೆ.

ಕೊನೆಗೆ ಅರಿವಾಗುವುದು, ಮನೋಬಲವೇ ಯಶಸ್ಸಿಗೆ ದಾರಿ ತೋರುವ ಒಳಗಿನ ದೀಪ. ಆ ದೀಪ ಉರಿದರೆ ಯಾವ ನೆರಳೂ ಉಳಿಯದು.



> ಒತ್ತಡ, ಹಿನ್ನಡೆ ಅಥವಾ ನಿರೀಕ್ಷಿತ ಫಲ ಸಿಗದಾಗ ಮನಸ್ಸನ್ನು ಮುರಿಯುವುದು ಸಹಜ, ಆದರೆ ಅಲ್ಲೇ ನಿಲ್ಲುವುದು ಅಪಾಯ. ಭಾವನೆಗಳನ್ನು ಹಣಿಕದೆ, ಅವುಗಳನ್ನು ಗುರುತಿಸಿ ಆಪ್ತರೊಡನೆ ಹಂಚಿಕೊಳ್ಳುವುದೇ ಮೊದಲ ಮದ್ದು. ನಿತ್ಯದ ದಿನಚರಿ, ಕ್ರಮಬದ್ಧ ಬದುಕು, ಪುಟ್ಟ ಗುರಿಗಳ ಸಾಧನೆ, ಇವು ಮನಸ್ಸಿಗೆ ಆತುಕೊಡುತ್ತವೆ. ಐದು ನಿಮಿಷದ ಉಸಿರಾಟದ ಅಭ್ಯಾಸ, ನೆಚ್ಚಿನ ಹವ್ಯಾಸಕ್ಕೆ ಸಮಯ, ಇವೆಲ್ಲವೂ ನೆರಳಿನ ನಡುವೆ ಬೆಳಕಿನ ಕಿಂಡಿಗಳು.

# ಶ್ರಾದ್ಧವನ್ನು ಯಾವಾಗ ಮಾಡಬೇಕು ?

## ಪಿತೃಪಕ್ಷದ ನಿಮಿತ್ತ ಸನಾತನ ಸಂಸ್ಥೆಯ ವಿಶೇಷ ಲೇಖನ

**ಸಾಧಾರಣ ಯೋಗ್ಯ ತಿಥಿಗಳು :** ಸಾಮಾನ್ಯವಾಗಿ ಅಮಾವಾಸ್ಯೆ, ವರ್ಷದ ಹನ್ನೆರಡು ಸಂಕ್ರಾಂತಿಗಳು, ಚಂದ್ರ-ಸೂರ್ಯಗ್ರಹಣ, ಯುಗಾದಿ ಮತ್ತು ಮನ್ವಾದಿ ತಿಥಿಗಳು, ಅರ್ಧೋದಯಾದಿ ಪರ್ವಗಳು, ಮರಣ ಹೊಂದಿದ ದಿನ, ಶ್ರೋತ್ರೀಯ ಬ್ರಾಹ್ಮಣರ ಆಗಮನ ಇತ್ಯಾದಿ ತಿಥಿಗಳು ಶ್ರಾದ್ಧವನ್ನು ಮಾಡಲು ಯೋಗ್ಯವಾಗಿವೆ. ಶ್ರಾದ್ಧವಿಧಿಯನ್ನು ಒಂದು ವಿಶಿಷ್ಟ ಕಾಲದಲ್ಲಿ ಮಾಡಲು ಆಗಲಿಲ್ಲ, ಆದುದರಿಂದ ಶ್ರಾದ್ಧವನ್ನು ಮಾಡಲಿಲ್ಲ ಎಂದು ಹೇಳಲು ಯಾರಿಗೂ ಅವಕಾಶವನ್ನು ನೀಡದ ಹಿಂದೂ ಧರ್ಮ ಸಾಮಾನ್ಯವಾಗಿ ಪ್ರತಿವರ್ಷ ಮರಣ ಹೊಂದಿದ ತಿಥಿಯ ದಿನ (ಆಂಗ್ಲ ದಿನದರ್ಶಿಕೆಯ ದಿನಾಂಕದಂದು ಮಾಡದೇ, ಹಿಂದೂ ಪಂಚಾಂಗದ ಪ್ರಕಾರ ಇರುವ ತಿಥಿಯಂದು) ಶ್ರಾದ್ಧವನ್ನು ಮಾಡಬೇಕು.

ಮೃತ್ಯುವಿನ ತಿಥಿಯು ಗೊತ್ತಿಲ್ಲದೇ, ಕೇವಲ ತಿಂಗಳು ಮಾತ್ರ ಗೊತ್ತಿದ್ದರೆ ಆ ತಿಂಗಳ ಅಮಾವಾಸ್ಯೆಯಂದು ಶ್ರಾದ್ಧವನ್ನು ಮಾಡಬೇಕು. ಮೃತ್ಯುವಿನ ತಿಥಿ ಮತ್ತು ತಿಂಗಳು ಎರಡೂ ಗೊತ್ತಿಲ್ಲದಿದ್ದರೆ ಮಾಘ ಅಥವಾ ಮಾರ್ಗಶಿರ ಅಮಾವಾಸ್ಯೆಗೆ ಶ್ರಾದ್ಧವನ್ನು ಮಾಡಬೇಕು. ನಿಶ್ಚಿತವಾಗಿ ಮರಣದ ತಿಥಿಯು ಗೊತ್ತಿಲ್ಲದಿದ್ದರೆ ಮರಣದ ವಾರ್ತೆಯು ತಿಳಿದ ದಿನದಂದು ಶ್ರಾದ್ಧವನ್ನು ಮಾಡಬೇಕು. ಪಿತೃಗಳ ಶ್ರಾದ್ಧವನ್ನು ಪ್ರತಿದಿನ ಮಾಡಬೇಕು.

ಇದನ್ನು ನೀರಿನಿಂದ ಅಂದರೆ ಪಿತೃಗಳಿಗೆ ತರ್ಪಣವನ್ನು ನೀಡಿ ಮಾಡಬಹುದು. ಪ್ರತಿದಿನ ಮಾಡಲು ಸಾಧ್ಯವಾಗದಿದ್ದರೆ, ದರ್ಶಶ್ರಾದ್ಧವನ್ನು ಮಾಡಬೇಕು. ಇದರಿಂದ ನಿತ್ಯ ಶ್ರಾದ್ಧದ ಸಿದ್ಧಿ ಆಗುತ್ತದೆ.

ದರ್ಶ ಎಂದರೆ ಅಮಾವಾಸ್ಯೆ. ಪ್ರತಿ ತಿಂಗಳ ಅಮಾವಾಸ್ಯೆಯಂದು ಮಾಡುವ ಶ್ರಾದ್ಧವೇ ದರ್ಶಶ್ರಾದ್ಧ. ಪ್ರತಿ ತಿಂಗಳು ದರ್ಶಶ್ರಾದ್ಧವನ್ನು ಮಾಡಲು ಆಗದಿದ್ದರೆ ಚೈತ್ರ, ಭಾದ್ರಪದ ಮತ್ತು ಆಶ್ವಯುಜ ಮಾಸಗಳ ಅಮಾವಾಸ್ಯೆಯಂದು ಮಾಡಬೇಕು. ದರ್ಶಶ್ರಾದ್ಧವನ್ನು ಚೈತ್ರ, ಭಾದ್ರಪದ ಮತ್ತು ಆಶ್ವಯುಜ ಮಾಸಗಳ ಅಮಾವಾಸ್ಯೆಯಂದು ಮಾಡಲು ಆಗದಿದ್ದರೆ ಭಾದ್ರಪದ ತಿಂಗಳಿನ ಪಿತೃಪಕ್ಷದಲ್ಲಿ ಮಹಾಲಯ ಶ್ರಾದ್ಧವನ್ನಾದರೂ ಅವಶ್ಯವಾಗಿ ಮಾಡಬೇಕು. ಇದೂ ಸಾಧ್ಯವಾಗದಿದ್ದರೆ ಭಾದ್ರಪದ ಅಮಾವಾಸ್ಯೆಗೆ ಎಂದರೆ (ಸರ್ವಪಿತ್ರೀ ಅಮಾವಾಸ್ಯೆಯಂದು) ಶ್ರಾದ್ಧವನ್ನು ಮಾಡಬೇಕು.

**ಸರ್ವಪಿತ್ರೀ ಅಮಾವಾಸ್ಯೆಯ ಮಹತ್ವ :** ಭಾದ್ರಪದ ಅಮಾವಾಸ್ಯೆಯಂದು ನಮ್ಮ ಕುಲದಲ್ಲಿದ್ದ ಪಿತೃಗಳನ್ನು ಉದ್ದೇಶಿಸಿ ಶ್ರಾದ್ಧ ಮಾಡಲಾಗುತ್ತದೆ. ಆದುದರಿಂದ ಈ ಅಮಾವಾಸ್ಯೆಯನ್ನು ಸರ್ವಪಿತ್ರೀ ಅಮಾವಾಸ್ಯೆ ಎಂದು ಕರೆಯಲಾಗಿದೆ. ಪಿತೃಪಕ್ಷದ ಅಮಾವಾಸ್ಯೆಗೆ ಸರ್ವಪಿತ್ರಿ ಅಮಾವಾಸ್ಯೆ ಎನ್ನುತ್ತಾರೆ. ಈ ತಿಥಿಯಂದು ಎಲ್ಲರೂ ಶ್ರಾದ್ಧ ಮಾಡುವುದು ಅತ್ಯಂತ ಆವಶ್ಯಕವಾಗಿದೆ. ಏಕೆಂದರೆ ಪಿತೃಪಕ್ಷದಲ್ಲಿ ಇದು ಕೊನೆಯ ತಿಥಿಯಾಗಿದೆ. ವ್ಯಕ್ತಿಯ ಮೃತ್ಯುವಿನ ತಿಥಿಯು ತಿಳಿಯದಿದ್ದರೆ ಅವರು ಮೃತಪಟ್ಟ ತಿಂಗಳಿನ ಅಮಾವಾಸ್ಯೆಯಂದು ಶ್ರಾದ್ಧಕರ್ಮವನ್ನು ಮಾಡಬಹುದು ಎಂದು, ಹಾಗು ಅದು ಕೂಡ ತಿಳಿಯದಿದ್ದರೆ ಸರ್ವಪಿತ್ರೀ ಅಮಾವಾಸ್ಯೆಯಂದು ಶ್ರಾದ್ಧವನ್ನು ಮಾಡಬೇಕೆಂದು ಶಾಸ್ತ್ರಗಳಲ್ಲಿ ತಿಳಿಸಲಾಗಿದೆ. ಅಮಾವಾಸ್ಯೆಯು ಶ್ರಾದ್ಧ ಮಾಡಲು ಹೆಚ್ಚು ಯೋಗ್ಯವಾದ ತಿಥಿಯಾಗಿದೆ ಮತ್ತು ಪಿತೃಪಕ್ಷದ ಅಮಾವಾಸ್ಯೆಯು ಎಲ್ಲಕ್ಕಿಂತಲೂ ಹೆಚ್ಚು ಸೂಕ್ತವಾದ ತಿಥಿಯಾಗಿದೆ ಎಂದು ಶಾಸ್ತ್ರದಲ್ಲಿ ಹೇಳಲಾಗಿದೆ.

ಇತರ ದಿನಗಳಲ್ಲಿ ಅಥವಾ ವ್ಯಕ್ತಿ ಮೃತಪಟ್ಟ ತಿಥಿಯಂದು ಶ್ರಾದ್ಧವನ್ನು ಮಾಡಲು ಆಗದಿದ್ದರೆ ಸರ್ವಪಿತ್ರೀ ಅಮಾವಾಸ್ಯೆಯಂದು ಶ್ರಾದ್ಧವನ್ನು ಮಾಡುವುದರಿಂದ ಮೃತ ವ್ಯಕ್ತಿಗೆ ಅದರ ಲಾಭವಾಗುತ್ತದೆ. ಮೃತ ವ್ಯಕ್ತಿಯ ಶ್ರಾದ್ಧವನ್ನು ಮಾಡುವ ತಿಥಿಯು ಜನನಾಶೌಚ ಅಥವಾ ಮರಣಾಶೌಚ ಇರುವ ಸಮಯದಲ್ಲಿ ಬಂದರೆ ಆಗ ಸರ್ವಪಿತ್ರೀ ಅಮಾವಾಸ್ಯೆಯಂದು ಶ್ರಾದ್ಧವನ್ನು ಮಾಡಬಹುದು.

ಈ ದಿನದಂದು ಹೆಚ್ಚಿನ ಎಲ್ಲಾ ಮನೆಗಳಿಂದ ಕನಿಷ್ಟ ಒಬ್ಬ ಬ್ರಾಹ್ಮಣನನ್ನಾದರೂ ಭೋಜನಕ್ಕೆ ಕರೆಯುತ್ತಾರೆ. ಕೆಲವರಲ್ಲಿ ಬ್ರಾಹ್ಮಣರಿಗೆ ಆಹಾರಸಾಮಗ್ರಿಗಳನ್ನು ಕೊಡುವ ರೂಢಿಯಿದೆ.

**ಶ್ರಾದ್ಧಕ್ಕೆ ಯೋಗ್ಯಕಾಲ :** ದಿನವನ್ನು 5 ಭಾಗಗಳಾಗಿ ಮಾಡಿದರೆ ಅದರ ನಾಲ್ಕನೆಯ ಭಾಗಕ್ಕೆ ಅಪರಾಹ್ಣ ಎನ್ನುತ್ತಾರೆ. ಇದನ್ನು ಶ್ರಾದ್ಧಕ್ಕೆ ಯೋಗ್ಯಕಾಲವೆಂದು ತಿಳಿಯಬೇಕು.

ಶ್ರೀ ವಿನೋದ ಕಾಮತ್, ರಾಜ್ಯ ವಕ್ತಾರರು, ಸನಾತನ ಸಂಸ್ಥೆ




# ಪಿತೃಪಕ್ಷದ ಪ್ರಯುಕ್ತ ಗರುಡ ಪುರಾಣ ಪ್ರವಚನ

• ಉದಯವಾಹಿನಿ, ಬೆಂಗಳೂರು



ನಗರದ ವಿವಿಧ ಧಾರ್ಮಿಕ ಕೇಂದ್ರಗಳಲ್ಲಿ ಪಿತೃ ಪಕ್ಷದ ಪ್ರಯುಕ್ತ ಗರುಡ ಪುರಾಣ ಧಾರ್ಮಿಕ ಪ್ರವಚನ ಏರ್ಪಡಿಸಿದೆ.

**ಸುಧೀಂದ್ರನಗರ :** ಶ್ರೀ ರಾಘವೇಂದ್ರ ಸೇವಾ ಸಮಿತಿಯ ವತಿಯಿಂದ ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 10ರ ವರೆಗೆ ಪ್ರತಿದಿನ ಸಂಜೆ 7-00ಕ್ಕೆ ಮ॥ಶಾ॥ಸಂ॥ ಶ್ರೀ ಚಿಮ್ಮಲಗಿ ಆಚಾರ್ಯರಿಂದ ಗರುಡ ಪುರಾಣ ಪ್ರವಚನ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 6ನೇ ಅಡ್ಡರಸ್ತೆ, ಸುಧೀಂದ್ರನಗರ, ಬೆಂಗಳೂರು

**ಸುಬ್ರಹ್ಮಣ್ಯನಗರ :** ಸೋಸಲೆ ಶ್ರೀ ವ್ಯಾಸರಾಜ ಮಠದ ವತಿಯಿಂದ ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 3ರ ವರೆಗೆ ಪ್ರತಿದಿನ ಸಂಜೆ 6-00ಕ್ಕೆ ಮ॥ಶಾ॥ಸಂ॥

ಶ್ರೀ ಧನಂಜಯಾಚಾರ್ಯರಿಂದ ಗರುಡ ಪುರಾಣ ಪ್ರವಚನ. ಸ್ಥಳ : ಶ್ರೀ ವ್ಯಾಸರಾಜ ಮಠ (ಸೋಸಲೆ), 5ನೇ ಮುಖ್ಯರಸ್ತೆ, ಸುಬ್ರಹ್ಮಣ್ಯನಗರ, ರಾಜಾಜಿನಗರ 2ನೇ ಹಂತ, ಬೆಂಗಳೂರು

**ಮಲ್ಲೇಶ್ವರಂ :** ಶ್ರೀಮನ್ಮಾಧ್ವಸಂಘದ ವತಿಯಿಂದ ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 10ರ ವರೆಗೆ ಪ್ರತಿದಿನ ಸಂಜೆ 6-45ಕ್ಕೆ ಮ॥ಶಾ॥ಸಂ॥ ಶ್ರೀ ಚಂದ್ರಶೇಖರ ಆಚಾರ್ಯರಿಂದ ಗರುಡ ಪುರಾಣ ಪ್ರವಚನ. ಸ್ಥಳ : ಮಾಧ್ವಸಂಘ, 8ನೇ ಅಡ್ಡರಸ್ತೆ, ಮಲ್ಲೇಶ್ವರಂ, ಬೆಂಗಳೂರು.

**ವಿಜಯನಗರ :** ವಿಜಯ ಮಧ್ವ ಸಂಘದ ವತಿಯಿಂದ ಸೆಪ್ಟೆಂಬರ್ 27 ರಿಂದ ಅಕ್ಟೋಬರ್ 3ರವರೆಗೆ ಪ್ರತಿದಿನ ಸಂಜೆ 6-30ಕ್ಕೆ ಮ॥ಶಾ॥ಸಂ॥

ಶ್ರೀ ಸಮೀರಾಚಾರ್ಯರಿಂದ ಗರುಡ ಪುರಾಣ ಪ್ರವಚನ. ಸ್ಥಳ : ವಿಜಯ ಮಧ್ವಸಂಘ, 37/2, ಗಂಗಾಧರ ಬಡಾವಣೆ, ವಿಜಯನಗರ, ಬೆಂಗಳೂರು.

**ಪ್ರಕಾಶನಗರ :** ಶ್ರೀ ಗುರು ರಾಘವೇಂದ್ರ ಸೇವಾ ಟ್ರಸ್ಟ್ ವತಿಯಿಂದ ಸೆಪ್ಟೆಂಬರ್ 27ರಿಂದ ಅಕ್ಟೋಬರ್ 3ರ ವರೆಗೆ ಪ್ರತಿದಿನ ಸಂಜೆ 7-00ಕ್ಕೆ ಮ॥ಶಾ॥ಸಂ॥ ಶ್ರೀ ಹರಿ ಆಚಾರ್ಯರಿಂದ ಗರುಡ ಪುರಾಣ ಪ್ರವಚನ. ಸ್ಥಳ : ಶ್ರೀ ರಾಘವೇಂದ್ರ ಸ್ವಾಮಿಗಳ ಮಠ, 11ನೇ ಮುಖ್ಯರಸ್ತೆ, ಪ್ರಕಾಶನಗರ, ಬೆಂಗಳೂರು.



ಕಲಾ ಸಾಹಿತ್ಯ
ವೈ.ಕೆ. ಸಂಧ್ಯಾ ಶರ್ಮ
ಲೇಖಕರು
ರಂಗಕರ್ಮಿ ಹಾಗೂ ನೃತ್ಯ ನಾಟಕಗಳ ವಿಮರ್ಶಕರು

## ಉದಯೋನ್ಮುಖ ಕಲಾವಿದೆ ಕು. ಅಕ್ಷ್ಯಾ ಶ್ರೀವತ್ಸನ್ ಸಂಗೀತದ ಅರಂಗೇಟ್ರಂ

ಕರ್ನಾಟಕ ಶಾಸ್ತ್ರೀಯ ಸಂಗೀತ - ಭರತನಾಟ್ಯ ಮತ್ತು ವೀಣಾವಾದನದ ತ್ರಿವಳಿ ಕಲಾರಂಗಗಳಲ್ಲಿ ಶಾಸ್ತ್ರೀಯವಾಗಿ ಅಭ್ಯಾಸ ಮಾಡುತ್ತಿರುವ ಕು. ಅಕ್ಷ್ಯಾ ಶ್ರೀವತ್ಸನ್ ಭರವಸೆಯ ಬಹುಮುಖ ಪ್ರತಿಭೆ.

ಶ್ರೀಮತಿ ಅನುಷಾ ಮತ್ತು ಶ್ರೀವತ್ಸನ್ ಅವರ ಹಿರಿಯ ಮಗಳಾದ ಅಕ್ಷ್ಯಾ, ಸಂಗೀತ ರಂಗದ ದಿಗ್ಗಜೆ ಡಾ. ಪುಸ್ತಕಂ ರಮಾ ಅವರ ನುರಿತ ಬಾನಿಯಲ್ಲಿ ವಿಕಸನಗೊಳ್ಳುತ್ತಿರುವ ಗಾನ ಕುಸುಮ. ತನ್ನ ನಾಲ್ಕನೆಯ ವಯಸ್ಸಿಗೇ ಕರ್ನಾಟಕ ಶಾಸ್ತ್ರೀಯ ಸಂಗೀತ ಕಲಿಯಲಾರಂಭಿಸಿರುವ ಹದಿನೇಳು ವರ್ಷದ ಅಕ್ಷ್ಯಾ, ಕಳೆದ 13 ವರ್ಷಗಳಿಂದ ಸತತವಾಗಿ ಸಂಗೀತ ಕಲಿಕೆಯಲ್ಲಿ ಪರಿಶ್ರಮಿಸುತ್ತಿದ್ದು, ಓದಿನಲ್ಲಿ ಜಾಣೆಯಾಗಿದ್ದು, ತನ್ನ ಕಲಾತ್ಮಕ ಒಲವಿನ ಜೊತೆಗೆ, ನಾರಾಯಣ ಇ-ಟೆಕ್ನೋ ಶಾಲೆಯಲ್ಲಿ ಸಿಬಿಎಸ್‌ಇ 10 ನೇ ತರಗತಿ ಮತ್ತು 12 ನೇ ತರಗತಿಗಳ ಮಂಡಳಿ ಪರೀಕ್ಷೆಗಳೆರಡರಲ್ಲೂ ಪ್ರಥಮ ಶ್ರೇಣಿ ಗಳಿಸಿ, ಶಾಲೆಯ ಟಾಪರ್ ಎನಿಸಿಕೊಂಡಿದ್ದಾಳೆ. ಸತತ ಐದು ವರ್ಷಗಳಿಗೂ ಹೆಚ್ಚು ಕಾಲ ಶಾಲೆಯ ಅತ್ಯುತ್ತಮ ಆಲ್-ರೌಂಡರ್ ಪ್ರಶಸ್ತಿ ಪಡೆದಿರುವುದು ಅವಳ ವಿಶೇಷತೆ. ಇದೀಗ ಇವಳು ವೈದ್ಯಕೀಯ ವಿದ್ಯಾಭ್ಯಾಸ (ಎಂ.ಬಿ.ಬಿ.ಎಸ್.)ಕ್ಕೆ ಸೇರ್ಪಡೆಯಾಗಲಿದ್ದಾಳೆ.

ಉತ್ತಮ ಗಾಯಕಿಯಾದ ಇವಳು, ನಾಡಿನಾದ್ಯಂತ ಅನೇಕ ಉತ್ತಮ ವೇದಿಕೆಗಳ ಸಂಗೀತ ಕಾರ್ಯಕ್ರಮಗಳಲ್ಲಿ ಹಾಡಿರುವ ಇವಳು ಅನೇಕ ಬಹುಮಾನಗಳನ್ನೂ ಗಳಿಸಿಕೊಂಡಿರುವ ಹೆಮ್ಮೆ ಅವಳದು. ಇತ್ತೀಚೆಗೆ ತಾನೇ ತನ್ನ ಭರತನಾಟ್ಯದ ರಂಗಪ್ರವೇಶ ನೆರವೇರಿಸಿಕೊಂಡಿರುವ ಅಕ್ಷ್ಯಾ ಇದೀಗ ಅಕ್ಟೋಬರ್ 2 ಶುಕ್ರವಾರ ಸಂಜೆ 5.30 ಕ್ಕೆ ಮಲ್ಲೇಶ್ವರದ ಸೇವಾಸದನ'ದಲ್ಲಿ ತನ್ನ ಸಂಗೀತದ ರಂಗಪ್ರವೇಶ ಅರಂಗೇಟ್ರಂ ಅನ್ನು ವಿದ್ಯುಕ್ತವಾಗಿ ನೆರವೇರಿಸಿಕೊಳ್ಳಲಿದ್ದಾಳೆ. ನಾಲ್ಕುವರ್ಷದ ಸಣ್ಣ ಬಾಲಕಿಯಾಗಿದ್ದಾಗಲೇ ಡಾ. ಪುಸ್ತಕಂ ರಮಾ ಅವರಲ್ಲಿ ಕರ್ನಾಟಕ ಸಂಗೀತವನ್ನು ಶಾಸ್ತ್ರೀಯವಾಗಿ ಕಲಿಯಲು ಸೇರ್ಪಡೆಯಾದಳು.

ಜೊತೆಗೆ ವೀಣಾವಾದನವನ್ನು ಗುರು ಗೀತಾ ರಮಾನಂದ್ ಅವರಲ್ಲಿ ಮತ್ತು ಗುರು ಮಿನಾಲ್ ಪ್ರಭುರಲ್ಲಿ ಭರತನಾಟ್ಯ ಕಲಿಯುತ್ತಿರುವುದು ಇವಳ ಅಗ್ಗಳಿಕೆ. ಕು. ಅಕ್ಷ್ಯಾ, ಇದುವರೆಗೂ ಅನೇಕ ಸಭಾಗಳು, ದೇವಾಲಯದ ಉತ್ಸವಗಳು, ನಿರಂತರಂ ಕಛೇರಿ ಸರಣಿಗಳಲ್ಲಿ ಏಕವ್ಯಕ್ತಿ ಪ್ರದರ್ಶನಗಳನ್ನು ನೀಡಿದ್ದಾಳೆ.



ಕಳೆದ 11 ವರ್ಷಗಳಿಂದ ಭರತನಾಟ್ಯವನ್ನು ಕಲಿಯುತ್ತಿದ್ದು ಇತ್ತೀಚೆಗಷ್ಟೇ ಯಶಸ್ವಿಯಾಗಿ ತನ್ನ ರಂಗಪ್ರವೇಶ ನೆರವೇರಿಸಿಕೊಂಡಿದ್ದಾಳೆ.

ಓದಿನಲ್ಲೂ ಬುದ್ಧಿವಂತೆಯಾಗಿರುವ ಅಕ್ಷ್ಯಾ, ಅನೇಕ ಪ್ರವೇಶ ಪರೀಕ್ಷೆಗಳಲ್ಲಿ ಶ್ರೇಷ್ಠ ಅಂಕಗಳಿಂದ ಜಯಶಾಲಿ ಆಗಿರುವುದು ನಿಜಕ್ಕೂ ಅಚ್ಚರಿಯ ಸಂಗತಿ.

ಜೆಇಇ ಮೇನ್‌ನಲ್ಲಿ 96 %, ಐಐಟಿ ಮದ್ರಾಸ್‌ನಲ್ಲಿ ಸೀಟುಗಳಿಕೆ, ಕೆಸಿಇಟಿ -ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದಲ್ಲಿ ಅರ್ಹತಾ ಸೀಟು ಮತ್ತು ಕಾಮೆಡ್-ಕೆ ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ, ಆಹಾರ ವಿಜ್ಞಾನಗಳು, ನರ್ಸಿಂಗ್, ವೆಟರ್ನರಿ ಸೈನ್ಸಸ್ ಮತ್ತು ಸೆರಿಕಲ್ಚರ್‌ನಂತಹ ವಿಭಾಗಗಳಲ್ಲೂ ಅರ್ಹತೆ ಪಡೆದಿರುವುದೂ ಕೂಡ ಅವಳ ಅಗ್ಗಳಿಕೆ. ವೈದ್ಯಕೀಯ ವಿದ್ಯಾಭ್ಯಾಸದ ಅದಮ್ಯ ಒಲವು- ಉತ್ಸಾಹದ ಫಲ ಅಕ್ಷ್ಯಾ, ನೀಟ್ 2026 ರಲ್ಲಿ ಟಾಪರ್ ಆಗಿದ್ದು, ಶೀಘ್ರದಲ್ಲೇ ಇವಳು ವೈದ್ಯಕೀಯ ಅಭ್ಯಾಸಕ್ಕೆ ಪದಾರ್ಪಣೆ ಮಾಡಲಿದ್ದಾಳೆ. ಈ ಬಹುಮುಖ ಪ್ರತಿಭಾವಂತೆ, ಭವಿಷ್ಯದಲ್ಲಿ ಉತ್ತಮ ವೈದ್ಯೆಯಾಗಿ ಸಮಾಜಕ್ಕೆ ಸೇವೆ ಸಲ್ಲಿಸುವ ಆಕಾಂಕ್ಷೆಯುಳ್ಳ ಕು. ಅಕ್ಷ್ಯಾಗೆ ಹಾರ್ದಿಕ ಅಭಿನಂದನೆಗಳು.

> ಸಾಮಾಜಿಕ ಜಾಲತಾಣಗಳಲ್ಲಿ ಇತರರ ಯಶಸ್ಸನ್ನು ನೋಡುತ್ತಾ ನಮ್ಮ ಜೀವನವನ್ನು ಅವರ ಜೀವನದೊಂದಿಗೆ ಹೋಲಿಸಿಕೊಳ್ಳುವ ಅಭ್ಯಾಸ ಹೆಚ್ಚಾಗಿದೆ. ಆದರೆ ನಾವು ನೋಡುವುದು ಅವರ ಜೀವನದ ಒಂದು ಭಾಗ ಮಾತ್ರ. ಪ್ರತಿಯೊಬ್ಬ ಯಶಸ್ವಿ ವ್ಯಕ್ತಿಯ ಹಿಂದೆ ಕಾಣದ ಹೋರಾಟವಿರುತ್ತದೆ.



ಲೇಖಕರು
ವಿಶ್ವಾಸ್ .ಡಿ.ಗೌಡ
ಲೇಖಕರು
ಸಾಮಾಜಿಕ ಚಿಂತಕರು

# ಕಷ್ಟದ ದಿನಗಳು ಶಾಶ್ವತವಲ್ಲ; ಭರವಸೆ ಕಳೆದುಕೊಳ್ಳಬೇಡಿ!

ಚಾರ್ಲಿ ಚಾಪ್ಲಿನ್ ಜೀವನದಿಂದ ಕಲಿಯಬೇಕಾದ ಮಹತ್ವದ ಪಾಠ .ಜೀವನವೆಂದರೆ ಯಾವಾಗಲೂ ಸಂತೋಷ, ಯಶಸ್ಸು ಮತ್ತು ನೆಮ್ಮದಿಯಿಂದ ಕೂಡಿರುವುದಿಲ್ಲ. ಕೆಲವೊಮ್ಮೆ ಗೆಲುವು ನಮ್ಮನ್ನು ಹುಡುಕಿಕೊಂಡು ಬಂದರೆ, ಮತ್ತೊಮ್ಮೆ ಸೋಲು ಮತ್ತು ಸಂಕಷ್ಟಗಳು ನಮ್ಮನ್ನು ಪರೀಕ್ಷಿಸುತ್ತವೆ. ಆದರೆ ಕಷ್ಟದ ಸಮಯದಲ್ಲಿ ನಾವು ಕಳೆದುಕೊಳ್ಳಬಾರದ ಒಂದು ಅಮೂಲ್ಯವಾದ ಸಂಪತ್ತು ಎಂದರೆ ಭರವಸೆ. ಕಷ್ಟಗಳು ಶಾಶ್ವತವಲ್ಲ ಅವು ನಮ್ಮ ಬದುಕಿನ ಒಂದು ಹಂತ ಮಾತ್ರ. ಈ ಸತ್ಯವನ್ನು ವಿಶ್ವಪ್ರಸಿದ್ಧ ಹಾಸ್ಯನಟ, ನಟ ಹಾಗೂ ನಿರ್ದೇಶಕ ಚಾರ್ಲಿ ಚಾಪ್ಲಿನ್ ಅವರ ಜೀವನ ನಮಗೆ ಬಹಳ ಪರಿಣಾಮಕಾರಿಯಾಗಿ ಕಲಿಸುತ್ತದೆ.

ಚಾರ್ಲಿ ಚಾಪ್ಲಿನ್‌ರನ್ನು ನೋಡಿದಾಗ ನಮ್ಮ ಕಣ್ಣ ಮುಂದೆ ನಗುವಿನ ಮುಖ ಮೂಡುತ್ತದೆ. ಅವರ ಸಿನಿಮಾಗಳನ್ನು ನೋಡಿ ಜಗತ್ತಿನ ಕೋಟ್ಯಂತರ ಜನರು ನಕ್ಕಿದ್ದಾರೆ. ಆದರೆ ಆ ನಗುವಿನ ಹಿಂದೆ ಅವರ ಜೀವನದಲ್ಲಿ ಅಡಗಿದ್ದ ನೋವು, ಬಡತನ, ಹೋರಾಟ ಮತ್ತು ಅನೇಕ ಸವಾಲುಗಳ ಕಥೆಯಿದೆ. ಬಾಲ್ಯದಲ್ಲಿಯೇ ಅನೇಕ ಕಷ್ಟಗಳನ್ನು ಎದುರಿಸಿದ ಅವರು, ಬದುಕಿನ ಕಠಿಣ ಪರಿಸ್ಥಿತಿಗಳ ನಡುವೆಯೂ ತಮ್ಮಲ್ಲಿದ್ದ ಕಲೆಯನ್ನು ಬೆಳೆಸಿಕೊಂಡರು. ಸಂಕಷ್ಟಗಳು ಅವರನ್ನು ಕುಗ್ಗಿಸಲಿಲ್ಲ. ಬದಲಿಗೆ ಅವರ ಪ್ರತಿಭೆಗೆ ಮತ್ತಷ್ಟು ಶಕ್ತಿ ನೀಡಿದವು.

ಇದು ಪ್ರತಿಯೊಬ್ಬರ ಬದುಕಿಗೂ ಅನ್ವಯವಾಗುವ ಪಾಠ. ಇಂದು ನಮ್ಮ ಜೀವನದಲ್ಲಿ ಸಮಸ್ಯೆ ಎದುರಾದಾಗ, ''ಇದೇ ನನ್ನ ಜೀವನದ ಅಂತ್ಯ'' ಎಂದು ಭಾವಿಸುವುದು ಸಹಜ. ಉದ್ಯೋಗ ಕಳೆದುಕೊಂಡಿರಬಹುದು, ವ್ಯವಹಾರದಲ್ಲಿ ನಷ್ಟವಾಗಿರಬಹುದು, ಕುಟುಂಬದಲ್ಲಿ ಸಮಸ್ಯೆ ಎದುರಾಗಿರಬಹುದು, ಸಂಬಂಧಗಳಲ್ಲಿ ಬಿರುಕು ಮೂಡಿರಬಹುದು ಅಥವಾ ನಿರೀಕ್ಷಿಸಿದ ಯಶಸ್ಸು ಸಿಗದೆ ಇರಬಹುದು. ಇಂತಹ ಸಂದರ್ಭಗಳಲ್ಲಿ ಮನಸ್ಸು ಕುಗ್ಗುವುದು ಸಹಜ. ಆದರೆ ಒಂದು ಕಷ್ಟದ ದಿನವೇ ಇಡೀ ಜೀವನದ ಕಥೆಯಾಗುವುದಿಲ್ಲ.



ಮಳೆ ಬಂದಾಗ ಆಕಾಶವೆಲ್ಲಾ ಕತ್ತಲಾಗಿ ಕಾಣುತ್ತದೆ. ಆದರೆ ಮಳೆ ನಿಂತ ನಂತರ ಅದೇ ಆಕಾಶದಲ್ಲಿ ಸೂರ್ಯ ಕಾಣಿಸಿಕೊಳ್ಳುತ್ತಾನೆ. ಹಾಗೆಯೇ ಜೀವನದಲ್ಲಿಯೂ ದುಃಖದ ನಂತರ ಸಂತೋಷ, ಸೋಲಿನ ನಂತರ ಗೆಲುವು, ಕತ್ತಲೆಯ ನಂತರ ಬೆಳಕು ಬರುವ ಸಾಧ್ಯತೆ ಸದಾ ಇರುತ್ತದೆ. ನಮ್ಮ ಕೆಲಸವೆಂದರೆ ಆ ಬೆಳಕಿನ ನಿರೀಕ್ಷೆಯನ್ನು ಕಳೆದುಕೊಳ್ಳದೆ ಮುಂದುವರಿಯುವುದು.

ಚಾರ್ಲಿ ಚಾಪ್ಲಿನ್ ಅವರ ಜೀವನದ ಮತ್ತೊಂದು ದೊಡ್ಡ ಸಂದೇಶವೆಂದರೆ ನಮ್ಮ ನೋವನ್ನು ನಮ್ಮ ಶಕ್ತಿಯನ್ನಾಗಿ ಪರಿವರ್ತಿಸಿಕೊಳ್ಳಬೇಕು ಎಂಬುದು. ಬದುಕಿನಲ್ಲಿ ಎದುರಾಗುವ ಪ್ರತಿಯೊಂದು ಅನುಭವವೂ ನಮಗೆ ಯಾವುದೋ ಒಂದು ಪಾಠ ಕಲಿಸುತ್ತದೆ. ಸೋಲು ನಮಗೆ ತಪ್ಪುಗಳನ್ನು ತಿಳಿಸುತ್ತದೆ. ಸಂಕಷ್ಟ ನಮ್ಮ ಸಹನೆಯನ್ನು ಹೆಚ್ಚಿಸುತ್ತದೆ. ಅವಮಾನ ನಮ್ಮ ಆತ್ಮವಿಶ್ವಾಸವನ್ನು ಪರೀಕ್ಷಿಸುತ್ತದೆ. ಹೋರಾಟ ನಮ್ಮ ಸಾಮರ್ಥ್ಯವನ್ನು ನಮಗೇ ಪರಿಚಯಿಸುತ್ತದೆ.

ಆದ್ದರಿಂದ ಮತ್ತೊಬ್ಬರ ಯಶಸ್ಸನ್ನು ನೋಡಿ ನಮ್ಮ ಜೀವನ ವಿಫಲವಾಗಿದೆ ಎಂದು ಭಾವಿಸುವ ಅಗತ್ಯವಿಲ್ಲ. ಕಷ್ಟ ಬಂದಾಗ ನಿರ್ಧಾರ ತೆಗೆದುಕೊಳ್ಳುವ ಮೊದಲು ಸ್ವಲ್ಪ ಸಮಯ ನೀಡಿ. ನೋವು ಬಂದಾಗ ಭರವಸೆಯನ್ನು ಕಳೆದುಕೊಳ್ಳಬೇಡಿ. ಸೋಲು ಬಂದಾಗ ಪ್ರಯತ್ನವನ್ನು ನಿಲ್ಲಿಸಬೇಡಿ.

ಜೀವನದಲ್ಲಿ ಕೆಲವೊಮ್ಮೆ ನಮಗೆ ಬೇಕಾದ ಬಾಗಿಲು ಮುಚ್ಚಬಹುದು. ಆದರೆ ಅದರಿಂದ ಎಲ್ಲಾ ಬಾಗಿಲುಗಳು ಮುಚ್ಚಿವೆ ಎಂದರ್ಥವಲ್ಲ. ಹೊಸ ದಾರಿ ನಮ್ಮ ಮುಂದೆ ತೆರೆದುಕೊಳ್ಳಬಹುದು. ನಾವು ಮಾಡಬೇಕಾದದ್ದು ಹುಡುಕುತ್ತಾ ಮುಂದೆ ಸಾಗುವುದು.

ಚಾರ್ಲಿ ಚಾಪ್ಲಿನ್ ಜನರನ್ನು ನಗಿಸಿದರು. ಆದರೆ ಅವರ ಬದುಕು ನಮಗೆ ಹೇಳುವ ದೊಡ್ಡ ಸಂದೇಶವೆಂದರೆ ನಗುವಿನ ಹಿಂದೆ ನೋವು ಇದ್ದರೂ, ನೋವಿನ ನಡುವೆ ನಗುವನ್ನು ಹುಡುಕುವ ಶಕ್ತಿ ಮನುಷ್ಯನಲ್ಲಿದೆ.

ಆದ್ದರಿಂದ ಇಂದು ನೀವು ಯಾವುದೇ ಕಷ್ಟದಲ್ಲಿದ್ದರೂ ನೆನಪಿಡಿ: ಈ ದಿನವೂ ಕಳೆದುಹೋಗುತ್ತದೆ. ಈ ನೋವೂ ಕಡಿಮೆಯಾಗುತ್ತದೆ.

ಈ ಪರಿಸ್ಥಿತಿಯೂ ಬದಲಾಗುತ್ತದೆ. ನಿಮ್ಮ ಕೈಯಲ್ಲಿರುವ ಭರವಸೆಯನ್ನು ಮಾತ್ರ ಬಿಟ್ಟುಕೊಡಬೇಡಿ. ಕಷ್ಟದ ದಿನಗಳು ಶಾಶ್ವತವಲ್ಲ. ಆದರೆ ಕಷ್ಟದ ದಿನಗಳಲ್ಲಿ ನಾವು ಕಲಿತ ಪಾಠಗಳು ಜೀವನಪೂರ್ತಿ ನಮ್ಮೊಂದಿಗೆ ಇರುತ್ತವೆ. ಅದೇ ಜೀವನದ ನಿಜವಾದ ಗೆಲುವು.

# ನಿತ್ಯ ಸಕ್ಕರೆ ಅಥವಾ ಸಿಹಿ ತಿಂಡಿ ಸೇವಿಸಿದರೆ ಕ್ಯಾನ್ಸರ್ ಕಾಯಿಲೆ ಬರುತ್ತದೆಯೇ?: ವೈದ್ಯರು ಹೇಳುವುದೇನು?

ಕ್ಯಾನ್ಸರ್, ಅದರ ಚಿಕಿತ್ಸೆಯು ರೋಗಿಯ ದೇಹದ ಮೇಲೆ ತೀವ್ರ ಪರಿಣಾಮ ಬೀರುತ್ತದೆ. ಪೌಷ್ಟಿಕ ಆಹಾರವನ್ನು ಸೇವಿಸುವುದು ಶಕ್ತಿಯನ್ನು ಮರಳಿ ಪಡೆಯಲು ಅಂಗಾಂಶಗಳನ್ನು ಪುನರ್ನಿರ್ಮಿಸಲು ಹಾಗೂ ಒಟ್ಟಾರೆ ಆರೋಗ್ಯವನ್ನು ಸುಧಾರಿಸಲು ಸಹಾಯ ಮಾಡುತ್ತದೆ. ಕ್ಯಾನ್ಸರ್ ಚಿಕಿತ್ಸೆಯ ನಂತರ ರೋಗಿಗಳು ತಮ್ಮ ರೋಗನಿರೋಧಕ ಶಕ್ತಿ ಬಲಪಡಿಸಲು ಹಾಗೂ ಸೆಲ್ಯುಲಾರ್ ಮಟ್ಟದಲ್ಲಿ ಚೇತರಿಕೆಗೆ ಅನುಕೂಲವಾಗುವಂತೆ ಸರಿಯಾದ ಪೋಷಣೆ ನಿರ್ಣಾಯಕವಾಗಿದೆ.

ನವದೆಹಲಿಯ ಎಂಒಸಿ. ಕ್ಯಾನ್ಸರ್ ಕೇರ್ ಸೆಂಟರ್ ಕನ್ಸಲ್ಟೆಂಟ್ ಮೆಡಿಕಲ್ ಆಂಕೊಲಾಜಿಸ್ಟ್ ಮತ್ತು ಕ್ಯಾನ್ಸರ್ ವೈದ್ಯ ಡಾ. ತನ್ವಿ ಸಿಂಗ್ ಅವರು ಈಟಿವಿ ಭಾರತದೊಂದಿಗೆ ಮಾತನಾಡಿ, ತರಕಾರಿಗಳು, ಹಣ್ಣುಗಳು, ಧಾನ್ಯಗಳು ಮತ್ತು ದ್ವಿದಳ ಧಾನ್ಯಗಳು ಸಮೃದ್ಧವಾಗಿರುವ ಆಹಾರವು ಕ್ಯಾನ್ಸರ್ ಅಪಾಯ ಕಡಿಮೆ ಮಾಡುತ್ತದೆ. ಇದಕ್ಕೆ ವಿರುದ್ಧವಾಗಿ ಕ್ಯಾನ್ಸರ್ ಬದುಕುಳಿದವರು ಸ್ಯಾಚುರೇಟೆಡ್ ಕೊಬ್ಬುಗಳು, ಸಂಸ್ಕರಿಸಿದ ಆಹಾರಗಳು, ಹೆಚ್ಚಿನ ಕ್ಯಾಲೋರಿ ಊಟಗಳು, ಅತಿಯಾದ ಅಥವಾ ಸಂಸ್ಕರಿಸಿದ ಸಕ್ಕರೆಗಳು ಹಾಗೂ ಸಂಸ್ಕರಿಸಿದ ಅಥವಾ ಕೆಂಪು ಮಾಂಸಗಳನ್ನು ಮಿತಿಗೊಳಿಸಬೇಕು, ತಪ್ಪಿಸಬೇಕು, ಏಕೆಂದರೆ ಇವು ಕ್ಯಾನ್ಸರ್ ಅಪಾಯ ಹೆಚ್ಚಿಸಬಹುದು. ಪ್ರಸ್ತುತ ಕ್ಯಾನ್ಸರ್ ಚಿಕಿತ್ಸೆಗೆ ಒಳಗಾಗುತ್ತಿರುವ ಅಥವಾ ಚಿಕಿತ್ಸೆ ಪಡೆದ ರೋಗಿಗಳು ಆಹಾರ ಸಲಹೆ, ನಿರ್ಬಂಧಗಳ ಕುರಿತು ತಮ್ಮ ವೈದ್ಯರನ್ನು ಸಂಪರ್ಕಿಸಬೇಕು. ಕ್ಯಾನ್ಸರ್ ಬದುಕುಳಿದವರು ಸಸ್ಯ ಆಧಾರಿತ ಆಹಾರವನ್ನು ಗುರಿಯಾಗಿಟ್ಟುಕೊಳ್ಳಬೇಕು. ಹಣ್ಣುಗಳು, ತರಕಾರಿಗಳನ್ನು ಸೇವಿಸುವುದರಿಂದ ಕ್ಯಾನ್ಸರ್ ತಡೆಗಟ್ಟಲು ಸಹಾಯ ಮಾಡುವ ಜೀವಸತ್ವಗಳು, ಖನಿಜಗಳು, ಫೈಬರ್, ಕ್ಯಾರೊಟಿನಾಯ್ಡ್‌ಗಳು, ಇತರ ಪ್ರಯೋಜನಕಾರಿ ಪೋಷಕಾಂಶಗಳು ದೊರೆಯುತ್ತವೆ.

ಡಾ. ತನ್ವಿ ಸಿಂಗ್ ಅವರು ಪ್ರತಿಕ್ರಿಯಿಸಿ, ಅಧ್ಯಯನಗಳು ಸಂಸ್ಕರಿಸಿದ ಹಾಗೂ ಕೆಂಪು ಮಾಂಸವು ಆರೋಗ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ. ಅಮೇರಿಕನ್ ಆಹಾರದಲ್ಲಿ ಕೊಬ್ಬು ಮತ್ತು ಕೊಲೆಸ್ಟ್ರಾಲ್ ಸೇವನೆಗೆ ಮಾಂಸವು ಪ್ರಮುಖ ಕೊಡುಗೆಯಾಗಿದೆ.

ಕೆರೆಗಳು ಕ್ರಿಕೆಟ್ ಮೈದಾನದಂತಾಗಿವೆ. ದಿನದಿಂದ ದಿನಕ್ಕೆ ನೀರಿಗೆ ಹಾಹಾಕಾರ ಸೃಷ್ಟಿಯಾಗುತ್ತಿದೆ ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ

# ಏತ ನೀರಾವರಿ ಯೋಜನೆ ವೈಫಲ್ಯದಿಂದ ಕ್ರಿಕೆಟ್ ಮೈದಾನವಾದ ಹೆಬ್ಬಾಳು ಕೆರೆ

**ಉದಯವಾಹಿನಿ, ದಾವಣಗೆರೆ**

ರಾಜ್ಯದಲ್ಲಿ ತೀವ್ರ ಸ್ವರೂಪದ ಐತಿಹಾಸಿಕ ಬರಗಾಲ ಆವರಿಸಿದ್ದು, ಅದಕ್ಕೆ ದಾವಣಗೆರೆ ಜಿಲ್ಲೆ ಕೂಡ ಹೊರತಾಗಿಲ್ಲ. ಈ ಬಾರಿ ಮಳೆಯ ತೀವ್ರ ಕೊರತೆಯಾಗಿದ್ದು, ನೀರಿಲ್ಲದೇ ಹತ್ತಾರು ಕೆರೆಗಳು ಭಣಗುಡುತ್ತಿವೆ. ಕೆರೆಗಳು ಬತ್ತಿದ್ದರಿಂದ ಅಂತರ್ಜಲ ಮಟ್ಟ ಸಹ ಕುಸಿಯುತ್ತಿದೆ. ಹಾಗಾಗಿ ಜನ-ಜಾನುವಾರುಗಳಿಗೆ ಕುಡಿಯುವ ನೀರಿನ ಸಮಸ್ಯೆ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿದೆ ಎಂದು ಇಲ್ಲಿನ ರೈತರು ಅಳಲು ತೋಡಿಕೊಂಡಿದ್ದಾರೆ.22 ಕೆರೆಗಳನ್ನು ತುಂಬಿಸುವ ಏತ ನೀರಾವರಿ ಯೋಜನೆಗೆ ಚಾಲನೆ ನೀಡಲಾಗಿದೆ. ಆದರೆ, ಹೆಬ್ಬಾಳು ಕೆರೆ ಸೇರಿದಂತೆ ಹಲವು ಗ್ರಾಮಗಳ ಕೆರೆಯಲ್ಲಿ ಹನಿ ನೀರಿಲ್ಲ. ಭಾಗಶಃ ನೀರು ಖಾಲಿಯಾಗಿದ್ದು, ಭಣಗುಡುತ್ತಿವೆ. ಜಾನುವಾರುಗಳಿಗೆ ಕುಡಿಯಲು ನೀರಿಲ್ಲ. ನೀರು ಕೊಡುವಂತೆ ಹೆಬ್ಬಾಳು ಹಾಗೂ ಸುತ್ತಮುತ್ತಲಿನ ಗ್ರಾಮಸ್ಥರು ಕೆರೆಗೆ ತಮ್ಮ ತಮ್ಮ ಜಾನುವಾರುಗಳನ್ನು ನುಗ್ಗಿಸುವ ಮೂಲಕ ವಿಭಿನ್ನ ರೀತಿಯಲ್ಲಿ ತಮ್ಮ ಸಮಸ್ಯೆಯನ್ನು ಹೇಳಿಕೊಂಡಿದ್ದಾರೆ.

**1.** ದನಗಳ ಮಾರುಕಟ್ಟೆಯಂತೆ ಕಂಡುಬಂತು
**2.** ಕೆರೆಯ ಮಧ್ಯೆ ಕುಳಿತ ನೂರಾರು ರೈತರು
**3.** ನೀರಿಲ್ಲದೆ 10ಕ್ಕೂ ಹೆಚ್ಚು ಕೆರೆಗಳು ಭಣ

ಕೆರೆಗಳು ಕ್ರಿಕೆಟ್ ಮೈದಾನದಂತಾಗಿವೆ. ದಿನದಿಂದ ದಿನಕ್ಕೆ ನೀರಿಗೆ ಹಾಹಾಕಾರ ಸೃಷ್ಟಿಯಾಗುತ್ತಿದೆ ಎಂದು ರೈತರು ಆತಂಕ ವ್ಯಕ್ತಪಡಿಸಿದ್ದಾರೆ. ಬತ್ತಿದ ಕೆರೆಯಲ್ಲಿ ಜಾನುವಾರುಗಳನ್ನು ತಂದು ಬಿಟ್ಟಿದ್ದರಿಂದ ಆ ದೃಶ್ಯ ದನಗಳ ಮಾರುಕಟ್ಟೆಯಂತೆ ಕಂಡುಬಂತು. ಕೆರೆಯ ಮಧ್ಯೆ ಕುಳಿತ ನೂರಾರು ರೈತರು, ಜನ-ಜಾನುವಾರುಗಳಿಗೆ ನೀರು ಕೊಡುವಂತೆ ಆಗ್ರಹಿಸುವ ಮೂಲಕ ತಮ್ಮ ಸಂಕಷ್ಟವನ್ನು ಅಳಲು ತೋಡಿಕೊಂಡಿದ್ದಾರೆ.ನೀರಿಲ್ಲದೆ


ಉದಯವಾಹಿನಿ ಚಿತ್ರ

**10ಕ್ಕೂ ಹೆಚ್ಚು ಕೆರೆಗಳು ಭಣ ಭಣ:** ದಾವಣಗೆರೆ ತಾಲ್ಲೂಕಿನ 22 ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆ ಹಳ್ಳ ಹಿಡಿದಿದೆ. ಸಮರ್ಪಕವಾಗಿ ಕೆರೆಗಳಿಗೆ ನೀರು ಬಾರದ ಹಿನ್ನೆಲೆ ಜನ-ಜಾನುವಾರುಗಳಿಗೆ ಕುಡಿಯುವ ನೀರಿಗೂ ಸಂಕಷ್ಟ ಎದುರಾಗಿದೆ. ಹರಿಹರ ತುಂಗಭದ್ರಾ ನದಿಯಿಂದ ರಾಜನಹಳ್ಳಿ ಜಾಕ್‌ವೆಲ್ ಮೂಲಕ ಕೆರೆಗಳಿಗೆ ನೀರು ತುಂಬಿಸುವ ಏತ ನೀರಾವರಿ ಯೋಜನೆಯನ್ನು 2014 ಜಾರಿಗೆ ತರಲಾಗಿತ್ತು. ಆದರೆ, ಅಂದಿನಿಂದ ಇಂದಿನವರೆಗೂ ಭಾಗಶಃ ಕೆರೆಗಳು ಹನಿ ನೀರು ಕಂಡಿಲ್ಲ. ಪಂಪ್‌ಹೌಸ್‌ಗಳಲ್ಲಿ ಎರಡು ಮೋಟಾರ್‌ಗಳಿದ್ದು, ಅದರಲ್ಲಿ ಕೇವಲ ಒಂದು ಮಾತ್ರ ಶುರು ಇದೆ. ಇದರಿಂದ ಕೆಲ ಕೆರೆಗಳಿಗೆ ಮಾತ್ರ ನೀರು ಬಿಡಲಾಗಿದೆ. ಉಳಿದಂತೆ ಹೆಬ್ಬಾಳು, ನಗರನಹಳ್ಳಿ, ಕೊಡಗನೂರು, ಹಾಲುವರ್ತಿ, ಮಂಡಲೂರು ಕೆರೆಗಳಿಗೆ ನೀರು ಬಂದಿಲ್ಲ. ಸದ್ಯ ಈ ಎಲ್ಲಾ ಗ್ರಾಮಗಳಲ್ಲಿ ಕ್ಷಾಮ ಆವರಿಸಿದ್ದು, ಕುಡಿಯಲು ಜನ- ಜಾನುವಾರುಗಳಿಗೆ ನೀರು ಇಲ್ಲದಂತಾಗಿದೆ.

ಇಲ್ಲವಾದರೆ ಗ್ರಾಮದ ರೈತರು ತಮ್ಮ ತಮ್ಮ ಜಾನುವಾರುಗಳೊಂದಿಗೆ ಇಲ್ಲಿನ ರಾಷ್ಟ್ರೀಯ ಹೆದ್ದಾರಿ 48 ಅನ್ನು ತಡೆದು ಹೋರಾಟ ಮಾಡಬೇಕಾಗುತ್ತದೆ ಎಂದು ಎಚ್ಚರಿಕೆ ನೀಡಿದ್ದಾರೆ. ಪ್ರತಿಭಟನಾನಿರತ ರೈತರ ಮನವೊಲಿಸಿದ ಅಧಿಕಾರಿಗಳು, ಸೋಮವಾರದ ಒಳಗೆ ಕೆರೆಗಳಿಗೆ ನೀರು ಹರಿಸಲಾಗುವುದು ಎಂದು ಭರವಸೆ ನೀಡಿದ್ದಾರೆ. ಒಂದು ವೇಳೆ ಈ ಗಡುವಿನ ಒಳಗೆ ನೀರು ಬಿಡದೆ ಹೋದಲ್ಲಿ ಇದೇ 28ರಂದು ಹೆದ್ದಾರಿಯನ್ನು ತಡೆದು ಹೋರಾಟ ಮಾಡುವುದಾಗಿ ಅಧಿಕಾರಿಗಳಿಗೆ ರೈತರು ಎಚ್ಚರಿಕೆ ನೀಡಿದ್ದಾರೆ.

> **ಹೆಬ್ಬಾಳು ಕೆರೆಗೆ ನೀರು ಬಂದೇ ಇಲ್ಲ. ಸರ್ಕಾರದಲ್ಲಿ ಕೆಲ ನೀತಿ ನಿಯಮಗಳಿರುವ ಕಾರಣ ಅವುಗಳನ್ನು ಅನುಸರಿಸಿ ಕೆಲಸ ಮಾಡಬೇಕಾಗಿದೆ. ನೀರು ಹರಿಸಲು ಎಲ್ಲಾ ಪ್ರಯತ್ನ ಮಾಡಲಾಗುತ್ತಿದೆ. ಟೆಂಡರ್ ಪ್ರಕ್ರಿಯೆ ಸ್ವಲ್ಪ ತಡವಾಗುತ್ತಿದ್ದು, ಈ ಪ್ರಕ್ರಿಯೆ ಮುಗಿಯುವ ಹಂತಕ್ಕೆ ಬಂದಿದೆ.**
> – ಗ್ರಾಮಸ್ಥರು

> **ನಮ್ಮ ಗ್ರಾಮದಲ್ಲಿ 4,500 ಕುರಿಗಳಿವೆ, 800–900 ಹಸುಗಳಿವೆ. ಅವುಗಳಿಗೆ ನೀರು ಕುಡಿ ಎಂದು ಕೇಳುತ್ತಿದ್ದೇವೆ. ತೋಟಗಳಿಗೆ ನೀರು ಬೇಡ, ಜಾನುವಾರುಗಳಿಗಾದರೂ ನೀರು ಕೊಡುವಂತೆ ಹೋರಾಟ ಮಾಡಿದ್ದೇವೆ.**
> –ವಿಜಯ್, ರೈತ

## ಹಿಂದೂಗಳು ಏಕಾಗ್ರತೆಯಿಂದ ಒಂದಾಗಬೇಕು: ಶ್ರೀ ವಿದ್ಯಾ ಕಣ್ವವಿರಾಜ ತೀರ್ಥರು


ಉದಯವಾಹಿನಿ ಚಿತ್ರ

**ಉದಯವಾಹಿನಿ, ಮುದ್ದೇಬಿಹಾಳ**

ಧರ್ಮದ ವಿಚಾರದಲ್ಲಿ ಹಿಂದೂ ಧರ್ಮಕ್ಕೆ ವಿಶಿಷ್ಟ ಸ್ಥಾನವಿದ್ದು, ಭಾರತ ಮತ್ತು ಹಿಂದೂ ಸಂಸ್ಕೃತಿ ಪರಸ್ಪರ ಅವಿನಾಭಾವ ಸಂಬಂಧ ಹೊಂದಿವೆ. ದೇಶದಲ್ಲಿ ವಿವಿಧ ಆಚರಣೆ, ಭಾಷೆ ಹಾಗೂ ಸಂಪ್ರದಾಯಗಳಿದ್ದರೂ ಹಿಂದೂಗಳು ಏಕಾಗ್ರತೆಯಿಂದ ಒಂದಾಗಬೇಕು ಎಂದು ಹುಣಸೆಹೊಳೆ ಕಣ್ವಮಠದ ಪೀಠಾಧಿಪತಿಗಳಾದ ಶ್ರೀ ವಿದ್ಯಾ ಕಣ್ವವಿರಾಜ ತೀರ್ಥ ಪಾದಂಗಳವರು ಹೇಳಿದರು.

ಪಟ್ಟಣದ ಮಾರುತಿನಗರದ ಶ್ರೀ ಶಿವಚಿದಂಬರೇಶ್ವರ ದೇವಸ್ಥಾನದಲ್ಲಿ ಆಗಸ್ಟ್ 8ರಿಂದ ಸೆಪ್ಟೆಂಬರ್ 26ರವರೆಗೆ ನಡೆದ 7ನೇ ಚಾತುರ್ಮಾಸ್ಯ ವ್ರತದ ಸಮಾರೋಪ ಸಮಾರಂಭದಲ್ಲಿ ಅವರು ಮಾತನಾಡಿದರು.

ಹಿಮಾಲಯದಿಂದ ಹರಿದು ಬಂದ ಗಂಗೆ ಸೇರಿದಂತೆ ಗಂಗೆ, ತುಂಗೆ, ಕೃಷ್ಣೆ, ಕಾವೇರಿ ಮೊದಲಾದ ನದಿಗಳು ಭಾರತೀಯ ಸಂಸ್ಕೃತಿಯೊಂದಿಗೆ ನಿಕಟ ಸಂಬಂಧ ಹೊಂದಿವೆ. ಪವಿತ್ರ ಜಲ, ಸಂಸ್ಕೃತಿ ಹಾಗೂ ಪರಂಪರೆಯಲ್ಲಿ ಹಿಂದೂ ಧರ್ಮದ ಅಂಶಗಳು ಬೆರೆತಿವೆ ಎಂದು ಅವರು ಹೇಳಿದರು.

ಮತಾಂತರ ಮತ್ತು ಭಯೋತ್ಪಾದನೆಯಂತಹ ದುಷ್ಟ ಶಕ್ತಿಗಳಿಗೆ ಅವಕಾಶ ನೀಡದಂತೆ ಸಮಾಜದಲ್ಲಿ ಏಕತೆ, ಧಾರ್ಮಿಕ ಪ್ರಜ್ಞೆ ಹಾಗೂ ಸದ್ಭಾವನೆ ಬೆಳೆಸಿಕೊಳ್ಳಬೇಕು. ದ್ವೇಷ, ಅಸೂಯೆ ಹಾಗೂ ಮತ್ಸರದಂತಹ ದುಷ್ಟ ಭಾವನೆಗಳು ಸಮಾಜಕ್ಕೆ ಹಾನಿಕಾರಕವಾಗಿದ್ದು, ಅವುಗಳಿಂದ ದೂರವಿರಬೇಕು ಎಂದು ತಿಳಿಸಿದರು.

ಯಾವುದೇ ಆಚರಣೆ ಪಾಲಿಸಿದರೂ, ಯಾವ ಭಾಷೆ ಮಾತನಾಡಿದರೂ, ವಿವಿಧ ಸಂಪ್ರದಾಯಗಳನ್ನು ಅನುಸರಿಸಿದರೂ ಭಾರತೀಯ ಹಿಂದೂ ಪರಂಪರೆಯೊಂದಿಗೆ ಜನರು ಹೊಂದಿರುವ ಸಂಬಂಧವನ್ನು ಅರಿತುಕೊಳ್ಳಬೇಕು. ಗೋ ಪೂಜೆಯ ಮಹತ್ವವನ್ನು ಭಾರತೀಯ ಧಾರ್ಮಿಕ ಪರಂಪರೆಯಲ್ಲಿ ವಿಶೇಷವಾಗಿ ಕಾಣಲಾಗಿದೆ ಎಂದರು. ಚಾತುರ್ಮಾಸ್ಯ ವ್ರತದ ಸಮಾರೋಪದ ಅಂಗವಾಗಿ ಶನಿವಾರ ಸೀಮೋಲ್ಲಂಘನ ಕಾರ್ಯಕ್ರಮ ಹಾಗೂ ಸಮಾರೋಪ ಸಮಾರಂಭ ನಡೆಯಿತು.

## ಭೂಸ್ವಾಧೀನ, ಕಟ್ಟಡ ಪರಿಹಾರ ನಿಖರ ಮಾಹಿತಿ ಸಂಗ್ರಹಿಸಲು ಸೂಚನೆ


ಮುಖ್ಯ ರಸ್ತೆ ಅಗಲೀಕರಣ ಕುರಿತು ಸಭೆ
ಉದಯವಾಹಿನಿ ಚಿತ್ರ

**ಉದಯವಾಹಿನಿ, ಚಿತ್ರದುರ್ಗ**

ನಗರದ ಚಳ್ಳಕೆರೆ ವೃತ್ತದಿಂದ ಹೊಳಲ್ಕೆರೆ ರಸ್ತೆಯ ಕನಕ ವೃತ್ತದವರೆಗೆ ರಸ್ತೆ ಅಗಲೀಕರಣಕ್ಕೆ ಸಂಬಂಧಿಸಿದಂತೆ ಅಗತ್ಯವಿರುವ ಭೂಸ್ವಾಧೀನ ಹಾಗೂ ಕಟ್ಟಡ ಪರಿಹಾರದ ನಿಖರ ಮಾಹಿತಿಯನ್ನು ಸಂಗ್ರಹಿಸುವಂತೆ ಪರಿಶಿಷ್ಟ ಪಂಗಡಗಳ ಕಲ್ಯಾಣ ಹಾಗೂ ಜಿಲ್ಲಾ ಉಸ್ತುವಾರಿ ಸಚಿವ ಟಿ. ರಘುಮೂರ್ತಿ ಸೂಚಿಸಿದರು.

ನಗರದ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಈ ಕುರಿತು ಸಭೆ ನಡೆಸಿ ಅವರು ಮಾತನಾಡಿದರು. ಒಟ್ಟು 3.5 ಕಿ.ಮೀ. ಉದ್ದದ ಮುಖ್ಯರಸ್ತೆಯಲ್ಲಿ ಚಳ್ಳಕೆರೆ ಗೇಟ್‌ನಿಂದ ಪ್ರವಾಸಿ ಮಂದಿರದ ವರೆಗಿನ ರಸ್ತೆಯಲ್ಲಿ ಯಾವುದೇ ಅತಿಕ್ರಮಣ ಇಲ್ಲ. ಆದರೆ, ಪ್ರವಾಸಿ ಮಂದಿರದಿಂದ ಕನಕ ವೃತ್ತದ ವರೆಗಿನ ಸುಮಾರು 2 ಕಿ.ಮೀ. ರಸ್ತೆಯಲ್ಲಿ ಸಾಕಷ್ಟು ಕಟ್ಟಡಗಳ ಇವೆ. ರಸ್ತೆಯ ಮಧ್ಯಭಾಗದಿಂದ ಎರಡು ಭಾಗದಲ್ಲಿ 21 ಮೀ. ಹೊಸ ರಸ್ತೆ ನಿರ್ಮಿಸಲು ಯೋಚಿಸಲಾಗುತ್ತಿದೆ. ಸದ್ಯ ಎರಡೂ ಭಾಗದಲ್ಲಿ 31.5 ಮೀಟರ್ ರಸ್ತೆ ಇದೆ. ಉಳಿದ 6.5 ಮೀಟರ್ ಜಾಗಕ್ಕೆ ಭೂಸ್ವಾಧೀನ ಹಾಗೂ ಕಟ್ಟಡಗಳಿಗೆ ಮಾರುಕಟ್ಟೆ ದರದಲ್ಲಿ ಪರಿಹಾರ ನೀಡಬೇಕಾಗುತ್ತಿದೆ. ಆದ್ದರಿಂದ ಪ್ರತಿಯೊಂದ ಕಟ್ಟಡಗಳ ವಿವರ, ಸ್ವಾಧೀನ ಪಡೆಸಿಕೊಳ್ಳುವ ಭೂಮಿ ದರಗಳ ವಿವರವನ್ನು ಸಂಗ್ರಹಿಸಿದರೆ, ಸರ್ಕಾರ ಮಟ್ಟದಲ್ಲಿ ಮುಖ್ಯಮಂತ್ರಿಗಳ ಮನ ಒಲಿಸಿ ಯೋಜನೆಗೆ ಅನುದಾನ ತರಲಾಗುವುದು ಎಂದು ಸಚಿವ ಟಿ.ರಘುಮೂರ್ತಿ ಹೇಳಿದರು. ಪಿ.ಬಿ.ರಸ್ತೆಯಲ್ಲಿ ಕಳೆದ ಅರವತ್ತು ಎಪ್ಪತ್ತು ವರ್ಷಗಳಿಂದ ಖಾಸಗಿ ವ್ಯಕ್ತಿಗಳು ಜಾಗದ ಒಡೆತನ ಹೊಂದಿದ್ದಾರೆ. ಜಾಗದ ಮೇಲೆ ಸಾಕಷ್ಟು ವ್ಯವಹಾರಗಳು ನಡೆದಿವೆ. ಕೆಲವೆಡೆ ಒತ್ತುವರಿ ಹಾಗೂ ನಿಯಮಬಾಹೀರವಾಗಿ ಕಟ್ಟಡ ನಿರ್ಮಿಸಿರುವುದು ಕಂಡುಬಂದಿದೆ. ಭೂಸ್ವಾಧೀನಕ್ಕೆ ಒಳಪಡುವ 500ಕ್ಕೂ ಹೆಚ್ಚು ಸ್ವತ್ತಿನ ಮಾಲೀಕರಿಗೆ ನಗರಸಭೆಯಿಂದ ನೋಟಿಸ್ ನೀಡಿ, ಜಾಗದ ಮಾಲಿಕಾನ ಹಕ್ಕು, ಕಟ್ಟಡ ಪರವಾನಿಗೆ, ಇಸ್ವತ್ತು, ವ್ಯವಹಾರ ಪರವಾನಿಗೆ, ಕಂದಾಯ ಕಟ್ಟಿರುವ ಬಗ್ಗೆ ಮಾಹಿತಿ ನೀಡುವಂತೆ ಕೋರಲಾಗಿದೆ. ಭೂಸ್ವಾಧೀನ ಹಾಗೂ ಪರಿಹಾರಕ್ಕಾಗಿ ಅಂದಾಜು ರೂ.380 ಕೋಟಿ ಬೇಕಾಗಬಹುದು ಎಂದು ಉಪವಿಭಾಗಾಧಿಕಾರಿ ವೆಂಕಟೇಶ್ ನಾಯ್ಕ್ ಸಭೆಯಲ್ಲಿ ಮಾಹಿತಿ ನೀಡಿದರು. ಸಭೆಯಲ್ಲಿ ಜಿಲ್ಲಾಧಿಕಾರಿ ಎಸ್.ರಮ್ಯ, ಅಪರ ಜಿಲ್ಲಾಧಿಕಾರಿ ಬಿ.ಟಿ.ಕುಮಾರಸ್ವಾಮಿ, ಲೋಕೋಪಯೋಗಿ ಇಲಾಖೆ ಕಾರ್ಯನಿರ್ವಾಹಕ ಇಂಜಿನಿಯರ್ ನಾಗರಾಜ್, ಜಿ.ಪಂ.ಸಿಪಿಓ ಗಾಯಿತ್ರಿ, ನಗರಸಭೆ ಆಯುಕ್ತೆ ಲಕ್ಷ್ಮಿ ಸೇರಿದಂತೆ ಮತ್ತಿರರು ಉಪಸ್ಥಿತರಿದ್ದರು.

## ಹಿಂದೂ ಮಹಾಸಮಾವೇಶಕ್ಕೆ ವಿಶ್ವಕರ್ಮ ಸಮಾಜ ಬೆಂಬಲ


ಉದಯವಾಹಿನಿ ಚಿತ್ರ

**ಉದಯವಾಹಿನಿ, ಕಲಬುರಗಿ**

ನಗರದಲ್ಲಿ ಸೆ.27 ಕನ್ನೇರಿ ಮಠದ ಪೂಜ್ಯ ಅದೃಶ್ಯ ಕಾಡಸಿದ್ದೇಶ್ವರ ಮಹಾಸ್ವಾಮಿಗಳವರ ನೇತೃತ್ವದಲ್ಲಿ ಹಾಗೂ ಹಿಂದೂ ಯುವ ನಾಯಕ ಚಂದು ಪಾಟೀಲ್ ಅವರ ಅಧ್ಯಕ್ಷತೆಯಲ್ಲಿ ನಡೆಯಲಿರುವ ಬಸವಾದಿ ಶಿವಶರಣರ ಬೃಹತ್ ಹಿಂದೂ ಮಹಾಸಮಾವೇಶಕ್ಕೆ ಕಲಬುರಗಿ ವಿಶ್ವಕರ್ಮ ಸಮಾಜ ಸಂಪೂರ್ಣ ಬೆಂಬಲ ವ್ಯಕ್ತಪಡಿಸಿದೆ. ಪತ್ರಿಕಾಗೋಷ್ಠಿಯಲ್ಲಿ ಬ್ರಹ್ಮಾನಂದ ಮಹಾಸ್ವಾಮಿಗಳು, ಮತ್ತು ದೊಡ್ಡೇಂದ್ರ ಮಹಾಸ್ವಾಮಿಗಳು ಅವರು ಮಾತನಾಡಿ, ರೈತರು, ಯುವಕರು ಹಾಗೂ ಸಮಾಜದ ಅಭಿವೃದ್ಧಿಯ ಬಗ್ಗೆ, ಅಪಾರ ಕಾಳಜಿ ಹೊಂದಿರುವ ಪೂಜ್ಯ ಮಹಾಸ್ವಾಮಿಗಳವರ ಮಾರ್ಗದರ್ಶನದಲ್ಲಿ ಶಾಂತಿ, ಸೌಹಾರ್ದತೆ, ಸಾಮಾಜಿಕ ಒಗ್ಗಟ್ಟು ಮತ್ತು ಸಂಘಟನೆಯ ಸಂದೇಶವನ್ನು ಸಮಾಜಕ್ಕೆ ನೀಡುವ ಈ ಮಹತ್ವದ ಸಮಾವೇಶಕ್ಕೆ ನಮ್ಮ ವಿಶ್ವಕರ್ಮ ಸಮಾಜದ ಹಾಗೂ ನಮ್ಮ ಮಠಾಧೀಶರ ಸಂಪೂರ್ಣ ಬೆಂಬಲವಿದೆ ಎಂದರು.


ಉದಯವಾಹಿನಿ ಚಿತ್ರ

## ಮಕ್ಕಳ ರಕ್ಷಣೆ ಪ್ರತಿಯೊಬ್ಬ ನಾಗರಿಕನ ಕರ್ತವ್ಯ

**ಉದಯವಾಹಿನಿ, ಚಿಕ್ಕಮಗಳೂರು**

ಮಕ್ಕಳ ಹಕ್ಕುಗಳನ್ನು ರಕ್ಷಿಸುವುದು ಸರ್ಕಾರದ ಇಲಾಖೆಗಳು ಅಥವಾ ಸರ್ಕಾರೇತರ ಸಂಸ್ಥೆಗಳ ಹೊಣೆಯಲ್ಲ, ಅದು ಸಮಾಜದ ಪ್ರತಿಯೊಬ್ಬ ನಾಗರಿಕನ ಕರ್ತವ್ಯ ಎಂದು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸದಸ್ಯ ಕಾರ್ಯದರ್ಶಿ ಎಚ್. ಶಶಿಧರ ಶೆಟ್ಟಿ ಹೇಳಿದರು.ನಗರದ ಕುವೆಂಪು ರಂಗಮಂದಿರದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರದ ಸಹಯೋಗದಲ್ಲಿ ಶುಕ್ರವಾರ ಆಯೋಜಿಸಿದ್ದ ಮಕ್ಕಳ ಹಕ್ಕುಗಳು, ಪೋಕ್ಸೊ ಕಾಯ್ದೆ ಹಾಗೂ ಬಾಲ ಮತ್ತು ಕಿಶೋರ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ತಿದ್ದುಪಡಿ ಕಾಯ್ದೆ–2016ರ ಅಡಿಯಲ್ಲಿ ವಿವಿಧ ಇಲಾಖೆಗಳ ಅಧಿಕಾರಿಗಳು ಮತ್ತು ಸರ್ಕಾರೇತರ ಸಂಸ್ಥೆಗಳಿಗೆ ಆಯೋಜಿಸಲಾಗಿದ್ದ ಕಾನೂನು ಅರಿವು ಹಾಗೂ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿಯೊಂದು ಜನನ ಮತ್ತು ಮರಣವನ್ನು ಸ್ಥಳೀಯ ಪಂಚಾಯಿತಿ ಅಥವಾ ಪುರಸಭೆಯಲ್ಲಿ ನೋಂದಾಯಿಸಬೇಕು ಎಂಬ ಸರಳ ನಿಯಮವೂ ಹಲವರಿಗೆ ತಿಳಿದಿಲ್ಲ. ಆದ್ದರಿಂದ ರಾಜ್ಯದಲ್ಲಿ ಪ್ರತಿ ಲೋಕ್ ಅದಾಲತ್‌ನಲ್ಲಿ 35 ಸಾವಿರದಿಂದ 40 ಸಾವಿರ ಜನನ–ಮರಣ ಪ್ರಮಾಣಪತ್ರ ವಿತರಿಸಬೇಕಾದ ಪರಿಸ್ಥಿತಿ ಇದೆ ಎಂದು ಕಳವಳ ವ್ಯಕ್ತಪಡಿಸಿದರು. ವಯಸ್ಕರಿಗಿಂತಲೂ ಹೆಚ್ಚಿನ ಹಕ್ಕುಗಳು ಮಕ್ಕಳಿಗೆ ಇವೆ, ಏಕೆಂದರೆ ಅವರು ಅಸಹಾಯಕರು. ಅಂತಹ ಮಕ್ಕಳನ್ನು ರಕ್ಷಿಸುವುದು ಮತ್ತು ಅವರಿಗೆ ಸುರಕ್ಷಿತ ವಾತಾವರಣ ನಿರ್ಮಿಸಿಕೊಡುವುದು ಸಮಾಜದ ಪ್ರಮುಖ ಜವಾಬ್ದಾರಿ. ಸಾರ್ವಜನಿಕರು ಇಂತಹ ಬಾಲ ಕಾರ್ಮಿಕರನ್ನು ಕಂಡ ತಕ್ಷಣ ಚೈಲ್ಡ್ ಹೆಲ್ಪ್‌ಲೈನ್ 1098 ಸಂಖ್ಯೆಗೆ ಕರೆ ಮಾಡಿ ಮಾಹಿತಿ ನೀಡಬೇಕು ಎಂದು ಮನವಿ ಮಾಡಿದರುಮನೆಯಲ್ಲೇ ದೌರ್ಜನ್ಯ ಎದುರಿಸುವ ಮಕ್ಕಳಿಗೆ ಆ ವಿಷಯವನ್ನು ತಂದೆ–ತಾಯಿಗಾಗಲಿ ಅಥವಾ ಇತರರಿಗಾಗಲಿ ಹೇಳಿಕೊಳ್ಳುವುದು ಸುಲಭದ ಮಾತಲ್ಲ ಎಂದು ತಿಳಿಸಿದರು.

## ಪ್ರಹ್ಲಾದ ಜೋಶಿ ಮನೆ ಎದುರು 29ರಂದು ಪ್ರತಿಭಟನೆ

**ಉದಯವಾಹಿನಿ, ಕೊಪ್ಪಳ**

ರೈತರ ಪ್ರಮುಖ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ಸೆ. 29ರಂದು ಕೇಂದ್ರ ಸಚಿವ ಪ್ರಲಾದ ಜೋಶಿ ಅವರ ಹುಬ್ಬಳ್ಳಿ ನಿವಾಸದ ಎದುರು ಪ್ರತಿಭಟನೆ



ಹಮ್ಮಿಕೊಳ್ಳಲಾಗಿದೆ ಎಂದು ಕರ್ನಾಟಕ ರಾಜ್ಯ ರೈತ ಸಂಘ ಹಾಗೂ ಹಸಿರು ಸೇನೆ ಜಿಲ್ಲಾಧ್ಯಕ್ಷ ಸುಖಮುನಿಯಪ್ಪ ಬಿ. ಶನಿವಾರ ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.ಎಂ.ಎಸ್. ಸ್ವಾಮಿನಾಥನ್ ಆಯೋಗದ ಶಿಫಾರಸುಗಳನ್ನು ಜಾರಿಗೊಳಿಸಬೇಕು, ಕೃಷಿ ಉತ್ಪನ್ನಗಳಿಗೆ ಕಾನೂನಬದ್ಧ ಕನಿಷ್ಠ ಬೆಂಬಲ ಬೆಲೆ ಖಾತ್ರಿಪಡಿಸಬೇಕು, ಸಕ್ಕರೆಗೆ ಕನಿಷ್ಠ ಪ್ರತಿ ಕೆ.ಜಿ.ಗೆ 60 ಬೆಲೆ ನಿಗದಿ ಮಾಡಬೇಕು, ರೈತರ ಕೃಷಿ ಉತ್ಪನ್ನಗಳಿಗೆ ನ್ಯಾಯಯುತ ಬೆಲೆ ದೊರೆಯುವಂತೆ ಕೇಂದ್ರ ಸರ್ಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು. ರಾಜ್ಯದ ವಿವಿಧ ಜಿಲ್ಲೆಗಳಿಂದ ರೈತರು ಹೋರಾಟದಲ್ಲಿ ಭಾಗಿಯಾಗಲಿದ್ದು ಕೊಪ್ಪಳ ಜಿಲ್ಲೆಯಿಂದಲೂ ಸಾವಿರಾರು ಜನ ಪಾಲ್ಗೊಳ್ಳುವರು ಎಂದು ತಿಳಿಸಿದರು. ಸಂಘಟನೆಯ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಹನುಮಂತ ನಾಯಕ, ಜಿಲ್ಲಾ ಗೌರವಾಧ್ಯಕ್ಷ ಬಸವರಾಜ ಚಿಲವಾಡಗಿ, ಜಿಲ್ಲಾ ಉಪಾಧ್ಯಕ್ಷ ಹನುಮಂತ ಎನ್., ಕಿನ್ನಾಳ ಗ್ರಾಮ ಘಟಕದ ಅಧ್ಯಕ್ಷ ಪರಶುರಾಮ ಬಿಸ್ನಳ್ಳಿ ಇದ್ದರು.

# ಮಿನಿ ನ್ಯೂಸ್

## ಕೆಆರ್‌ಐಡಿಎಲ್ AEE ನಾಪತ್ತೆ!

**ಉದಯವಾಹಿನಿ, ಗದಗ**

ರಾಜ್ಯ ಸರ್ಕಾರದ ಅನುದಾನ ಬಾರದಕ್ಕೆ ಪತ್ರ ಬರೆದು KRIDL ಎಇಇ (ಸಹಾಯಕ ಕಾರ್ಯಪಾಲಕ ಇಂಜಿನಿಯರ್) ಅಧಿಕಾರಿ ನಾಪತ್ತೆಯಾಗಿದ್ದಾರೆ. ರಾಜ್ಯ ಸರ್ಕಾರದಿಂದ ಅನುದಾನ ಬಿಡುಗಡೆಯಾಗದೇ ಉಂಟಾದ ಆರ್ಥಿಕ ಸಂಕಷ್ಟವೇ ಅಧಿಕಾರಿಯ ನಾಪತ್ತೆಗೆ ಕಾರಣ ಎನ್ನುವ ಪ್ರಶ್ನೆ ಇದೀಗ ಕಾಡುತ್ತಿದೆ. ಕೆಆರ್‌ಐಡಿಎಲ್‌ನ ಇಇ ಅವರಿಗೆ ಪತ್ರ ಬರೆದು ಫರ್ವೀಜ್ ನಾಪತ್ತೆಯಾಗಿದ್ದಾರೆ. ಪತ್ರದಲ್ಲಿ ಅನುದಾನ ಬಿಡುಗಡೆಯಾಗದಿರುವ ಕುರಿತು ಉಲ್ಲೇಖಿಸಲಾಗಿದೆ. ಕೋಟ್ಯಂತರ ರೂಪಾಯಿ ಅನುದಾನ ಬಿಡುಗಡೆಯಾಗದ ಕಾರಣ ತಾವು ತೀವ್ರವಾಗಿ ನೊಂದಿರುವುದಾಗಿ ಅವರು ಪತ್ರದಲ್ಲಿ ಉಲ್ಲೇಖಿಸಿದ್ದಾರೆ. ಅನುದಾನ ಬಿಡುಗಡೆಯಾಗದ ಹಿನ್ನೆಲೆ ಮನೆಯ ಮುಂದೆ ಉಪ–ಗುತ್ತಿಗೆದಾರರು ಬಂದು ಗಲಾಟೆ ಮಾಡುತ್ತಿದ್ದರು. ಸರ್ಕಾರದಿಂದ ಅನುದಾನ ಬಿಡುಗಡೆಯಾಗದ ಕಾರಣ ಪ್ರತಿದಿನ ಫೋನ್ ಮಾಡಿ ಕಿರುಕುಳ ನೀಡುತ್ತಿದ್ದರು. ಇದರಿಂದ ತಮ್ಮ ಮಾನಸಿಕ ಆರೋಗ್ಯದ ಮೇಲೆ ತುಂಬಾ ಪರಿಣಾಮ ಬೀರಿದೆ ಎಂದು ಪತ್ರದಲ್ಲಿ ಫರ್ವೀಜ್ ಉಲ್ಲೇಖಿಸಿದ್ದಾರೆ. ನನ್ನ ಜೀವನವನ್ನೇ ಕೊನೆಗಾಣಿಸುತ್ತಿದ್ದೇನೆ. ನನ್ನ ಸಾವಿಗೆ ನಾನೇ ಕಾರಣ. ಪರಿಸ್ಥಿತಿಯನ್ನ ನಿಭಾಯಿಸುವಲ್ಲಿ ನಾನು ಸೋತಿದ್ದೇನೆ. ಸದರಿ ಉಪವಿಭಾಗಕ್ಕೆ ಅನುದಾನ ನೀಡಿ ಸಮಸ್ಯೆ ಬಗೆಹರಿಸಿ. ಬೇರೆ ಎಇಇಯನ್ನ ನಿಯೋಜಿಸಿ. ದಯವಿಟ್ಟು ನನ್ನ ಕುಟುಂಬದವರಿಗೆ ಕಿರುಕುಳ ನೀಡಬೇಡಿ ಎಂದು ಪತ್ರದಲ್ಲಿ ಮನವಿ ಮಾಡಿಕೊಂಡಿದ್ದಾರೆ. 2026ರ ಸೆಪ್ಟೆಂಬರ್ 12ರಂದು ಇಇ ಅವರಿಗೆ ಪತ್ರ ಬರೆದಿದ್ದ ಫರ್ವೀಜ್, ಮರುದಿನ ಅಂದರೆ ಸೆಪ್ಟೆಂಬರ್ 13ರಂದು ಬೆಂಗಳೂರಿನಲ್ಲಿ ಸಭೆ ಇದೆ ಎಂದು ಹೇಳಿ ತೆರಳಿದ್ದರು. ಬಳಿಕ ಸೆಪ್ಟೆಂಬರ್ 16ರಂದು ಅವರು ನಾಪತ್ತೆಯಾಗಿರುವ ಕುರಿತು ಪ್ರಕರಣ ದಾಖಲಾಗಿದೆ. ಪತ್ನಿ, ಓರ್ವ ಮಗಳು, ತಂದೆ–ತಾಯಿ ಹಾಗೂ ಸಹೋದರರನ್ನ ಬಿಟ್ಟು ಫರ್ವೀಜ್ ನಾಪತ್ತೆಯಾಗಿದ್ದಾರೆ.


ಸರ್ಕಾರದಿಂದ ಬಾರದ ಕೋಟ್ಯಂತರ ರೂಪಾಯಿ ಅನುದಾನ

## ಸಮರ್ಥರನ್ನು ನೇಮಿಸಿ ಮರುತನಿಖೆ ಮಾಡಿ

**ಉದಯವಾಹಿನಿ, ಮಂಗಳೂರು**

2012ರಲ್ಲಿ ಅತ್ಯಾಚಾರವಾಗಿ ಕೊಲೆಯಾದ ತಮ್ಮ ಪುತ್ರಿ ಸೌಜನ್ಯ ಕೊಲೆ ತನಿಖೆಗಾಗಿ ರಚಿಸಲಾಗಿರುವ ವಿಶೇಷ ತನಿಖಾ ತಂಡಕ್ಕೆ ನೇಮಕ ಮಾಡಿರುವ ಕೆಲವು ಪೊಲೀಸ್ ಅಧಿಕಾರಿಗಳ ಬಗ್ಗೆ ಸೌಜನ್ಯಳ ತಾಯಿ ಕುಸುಮಾವತಿ ಆಕ್ಷೇಪ ವ್ಯಕ್ತಪಡಿಸಿದ್ದಾರೆ. ಪತ್ರಿಕಾ ಪ್ರಕಟಣೆ ಹೊರಡಿಸಿರುವ ಕುಸುಮಾವತಿ, ಎಸ್‌ಐಟಿ ರಚನೆಯಿಂದ ತಮಗೆ ತೃಪ್ತಿಯಾಗಿಲ್ಲ ಎಂದು ತಿಳಿಸಿದ್ದಾರೆ. ಆಧುನಿಕ ತನಿಖಾ ತಂತ್ರಜ್ಞಾನದಲ್ಲಿ ಪರಿಣತಿ ಹೊಂದಿರುವ ಸಮರ್ಥ ತನಿಖಾಧಿಕಾರಿಗಳನ್ನು ಒಳಗೊಂಡ ಎಸ್‌ಐಟಿಯನ್ನು ರಚಿಸುವಂತೆ ಸುಪ್ರೀಂ ಕೋರ್ಟ್ ತನ್ನ ಆದೇಶದಲ್ಲಿ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿತ್ತು. ಆದರೆ, ಎಸ್‌ಐಟಿ ಮುಖ್ಯಸ್ಥರ ನೇಮಕಾತಿ ಸುಪ್ರೀಂ ಕೋರ್ಟ್ ನಿರ್ದೇಶನದಂತೆ ನಡೆದಿಲ್ಲ ಎಂದು ಅವರು ಆರೋಪಿಸಿದ್ದಾರೆ. ಪ್ರಕರಣದ ಪಾರದರ್ಶಕ ತನಿಖೆ ನಡೆಸಿ ತಪ್ಪಿತಸ್ಥರಿಗೆ ಶಿಕ್ಷೆಯಾಗುವುದನ್ನು ಖಚಿತಪಡಿಸಲು ಸಮರ್ಥ ಹಾಗೂ ಪ್ರಾಮಾಣಿಕ ಅಧಿಕಾರಿಗಳನ್ನು ನೇಮಿಸುವಂತೆ ರಾಜ್ಯ ಸರ್ಕಾರವನ್ನು ಒತ್ತಾಯಿಸಿದರು. ಎಸ್‌ಐಟಿಗೆ ನೇಮಕಗೊಂಡಿರುವ ಕೆಲವು ಅಧಿಕಾರಿಗಳು ಈ ಪ್ರಕರಣದ ತನಿಖೆ ನಡೆಸಲು ಸೂಕ್ತರಲ್ಲ. ಎಸ್‌ಐಟಿ ರಚಿಸಿ ಪ್ರಕರಣದ ಮರುತನಿಖೆ ನಡೆಸುವಂತೆ ರಾಜ್ಯ ಸರ್ಕಾರಕ್ಕೆ ನಿರ್ದೇಶನ ನೀಡಿದ ಸುಪ್ರೀಂ ಕೋರ್ಟ್‌ಗೆ ನಾವು ಕೃತಜ್ಞರಾಗಿದ್ದೇವೆ. ಯಾವುದೇ ಒತ್ತಡಕ್ಕೆ ಮಣಿಯದೆ ನ್ಯಾಯಯುತ ತನಿಖೆ ನಡೆಸಲು ಸಮರ್ಥ ತನಿಖಾಧಿಕಾರಿಗಳ ತಂಡವನ್ನು ರಚಿಸಿ, ನನ್ನ ಪುತ್ರಿಗೆ ನ್ಯಾಯ ದೊರಕಿಸಿಕೊಡುವಂತೆ ರಾಜ್ಯ ಸರ್ಕಾರವನ್ನು ಮನವಿ ಮಾಡುತ್ತೇನೆ ಎಂದರು.

**'SIT ತಂಡದ ಪೊಲೀಸ್ ಅಧಿಕಾರಿಗಳ ಮೇಲೆ ನಂಬಿಕೆಯಿಲ್ಲ**

## ಮರು ಸರ್ವೆ: ಎಚ್ಚರಿಕೆಯಿಂದ ಇರಿ

**ಉದಯವಾಹಿನಿ, ಉಡುಪಿ**

ಗ್ಯಾರಂಟಿ ಯೋಜನೆಗಳ ಮರುಸರ್ವೇ ಕಾರ್ಯವನ್ನು ಕೈಗೊಳ್ಳುವಾಗ ಗ್ಯಾರಂಟಿ ಯೋಜನೆಯ ಯಾವುದೇ ಅರ್ಹ ಫಲಾನುಭವಿಗಳು ಹೊರಗುಳಿಯದಂತೆ ಎಚ್ಚರಿಕೆ ವಹಿಸಿ ಮಾಡಬೇಕೆಂದು ಅಧಿಕಾರಿಗಳಿಗೆ ಜಿಲ್ಲಾ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ಅಶೋಕ್ ಕುಮಾರ್ ಕೊಡವೂರು ಸೂಚನೆ ನೀಡಿದರು.ಜಿಲ್ಲಾ ಪಂಚಾಯಿತಿಯ ಡಾ.ವಿ.ಎಸ್ ಆಚಾರ್ಯ ಸಭಾಂಗಣದಲ್ಲಿ ಶುಕ್ರವಾರ ನಡೆದ ಉಡುಪಿ ಜಿಲ್ಲಾ ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಪ್ರಗತಿ ಪರಿಶೀಲನಾ ಸಭೆಯಲ್ಲಿ ಅವರು ಮಾತನಾಡಿದರು. ಗೃಹಜ್ಯೋತಿ, ಗೃಹಲಕ್ಷ್ಮಿ ಹಾಗೂ ಅನ್ನಭಾಗ್ಯ ಯೋಜನೆಗಳ ನೈಜ ಫಲಾನುಭವಿಗಳನ್ನು ಗುರುತಿಸುವ ಪರಿಶೀಲನೆ ಕಾರ್ಯಗಳನ್ನು ಕೈಗೊಳ್ಳುವಾಗ ಅಧಿಕಾರಿಗಳು ಮನೆ ಮನೆಗೆ ಭೇಟಿ ನೀಡಿ ಸೂಕ್ತವಾಗಿ ಪರಿಶೀಲಿಸಬೇಕು ಎಂದರು. ಗೃಹಲಕ್ಷ್ಮಿ ಫಲಾನುಭವಿಗಳನ್ನು ಗುರುತಿಸುವ ಪರಿಶೀಲನಾ ಕಾರ್ಯಕ್ಕಾಗಿ ಈಗಾಗಲೇ 1050 ಗಣತಿದಾರರನ್ನು ಗುರುತಿಸಲಾಗಿದೆ ಎಂದು ವಿವರಿಸಿದರು. ಅನ್ನ ಭಾಗ್ಯ ಯೋಜನೆಯಡಿ ಪ್ರತಿಯೊಬ್ಬ ಪಡಿತರ ಚೀಟಿದಾರರು ಇ–ಕೆವೈಸಿಯನ್ನು ತಪ್ಪದೇ ಮಾಡಿಸಬೇಕು. ಜಿಲ್ಲೆಯಲ್ಲಿ ಇದರ ಪ್ರಗತಿ ಕುಂಠಿತವಾಗಿದೆ. ಕೆಲವು ಪ್ರದೇಶಗಳಲ್ಲಿ ಸರ್ವರ್ ಸಮಸ್ಯೆಯಿಂದ ಪ್ರಗತಿ ಸಾಧಿಸಲಾಗುತ್ತಿಲ್ಲ ಎಂದು ಕೇಳಿ ಬರುತ್ತಿದೆ. ಅದಕ್ಕೆ ಇಲಾಖಾ ಅಧಿಕಾರಿಗಳು ಸೂಕ್ತ ಕ್ರಮ ವಹಿಸಬೇಕು ಎಂದರು.

ಜಿಲ್ಲೆಯಲ್ಲಿ ಗೃಹಜ್ಯೋತಿ ಯೋಜನೆಯಡಿ 3.64 ಲಕ್ಷ ಜನರು ನೋಂದಣಿಯಾಗಿದ್ದು, ಈಗಾಗಲೇ 3.17 ಲಕ್ಷ ಫಲಾನುಭವಿಗಳ ಸರ್ವೇ ಕಾರ್ಯ ಪೂರ್ಣಗೊಂಡಿದೆ. ಪ್ರತಿಯೊಂದು ಮನೆಗೂ ಈಗಾಗಲೇ ಗುರುತಿನ ಚೀಟಿಯನ್ನು ಇಲಾಖೆಯ ವತಿಯಿಂದ ಅಂಟಿಸಲಾಗಿದೆ. ಬಾಕಿ ಉಳಿದ 47,000 ಮನೆಗಳ ಸರ್ವೇ ಕಾರ್ಯಗಳನ್ನು ಶೀಘ್ರದಲ್ಲಿಯೇ ಪೂರ್ಣಗೊಳಿಸುವಂತೆ ಸೂಚನೆ ನೀಡಿದರು.

## ಬೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ

**ಉದಯವಾಹಿನಿ, ಚಿತ್ರದುರ್ಗ**

ತೀವ್ರ ಬರಗಾಲ ಪರಿಸ್ಥಿತಿ ಎದುರಿಸುತ್ತಿರುವ ಸಂದರ್ಭದಲ್ಲಿ ಬೆಸ್ಕಾಂ ಅಧಿಕಾರಿಗಳು ಯಾವುದೇ ಮುನ್ಸೂಚನೆ ನೀಡದೇ ಏಕಾಏಕಿ ವಿದ್ಯುತ್ ಕಡಿತ ಮಾಡುತ್ತಿದ್ದಾರೆ ಎಂದು ಆರೋಪಿಸಿ ರಾಜ್ಯ ರೈತಸಂಘ ಹಾಗೂ ಹಸಿರು ಸೇನೆಗಳ ಒಕ್ಕೂಟದ ಮುಖಂಡರು ಬೆಸ್ಕಾಂ ಕಚೇರಿಗೆ ಮುತ್ತಿಗೆ ಹಾಕಿ ಪ್ರತಿಭಟಿಸಿದರು.ಜಿಲ್ಲೆಯಲ್ಲಿ ಯಾವುದೇ ನದಿ, ನಾಲೆಗಳಿಲ್ಲದ ಕಾರಣ ಎಲ್ಲಾ ರೈತರು ಕೊಳವೆ ಬಾವಿ ಪಂಪ್‌ಸೆಟ್‌ಗಳಿಂದ ನೀರಾವರಿ ಮಾಡುತ್ತಿದ್ದಾರೆ. ಎಲ್ಲಾ ರೈತರು ವಿದ್ಯುಚ್ಛಕ್ತಿಯನ್ನೇ ಅವಲಂಬಿಸಿದ್ದಾರೆ. ಈಗ ಜಿಲ್ಲೆಯಲ್ಲಿ ಎಲ್ಲಾ ತಾಲ್ಲೂಕುಗಳಲ್ಲೂ ಬರ ಕಾಡುತ್ತಿದೆ. ಬೆಸ್ಕಾಂ ಅಧಿಕಾರಿಗಳು ವಿದ್ಯುತ್ ವಿತರಣೆ ಕಡಿತಗೊಳಿಸಿದರೆ ನಾವು ಬೆಳೆ ಉಳಿಸಿಕೊಳ್ಳುವುದು ಹೇಗೆ? ವಿದ್ಯುತ್ ಕಡಿತದಿಂದ ಬೆಳೆಗಳು ಒಣಗಿಹೋಗಿದ್ದು, ರೈತರು ಸಾಲಗಾರರಾಗುವ ಪರಿಸ್ಥಿತಿ ನಿರ್ಮಾಣವಾಗಿದೆ. ಇದಕ್ಕೆ ಬೆಸ್ಕಾಂ ಸಿಬ್ಬಂದಿಯೇ ಕಾರಣ ಎಂದು ಪ್ರತಿಭಟನಕಾರರು ಆಕ್ರೋಶ ವ್ಯಕ್ತಪಡಿಸಿದರು. ನಿಯಮಾನುಸಾರ ರೈತರ ಪಂಪ್‌ಸೆಟ್‌ಗಳಿಗೆ 7 ಗಂಟೆ ಗುಣಮಟ್ಟದ ವಿದ್ಯುತ್ ನೀಡಬೇಕು. ರೈತರ ತೋಟಗಳ ಮನೆಗಳಿಗೆ ಓಪನ್ ಡೆಲ್ಟಾ ತೆಗೆದಿರುವುದರಿಂದ ತೋಟದ ಮನೆಗಳಲ್ಲಿ ವಾಸ ಮಾಡುವ ರೈತರಿಗೆ ಕಾಡುಪ್ರಾಣಿಗಳ ಕಾಟ, ವಿಷಜಂತುಗಳ ಕಾಟ ವಿಪರೀತವಾಗಿದೆ. ಮಕ್ಕಳ ವಿದ್ಯಾಭ್ಯಾಸಕ್ಕೆ ತೊಂದರೆಯಾಗಿರುತ್ತದೆ. ಆದ್ದರಿಂದ ರೈತರ ತೋಟಗಳ ಮನೆಗಳಿಗೆ ನಿರಂತರವಾಗಿ ವಿದ್ಯುತ್ ನೀಡಬೇಕು ಎಂದು ಒತ್ತಾಯಿಸಿದರು.

ಚಿಕಿತ್ಸೆಗಾಗಿ ಹೆಚ್ಚಿನ ಸಂಖ್ಯೆಯಲ್ಲಿ ಬಡ ರೋಗಿಗಳು ಬರುತ್ತಿರುವುದರಿಂದ ನಿರಂತರವಾಗಿ ಐಸಿಯು, ಸಾಮಾನ್ಯ ಹಾಸಿಗೆಗಳ ಕೊರತೆ ಎದುರಾಗುತ್ತಿತ್ತು

# ಮಂಗಳೂರಿನ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆ ಮೇಲ್ದರ್ಜೆಗೆ

**ಉದಯವಾಹಿನಿ, ಮಂಗಳೂರು**

ದಕ್ಷಿಣ ಕನ್ನಡ ಜಿಲ್ಲೆ ಸೇರಿದಂತೆ ಸುತ್ತಮುತ್ತಲಿನ ಹತ್ತಕ್ಕೂ ಹೆಚ್ಚು ಜಿಲ್ಲೆಗಳು ಹಾಗೂ ನೆರೆಯ ಕೇರಳ ರಾಜ್ಯದ ರೋಗಿಗಳಿಗೆ ಪ್ರಮುಖ ಸಂಜೀವಿನಿಯಾಗಿರುವ ಮಂಗಳೂರಿನ ಐತಿಹಾಸಿಕ ವೆನ್‌ಲಾಕ್ ಜಿಲ್ಲಾ ಆಸ್ಪತ್ರೆಯ ಸಾಮರ್ಥ್ಯವನ್ನು ಹಂತ ಹಂತವಾಗಿ 400 ಹಾಸಿಗೆಗಳಿಗೆ ಮೇಲ್ದರ್ಜೆಗೇರಿಸಲು ರಾಜ್ಯ ಸರ್ಕಾರ ಅಧಿಕೃತ ಅನುಮೋದನೆ ನೀಡಿ ಮಹತ್ವದ ಆದೇಶ ಹೊರಡಿಸಿದೆ.

ದಿನಾಂಕ 18–09–2026 ರಂದು ನಡೆದ ಸಚಿವ ಸಂಪುಟ ಸಭೆಯ ತೀರ್ಮಾನದಂತೆ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯು ಸೆಪ್ಟೆಂಬರ್ 25, 2026 ರಂದು ಈ ಆದೇಶವನ್ನು ಜಾರಿಗೊಳಿಸಿದೆ.

**ಮೊದಲ ಹಂತದಲ್ಲಿ 200 ಹಾಸಿಗೆ ಹೆಚ್ಚಳ:** ಸರ್ಕಾರದ ಆದೇಶದನ್ವಯ ವೆನ್‌ಲಾಕ್ ಆಸ್ಪತ್ರೆಯನ್ನು ಕೆಳಕಂಡ ಷರತ್ತುಗಳೊಂದಿಗೆ ಹಂತ ಹಂತವಾಗಿ ಮೇಲ್ದರ್ಜೆಗೇರಿಸಲಾಗುತ್ತದೆ.

**ಮೊದಲ ಹಂತದಲ್ಲಿ 200 ಬೆಡ್ ವಿಸ್ತರಣೆ:** ಮೊದಲ ಹಂತದಲ್ಲಿ ಆಸ್ಪತ್ರೆಯ ಸಾಮರ್ಥ್ಯವನ್ನು 200 ಹಾಸಿಗೆಗಳಷ್ಟು ಹೆಚ್ಚಿಸಲಾಗುತ್ತದೆ.

**ಮೂಲಸೌಕರ್ಯ ಮತ್ತು ಉಪಕರಣ:** ಬಂಡವಾಳ ವೆಚ್ಚಕ್ಕಾಗಿ ಈಗಾಗಲೇ ಲಭ್ಯವಿರುವ ಅನುದಾನವನ್ನು ಬಳಸಿಕೊಂಡು, ಮೊದಲ ಹಂತದ 200 ಹಾಸಿಗೆಗಳಿಗೆ ಅಗತ್ಯವಿರುವ ವೈದ್ಯಕೀಯ ಉಪಕರಣಗಳು ಮತ್ತು ಮೂಲಸೌಕರ್ಯಗಳನ್ನು ಕೆ.ಟಿ.ಪಿ.ಪಿ ಕಾಯ್ದೆ ಮತ್ತು ನಿಯಮಗಳ ಪ್ರಕಾರ ಒದಗಿಸಲು ಕ್ರಮ ಕೈಗೊಳ್ಳಬೇಕು. ಹಂತ ಹಂತವಾಗಿ 400 ಹಾಸಿಗೆಗಳ ವಿಸ್ತರಣೆಗೆ ರಾಜ್ಯ ಸರ್ಕಾರ ಅಧಿಕೃತ ಆದೇಶ

**ಹೆಚ್ಚುವರಿ ಅನುದಾನವಿಲ್ಲ:** ನಿಗದಿತ ಮೊತ್ತದಲ್ಲೇ ಈ ಕಾಮಗಾರಿಗಳನ್ನು ಪೂರ್ಣಗೊಳಿಸಬೇಕಾಗಿದ್ದು, ಯಾವುದೇ ಹೆಚ್ಚುವರಿ ಅನುದಾನ ಕೋರುವಂತಿಲ್ಲ.

**1.** ಮೊದಲ ಹಂತದಲ್ಲಿ 200 ಬೆಡ್ ವಿಸ್ತರಣೆ
**2.** ಮೂಲಸೌಕರ್ಯ ಮತ್ತು ಉಪಕರಣ
**3.** ಐಸಿಯು ಬೆಡ್‌ಗಳ ಕೊರತೆಗೆ ಪರಿಹಾರ



ಉದಯವಾಹಿನಿ ಚಿತ್ರ

### ಸೂಪರ್ ಸ್ಪೆಷಾಲಿಟಿ ಚಿಕಿತ್ಸೆಗಳು ಲಭ್ಯ

**ಐಸಿಯು ಬೆಡ್‌ಗಳ ಕೊರತೆಗೆ ಪರಿಹಾರ: ವೆನ್‌ಲಾಕ್ ಆಸ್ಪತ್ರೆಯಲ್ಲಿ ಜನರಲ್ ಮೆಡಿಸಿನ್, ಮೂಳೆ ರೋಗ, ಚರ್ಮರೋಗದಂತಹ ಸಾಮಾನ್ಯ ವಿಭಾಗಗಳ ಜೊತೆಗೆ ಯುರಾಲಜಿ, ಕಾರ್ಡಿಯಾಕ್ ಕ್ಯಾಥ್‌ಲ್ಯಾಬ್, ಪೀಡಿಯಾಟ್ರಿಕ್ ಸರ್ಜರಿ, ನ್ಯೂರಾಲಜಿ, ನ್ಯೂರೋಸರ್ಜರಿ, ನೆಫ್ರಾಲಜಿ, ಕ್ಯಾನ್ಸರ್ ಕೇರ್ ಹಾಗೂ ಪ್ಲಾಸ್ಟಿಕ್ ಸರ್ಜರಿಯಂತಹ ಅತ್ಯಾಧುನಿಕ ಸೂಪರ್ ಸ್ಪೆಷಾಲಿಟಿ ಚಿಕಿತ್ಸೆಗಳು ಲಭ್ಯವಿವೆ.**

### ಒಟ್ಟು 1,532 ಹಾಸಿಗೆಗಳ ಬೃಹತ್ ಆಸ್ಪತ್ರೆ

**1.** 1848ರಲ್ಲಿ ಆರಂಭವಾದ ವೆನ್‌ಲಾಕ್ ಆಸ್ಪತ್ರೆಯು ಲೇಡಿಗೋಷನ್ ಆಸ್ಪತ್ರೆ ಹಾಗೂ ಕೆಎಂಸಿ ಮಣಿಪಾಲ್ ಸಹಭಾಗಿತ್ವದಲ್ಲಿ ಪ್ರಸ್ತುತ 905 ಹಾಸಿಗೆಗಳ ಸಾಮರ್ಥ್ಯದೊಂದಿಗೆ ಕಾರ್ಯನಿರ್ವಹಿಸುತ್ತಿದೆ. ಪ್ರಸ್ತುತ ವಿವಿಧ ಬ್ಲಾಕ್‌ಗಳಲ್ಲಿ ಒಟ್ಟು 1,088 ಹಾಸಿಗೆಗಳು ಲಭ್ಯವಿವೆ.

**2.** ಕಾಮಗಾರಿ ಪೂರ್ಣಗೊಳ್ಳುವ ಹಂತದಲ್ಲಿರುವ 50 ಹಾಸಿಗೆಗಳ ಸಿಸಿಬಿ ಬ್ಲಾಕ್ ಸೇರಿದರೆ ಈ ಸಂಖ್ಯೆ 1,138 ಕ್ಕೆ ಏರಿಕೆಯಾಗಲಿದೆ.

ಸರ್ಕಾರದ 70 ಕೋಟಿ ಅನುದಾನದಲ್ಲಿ ನಿರ್ಮಾಣವಾಗಲಿರುವ ನೂತನ ಓಪಿಡಿ ಕಟ್ಟಡದ 3 ಮತ್ತು 4ನೇ ಮಹಡಿಯಲ್ಲಿ 320 ಹಾಸಿಗೆಗಳು ಲಭ್ಯವಾಗಲಿವೆ.

**3.** ಎಂಆರ್‌ಪಿಎಲ್‌ನ ಸಿಎಸ್‌ಆರ್ ನಿಧಿಯಿಂದ ಮೆಡಿಕಲ್ ಬ್ಲಾಕ್ ಮೇಲೆ ನಿರ್ಮಿಸಲಾಗುತ್ತಿರುವ ಎರಡು ಅಂತಸ್ತಿನ ಕಟ್ಟಡದಲ್ಲಿ 74 ಹಾಸಿಗೆಗಳು ಸೇರ್ಪಡೆಯಾಗಲಿವೆ.

**4.** ಈ ಎಲ್ಲಾ ಕಾಮಗಾರಿಗಳು ಪೂರ್ಣಗೊಂಡರೆ ವೆನ್‌ಲಾಕ್ ಆಸ್ಪತ್ರೆಯು ಒಟ್ಟಾರೆಯಾಗಿ 1,532 ಹಾಸಿಗೆಗಳ ಬೃಹತ್ ಸೂಪರ್ ಸ್ಪೆಷಾಲಿಟಿ ಆರೋಗ್ಯ ಕೇಂದ್ರವಾಗಿ ಹೊರಹೊಮ್ಮಲಿದೆ.

**ಮಾನವ ಸಂಪನ್ಮೂಲಕ್ಕೆ ಪ್ರತ್ಯೇಕ ಪ್ರಸ್ತಾವನೆ:** ಹೆಚ್ಚುವರಿ 200 ಹಾಸಿಗೆಗಳಿಗೆ ಅಗತ್ಯವಿರುವ ವೈದ್ಯರು, ಶುಶ್ರೂಷಕರು ಹಾಗೂ ಸಿಬ್ಬಂದಿ (ಮಾನವ ಸಂಪನ್ಮೂಲ) ನೇಮಕಾತಿಗಾಗಿ ಪ್ರತ್ಯೇಕ ಪ್ರಸ್ತಾವನೆ ಸಲ್ಲಿಸಲು ಸೂಚಿಸಲಾಗಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 04:30 ರಿಂದ 06:00 |
| ಗುಳಿಕ ಕಾಲ | ಮಧ್ಯಾಹ್ನ | 03:00 ರಿಂದ 04:30 |
| ಯಮಗಂಡ ಕಾಲ | ಮಧ್ಯಾಹ್ನ | 12:00 ರಿಂದ 01:30 |

**ಮೇಷ**
ಆಕರ್ಷಕವಾದ ಮತ್ತು ನಿಮ್ಮನ್ನು ಶಾಂತವಾಗಿರಿಸುವ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಿ. ಇಂದು ನಿಮಗೆ ಅನೇಕ ಹೊಸ ಆರ್ಥಿಕ ಯೋಜನೆಗಳು ದೊರಕುತ್ತವೆ – ಯಾವುದೇ ಬದ್ಧತೆಗೊಳಗಾಗುವ ಮುನ್ನ ಸಾಧಕ ಬಾಧಕಗಳನ್ನು ಎಚ್ಚರಿಕೆಯಿಂದ ಪರಿಶೀಲಿಸಿ.

**ವೃಷಭ**
ವಿಶ್ರಾಂತಿ ತೆಗೆದುಕೊಳ್ಳಿ ಮತ್ತು ಕೆಲಸದ ನಡುವೆ ಸಾಧ್ಯವಾದಷ್ಟೂ ವಿಶ್ರಾಂತಿ ಪಡೆಯಲು ಪ್ರಯತ್ನಿಸಿ. ವಿಳಂಬಿತ ಪಾವತಿಗಳನ್ನು ಮಾಡುತ್ತಿದ್ದ ಹಾಗೆ ಹಣದ ಪರಿಸ್ಥಿತಿ ಸುಧಾರಿಸುತ್ತದೆ. ನೀವು ಬುದ್ಧಿವಂತಿಕೆಯನ್ನು ಬಳಸಿದಲ್ಲಿ ಜನರು ನಿಮ್ಮ ಮಾತುಗಳನ್ನು ಕೇಳುತ್ತಾರೆ.

**ಮಿಥುನ**
ನಿಮ್ಮ ಶಕ್ತಿಯ ಮಟ್ಟ ಹೆಚ್ಚಿರುತ್ತದೆ ಮತ್ತು ನೀವು ಇದನ್ನು ಬಾಕಿಯಿರುವ ಕೆಲಸಗಳನ್ನು ಪೂರ್ಣಗೊಳಿಸಲು ಬಳಸಬೇಕು. ಚಂದ್ರನ ಸ್ಥಾನದಿಂದಾಗಿ, ಇಂದು ನಿಮ್ಮ ಹಣವನ್ನು ಅನಗತ್ಯ ಕೆಲಸಗಳಿಗೆ ಖರ್ಚು ಮಾಡಬಹುದು. ಇಂದು ನೀವು ಕುಟುಂಬದ ಸದಸ್ಯರೊಂದಿಗೆ ಶಾಂತ ದಿನವನ್ನು ಆನಂದಿಸುತ್ತೀರಿ.

**ಕರ್ಕಾಟಕ**
ನಿಮ್ಮ ಮಾನಸಿಕ ಒತ್ತಡವನ್ನು ಹೊಡೆದೋಡಿಸಲು ಆಧ್ಯಾತ್ಮಿಕತೆ ಒಂದು ಅತ್ಯುತ್ತಮ ಆಯ್ಕೆಯಾಗಿರುವುದರಿಂದ ನೀವು ಅದರ ಸಹಾಯ ಪಡೆಯಲು ಈಗ ಒಳ್ಳೆಯ ಸಮಯ. ಧ್ಯಾನ ಮತ್ತು ಯೋಗ ನಿಮ್ಮ ಮಾನಸಿಕ ದೃಢತೆಯನ್ನು ವರ್ಧಿಸುತ್ತವೆ.

**ಸಿಂಹ**
ಧ್ಯಾನ ಮತ್ತು ಯೋಗ ಆಧ್ಯಾತ್ಮಿಕ ಹಾಗೂ ಭೌತಿಕ ಲಾಭಗಳೆರಡಕ್ಕೂ ಪ್ರಯೋಜನಕಾರಿಯಾಗುತ್ತದೆ. ನೀವು ದೀರ್ಘಕಾಲದ ಆಧಾರದ ಮೇಲೆ ಹೂಡಿಕೆ ಮಾಡಿದಲ್ಲಿ ಗಣನೀಯ ಲಾಭ ಮಾಡುತ್ತೀರಿ. ನಿಮ್ಮ ಸ್ನೇಹಿತರು ನಿಮಗೆ ಅವರ ಅವಶ್ಯಕತೆ ಅತ್ಯಂತ ಹೆಚ್ಚಿದ್ದಾಗ ನಿಮ್ಮನ್ನು ನಿರಾಸೆಗೊಳಿಸಬಹುದು.

**ಕನ್ಯಾ**
ಸಂತಸದ ಪ್ರಯಾಣ ಮತ್ತು ಸಾಮಾಜಿಕ ಕಾರ್ಯಕ್ರಮಗಳು ನಿಮಗೆ ಆರಾಮ ಮತ್ತು ಸಂತೋಷ ತರುತ್ತದೆ. ಇಂದು, ನೀವು ಸಾಕಷ್ಟು ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ, ಆದರೆ ಕೆಲವು ಅಮೂಲ್ಯ ವಸ್ತುವಿನ ಕಳ್ಳತನದಿಂದಾಗಿ, ನಿಮ್ಮ ಮನಸ್ಥಿತಿಗೆ ತೊಂದರೆಯಾಗಬಹುದು.

**ತುಲಾ**
ನಿಮ್ಮ ಉತ್ತಮ ಆರೋಗ್ಯದ ಸಲುವಾಗಿ ದೀರ್ಘ ನಡಿಗೆಗೆ ಹೋಗಿ. ನಿಮಗೆ ತಿಳಿದ ಜನರ ಮೂಲಕ ಆದಾಯದ ಹೊಸ ಮೂಲಗಳು ಕಂಡುಬರುತ್ತವೆ. ನಿಮ್ಮ ಮನೆಯ ವಾತಾವರಣವನ್ನು ಬದಲಾಯಿಸುವ ಮೊದಲು ಅದಕ್ಕೆ ಎಲ್ಲರ ಅನುಮೋದನೆ ಇದೆ ಎಂದು ಖಾತ್ರಿಪಡಿಸಿಕೊಳ್ಳಿ.

**ವೃಶ್ಚಿಕ**
ಮಕ್ಕಳೊಂದಿಗೆ ಆಟವಾಡುವುದು ನಿಮಗೆ ಯಾವತ್ತೂ ಅದ್ಭುತ ಚಿಕಿತ್ಸೆಯ ಅನುಭವ ನೀಡುತ್ತದೆ. ಇಂದು ನೀವು ಆಲ್ಕೊಹಾಲ್ಯುಕ್ತ ಮದ್ಯವನ್ನು ಸೇವಿಸಬಾರದು, ಮಾದಕತೆಯ ಸಂದರ್ಭದಲ್ಲಿ ನೀವು ಯಾವುದೇ ಬೆಲೆಬಾಳುವ ವಸ್ತುಗಳನ್ನು ಕಳೆದುಕೊಳ್ಳಬಹುದು.

**ಧನಸ್ಸು**
ನಿಮ್ಮ ಅಸೂಯೆ ವರ್ತನೆ ನಿಮ್ಮನ್ನು ದುಃಖಿಗಳಾಗಿಯೂ ಮತ್ತು ಖಿನ್ನರಾಗಿಯೂ ಮಾಡಬಹುದು. ಆದರೆ ಇದು ಒಂದು ಸ್ವಯಂಕೃತ ಗಾಯವಾಗಿರುವುದರಿಂದ ಇದರ ಬಗ್ಗೆ ಪ್ರಲಾಪಿಸುವ ಅಗತ್ಯವಿಲ್ಲ.ಆದರೆ ಆರ್ಥಿಕವಾಗಿ ಲಾಭದಾಯಕವಾಗಿರುತ್ತದೆ.

**ಮಕರ**
ನಿಮ್ಮ ಮಗುವಿನಂಥ ಸ್ವಭಾವ ಕಾಣಿಸಿಕೊಳ್ಳುತ್ತದೆ. ಮತ್ತು ನೀವು ಒಂದು ಆಹ್ಲಾದಕಾರಿ ಮನಸ್ಥಿತಿಯಲ್ಲಿರುತ್ತೀರಿ. ಇಂದು ಹಣಕ್ಕೆ ಸಂಬಂಧಿಸಿದ ಯಾವುದೇ ಸಮಸ್ಯೆಯನ್ನು ಹೊಂದಿರುವ ಸಾಧ್ಯತೆ ಇದೆ ಆದರೆ ನಿಮ್ಮ ಬುದ್ಧಿವಂತಿಕೆಯಿಂದ ಈ ಹಾನಿಯನ್ನು ಲಾಭದಲ್ಲಿ ಪರಿವರ್ತಿಸಬಹುದು

**ಕುಂಭ**
ಬಹಳಷ್ಟು ವಿಷಯಗಳು ನೀವು ಬಯಸಿದಂತಿರುವ ಹಾಸ್ಯದಿಂದ ತುಂಬಿದ ಒಂದು ದಿನ. ನಿಮ್ಮ ತಾಯಿಯ ದುಂದುಗಾರಿಕೆಯನ್ನು ನೋಡಿ ನೀವು ಚಿಂತಿತರಾಗಬಹುದು ಮತ್ತು ಆದ್ದರಿಂದ ನೀವು ಅವರ ಕೋಪದ ಬೇಟೆಯಾಗಬಹುದು.ಇಂದು ಪ್ರಣಯದ ಭಾವನೆಗಳಿಗೆ ಪ್ರತಿಕ್ರಿಯೆ ದೊರಕುತ್ತದೆ.

**ಮೀನ**
ನೀವು ಯೋಗ ಧ್ಯಾನದೊಂದಿಗೆ ದಿನವನ್ನು ಪ್ರಾರಂಭಿಸಬಹುದು. ಇದನ್ನು ಮಾಡುವುದರಿಂದ ನಿಮಗೆ ಪ್ರಯೋಜನಕಾರಿಯಾಗುತ್ತದೆ ಮತ್ತು ದಿನವಿಡೀ ನಿಮ್ಮಲ್ಲಿ ಶಕ್ತಿ ಉಳಿದಿರುತ್ತದೆ. ತಮ್ಮ ವ್ಯಾಪರಕ್ಕಾಗಿ ಮನೆಯಿಂದ ಹೊರಗೆ ಹೋಗಿರುವ ವ್ಯಾಪಾರಿಗಳು, ತನ್ನ ಹಣವನ್ನು ಜಾಗರೂಕವಾಗಿಡಿ.

## ಶಾರ್ಟ್ ಸರ್ಕ್ಯೂಟ್‌ನಿಂದ ಗುಡಿಸಲುಗೆ ಬೆಂಕಿ: ಹಾನಿ

**ಉದಯವಾಹಿನಿ, ಮಸ್ಕಿ**

ತಾಲ್ಲೂಕಿನ ಬಳಗಾನುರು ಪಟ್ಟಣ ಪಂಚಾಯತಿ ವ್ಯಾಪ್ತಿಯ ಬಸವೇಶ್ವರ ನಗರ ಗಂಗಣ್ಣ ಅಮರಪ್ಪ ತಲೇಖಾನ ಎಂಬುವವರಿಗೆ ಮನೆಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್‌ನಿಂದ ಗುಡಿಸಲಿಗೆ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡು, ಗುಡಿಸಲು ಸಂಪೂರ್ಣವಾಗಿ ಸುಟ್ಟು ಕರಕಲಾಗಿರುವ ಘಟನೆ ಶನಿವಾರ ಬೆಳಿಗ್ಗೆ ನಡೆದಿದೆ. ಬೆಂಕಿಯ ಕೆನ್ನಾಲಿಗೆಗೆ ಗುಡಿಸಲಿನಲ್ಲಿದ್ದ 2 ಲಕ್ಷ 25 ಸಾವಿರ ನಗದು ಹಣ, ಎರಡೂವರೆ ತೊಲಿ ಬಂಗಾರ, 22 ತೊಲಿ ಬೆಳ್ಳಿ, 35 ಕ್ವಿಂಟಲ್ ಹತ್ತಿ, 25 ಪಾಕೀಟು ಜೋಳ (ಬಿತ್ತನೆ ಮಾಡಲು), 4 ಚೀಲ ಅಕ್ಕಿ, 3 ಚೀಲ ಭತ್ತ ಸೇರಿದಂತೆ ಮನೆಬಳಕೆಯ ವಸ್ತುಗಳು, ದವಸ-ಧಾನ್ಯ, ಬಟ್ಟೆ ಸೇರಿದಂತೆ ಹಲವು ವಸ್ತುಗಳು ಬೆಂಕಿಗಾಹುತಿಯಾಗಿದ್ದು, ಕುಟುಂಬಕ್ಕೆ ಸುಮಾರು 10 ಲಕ್ಷ ಪ್ರಮಾಣದ ನಷ್ಟ ಸಂಭವಿಸಿದೆ. ಬೆಂಕಿ ಕಾಣಿಸಿಕೊಂಡ ತಕ್ಷಣ ಸ್ಥಳೀಯರು ಬೆಂಕಿ ನಂದಿಸಲು ಪ್ರಯತ್ನಿಸಿದ್ದು, ಅಗ್ನಿಶಾಮಕ ಸಿಬ್ಬಂದಿಗೂ ಮಾಹಿತಿ ನೀಡಲಾಗಿದೆ. ಘಟನೆಗೆ ವಿದ್ಯುತ್ ಶಾರ್ಟ್ ಸರ್ಕ್ಯೂಟ್ ಕಾರಣ ಎಂದು ಶಂಕಿಸಲಾಗಿದೆ. ಈ ಕುರಿತು ಸಂಬಂಧಪಟ್ಟ ಗ್ರಾಮ ಲೆಕ್ಕಾಧಿಕಾರಿಯಾದ ಅಮರೇಶ ನಾಯ್ಕ್ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ನಷ್ಟದ ಅಂದಾಜು ಮಾಡಿದ್ದಾರೆ. ಸಂತ್ರಸ್ತ ಕುಟುಂಬಕ್ಕೆ ಸರ್ಕಾರದಿಂದ ಸೂಕ್ತ ಪರಿಹಾರ ನೀಡಬೇಕು ಹಾಗೂ ವಿದ್ಯುತ್ ಅವಘಡಕ್ಕೆ ಕಾರಣವೇನು ಎಂಬುದನ್ನು ಪರಿಶೀಲಿಸಿ ಕ್ರಮ ಕೈಗೊಳ್ಳಬೇಕು ಎಂದು ಸ್ಥಳೀಯರು ಒತ್ತಾಯಿಸಿದ್ದಾರೆ.


ಉದಯವಾಹಿನಿ ಚಿತ್ರ

## ಜಿಲ್ಲೆಯ 1 ಲಕ್ಷ ರೈತರಿಗೆ ಬರಪರಿಹಾರ: ನಾಗೇಂದ್ರಪ್ರಸಾದ್

**ಉದಯವಾಹಿನಿ, ಬಳ್ಳಾರಿ**

ಜಿಲ್ಲೆಯಲ್ಲಿ ಸುಮಾರು ಒಂದು ಲಕ್ಷಕ್ಕೂ ಅಧಿಕ ರೈತರಿದ್ದು. ರಾಜ್ಯ ಸರ್ಕಾರ ಅರ್ಹ ರೈತರಿಗೆ ಮೊದಲ ಹಂತದಲ್ಲಿ ಬರ ಪರಿಹಾರ ತಲಾ 2500 ರೂ ನೀಡುವ ಘೋಷಣೆ ಮಾಡಿದ್ದು ಇದನ್ನು ತಲುಪಿಸುವ ಕಾರ್ಯ ಪ್ರಾರಂಭಿಸಬೇಕು ಎಂದು ಡಿಸಿ ಕೆ.ನಾಗೇಂದ್ರ ಪ್ರಸಾದ್ ಹೇಳಿದ್ದಾರೆ. ಜಿಲ್ಲಾ ವಿಪತ್ತು ನಿರ್ವಹಣಾ ಪ್ರಾಧಿಕಾರದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಈ ವಿಷಯವನ್ನು ಸಂಭದಿಸ8ದ ಅಧಿಕಾರಿಗಳಿಗೆ ಸೂಚಿಸಿದ್ದಾರೆ.



ಬರ ಪರಿಸ್ಥಿತಿಯನ್ನು ಸಮರ್ಥವಾಗಿ ಎದುರಿಸಲು ತಹಶೀಲ್ದಾರ್ ನೇತೃತ್ವದ ತಾಲ್ಲೂಕು ಟಾಸ್ಕ್ ಫೋರ್ಸ್ ಸಮಿತಿಗಳು ನಿಯಮಿತವಾಗಿ ಸಭೆಗಳನ್ನು ನಡೆಸಿ, ಕುಡಿಯುವ ನೀರು ಮತ್ತು ಮೇವಿನ ಸಮಸ್ಯೆಗಳ ಬಗ್ಗೆ ತಕ್ಷಣವೇ ಸ್ಪಂದಿಸಬೇಕು ಎಂದು ಅಧಿಕಾರಿಗಳಿಗೆ ಕಟ್ಟುನಿಟ್ಟಿನ ಸೂಚನೆ ನೀಡಿದರು. ಜಿಲ್ಲೆಯಲ್ಲಿ ಜಾನುವಾರುಗಳಿಗೆ ಮೇವಿನ ಕೊರತೆ ಎದುರಾಗದಂತೆ 10,475 ಮೇವು ಮಿನಿ ಕಿಟ್ಗಳನ್ನು ವಿತರಿಸಲು ಕ್ರಮ ಕೈಗೊಳ್ಳಲಾಗಿದೆ. ಬಳ್ಳಾರಿ-2,649 ಕಿಟ್, ಸಿರುಗುಪ್ಪ-2,389 ಕಿಟ್, ಸಂಡೂರು-3,241 ಕಿಟ್, ಕುರುಗೋಡು-1,123 ಕಿಟ್ ಹಾಗೂ ಕಂಪ್ಲಿ-1,073 ಕಿಟ್ಗಳನ್ನು ವಿತರಿಸ ಬೇಕಿದೆ.

ನೀರಿನ ಸೌಲಭ್ಯ ಹಾಗೂ ಜಾನುವಾರುಗಳನ್ನು ಹೊಂದಿರುವ ಅರ್ಹ ರೈತರಿಪಟ್ಟಿಯನ್ನು ಈಗಾಗಲೇ ಸಿದ್ಧಪಡಿಸಲಾಗಿದೆ. ಕಿಟ್ ಗಳು ಬಂದ ಕೂಡಲೇ ವಿತರಿಸಲಿದೆಂದು ಪಶು, ಸಂಗೋಪನಾ ಇಲಾಖೆಯ ಅಧಿಕಾರಿಗಳು ಸಭೆಯಲ್ಲಿ ತಿಳಿಸಿದ್ದಾರೆ. ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಮಹಮ್ಮದ್ ಹಾರೀಸ್ ಸುಮೇರ್ ಅವರು ಮಾತನಾಡಿ, ಎಲ್-ನಿನೋ ಪ್ರಭಾವದಿಂದಾಗಿ ಮಳೆ ಮಾದರಿ ಹದಗೆಟ್ಟಿದ್ದು, ಈಶಾನ್ಯ ಮುಂಗಾರು ಸಹ ದುರ್ಬಲಗೊಳ್ಳುವ ಸಾಧ್ಯತೆಯಿದೆ.

### ಕಲಬುರಗಿ ಜಿಲ್ಲೆಯಲ್ಲಿ ತೊಗರಿ ಕೇವಲ ಕೃಷಿ ಉತ್ಪನ್ನವಲ್ಲ; ಸಾವಿರಾರು ಕುಟುಂಬಗಳ ಕೃಷಿ ಆರ್ಥಿಕತೆ ಯ ಪ್ರಮುಖ ಆಧಾರ

# ಕಲ್ಯಾಣ ಕರ್ನಾಟಕದ ಅನ್ನದಾತನ ಬೆಳೆಗೆ ವಿಶ್ವಮನ್ನಣೆ

**ಉದಯವಾಹಿನಿ, ಕಲಬುರಗಿ**

ಇಲ್ಲಿನ ಕಪ್ಪು ಮಣ್ಣಿನಲ್ಲಿ ಅರಳುವ ಕಲಬುರಗಿ ತೊಗರಿಯ ಹಿರಿಮೆ ಇದೀಗ ದೇಶದ ಗಡಿ ದಾಟಿದೆ. ರೈತನ ಬೆವರಿನಿಂದ ಬೆಳೆದ, ತನ್ನದೇ ಆದ ರುಚಿ-ಪರಿಮಳದಿಂದ ಗುರುತಿಸಿಕೊಂಡಿ ರುವ GI ಟ್ಯಾಗ್‌ನ 'ಗುಲಬರ್ಗಾ ತೊಗರಿ ಬೇಳೆ' ಸಮುದ್ರದಾಚೆ ಮಾಲ್ಡೀವ್ಸ್ ಮಾರುಕಟ್ಟೆ ಪ್ರವೇಶಿಸಿದೆ. ಒಂದು ಮೆಟ್ರಿಕ್ ಟನ್ ತೊಗರಿ ಬೇಳೆ ರಫ್ತಾಗಿರುವುದು, ಕಲಬುರಗಿ ನೆಲದ ಈ ಸಾಂಪ್ರದಾಯಿಕ ಬೆಳೆಗೆ ದೊರೆತಿರುವ ಅಂತಾರಾಷ್ಟ್ರೀಯ ಮನ್ನಣೆಯ ಹೊಸ ಮೈಲಿಗಲ್ಲಾಗಿದೆ.

**1.** ತೊಗರಿಯ ಹಿರಿಮೆ ದೇಶದ ಗಡಿ ದಾಟಿದೆ
**2.** ಈ ಭಾಗದಲ್ಲಿ ತೊಗರಿಗೆ ವಿಶಿಷ್ಟ ಸ್ಥಾನವಿದೆ
**3.** ಮಾಲ್ಡೀವ್ಸ್‌ಗೆ ತಲುಪಿರುವ ಒಂದು ಟನ್

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪಿಯೂಷ್ ಗೊಯಲ್ ಅವರು ತಮ್ಮ 'ಎಕ್ಸ್' ಖಾತೆ ಯಲ್ಲಿ ಈ ಬೆಳವಣಿಗೆಯನ್ನು ಹಂಚಿಕೊಂಡಿದ್ದಾರೆ. ಜಾಗತಿಕ ಮಾರುಕಟ್ಟೆಯಲ್ಲಿ ಈ ಉತ್ಪನ್ನಕ್ಕೆ ರೈತರಿಗೆ ಶೇ.30ಕ್ಕೂ ಹೆಚ್ಚು ಹೆಚ್ಚುವರಿ ಬೆಲೆ ದೊರೆಯುತ್ತಿದೆ ಎಂದು ತಿಳಿಸಿದ್ದಾರೆ.

ಮಣ್ಣಿನ ಗುಣ, ಬೆಳೆಯ ಹಿರಿಮೆ ಕಲಬುರಗಿ ಜಿಲ್ಲೆಯಲ್ಲಿ ತೊಗರಿ ಕೇವಲ ಕೃಷಿ ಉತ್ಪನ್ನವಲ್ಲ, ಸಾವಿರಾರು ಕುಟುಂಬಗಳ ಕೃಷಿ ಆರ್ಥಿಕತೆಯ ಪ್ರಮುಖ ಆಧಾರ. ಕಡಿಮೆ ಮಳೆಯ ಪರಿಸ್ಥಿತಿಯಲ್ಲೂ ಬೆಳೆಯುವ ಸಾಮರ್ಥ್ಯ, ಇಲ್ಲಿನ ಕಪ್ಪು ಮಣ್ಣು ಹಾಗೂ ಹವಾಮಾನಕ್ಕೆ ಹೊಂದಿಕೊಳ್ಳುವ ಗುಣದಿಂದ ಈ ಭಾಗದಲ್ಲಿ ತೊಗರಿಗೆ ವಿಶಿಷ್ಟ ಸ್ಥಾನವಿದೆ.

ಇಲ್ಲಿನ ತೊಗರಿಯಿಂದ ಸಿದ್ಧವಾಗುವ ಬೇಳೆ ರುಚಿ, ಪರಿಮಳ ಹಾಗೂ ಬೇಯುವ ಗುಣದಿಂದ ಗ್ರಾಹಕರ ಗಮನ ಸೆಳೆದಿದೆ. ಇದೇ ವೈಶಿಷ್ಟ್ಯಕ್ಕೆ ಅಧಿಕೃತ ಭೌಗೋಳಿಕ ಗುರುತಿನ ಮುದ್ರೆ ಸಿಕ್ಕಿದ್ದು, 2019ರಲ್ಲಿ ಮಾನ್ಯತೆ ದೊರೆತಿದೆ.


ಉದಯವಾಹಿನಿ ಚಿತ್ರ

**ಹೊಲದಿಂದ ವಿದೇಶಿ ಮಾರುಕಟ್ಟೆಗೆ:** ಪ್ರತಿವರ್ಷ ಕನಿಷ್ಠ 5 ಲಕ್ಷ ಹೆಕ್ಟರ್ ಪ್ರದೇಶದಲ್ಲಿ ಬೆಳೆಯುವ ಕಲಬುರಗಿ ತೊಗರಿ ಮಾಲ್ಡೀವ್ಸ್‌ಗೆ ತಲುಪಿರುವ ಒಂದು ಟನ್ ಬೇಳೆ ಪ್ರಮಾಣದಲ್ಲಿ ಸೀಮಿತವಾಗಿದ್ದರೂ, ಅದರ ಹಿಂದೆ ಇರುವ ಮಾರುಕಟ್ಟೆ ಸಾಧ್ಯತೆ ದೊಡ್ಡದು. ಉಖ ಮಾನ್ಯತೆ ಹೊಂದಿರುವ ಸ್ಥಳೀಯ ಉತ್ಪನ್ನವನ್ನು ವಿದೇಶಿ ಗ್ರಾಹಕರಿಗೆ ಪರಿಚಯಿಸುವುದರಿಂದ ಮುಂದಿನ ದಿನಗಳಲ್ಲಿ ರಫ್ತು ವಿಸ್ತರಣೆಗೆ ಅವಕಾಶ ಸೃಷ್ಟಿ ಯಾಗಲಿದೆ.

ವಿದೇಶಿ ಮಾರುಕಟ್ಟೆಯಲ್ಲಿ ಗುಣಮಟ್ಟದ ಉತ್ಪನ್ನಕ್ಕೆ ಹೆಚ್ಚಿನ ದರ ದೊರೆತರೆ ಅದರ ನೇರ ಪ್ರಯೋಜನ ಬೆಳೆಗಾರರಿಗೂ ತಲುಪುವ ಸಾಧ್ಯತೆ ಇದೆ. ಈ ಹಿನ್ನೆಲೆಯಲ್ಲಿ ಮಾಲ್ಡೀವ್ಸ್ ರಫ್ತು ಕಲಬುರಗಿ ತೊಗರಿಯ ವಾಣಿಜ್ಯ ಮೌಲ್ಯ ಹೆಚ್ಚಿಸುವ ಬೆಳವಣಿಗೆಯಾಗಿದೆ.ಕಲಬುರಗಿ ತೊಗರಿಯ ಮುಂದಿನ ಪಯಣ ಕೇವಲ ಹೆಚ್ಚು ಪ್ರಮಾಣದ ರಫ್ತಿಗೆ ಸೀಮಿತವಾಗದೆ, GI ಗುರುತಿನ ಮೌಲ್ಯವನ್ನು ರೈತನ ಉತ್ಪನ್ನದ ಬೆಲೆಯಾಗಿ ಪರಿವರ್ತಿಸುವುದಾಗಿದೆ.

### ಹೊಸ ಅವಕಾಶ ತೆರೆದಿದೆ

ತೊಗರಿ ಬೆಳೆಯ ಸುತ್ತಲೂ ದಾಲ್ ಮಿಲ್‌ಗಳು, ಸಂಸ್ಕರಣೆ, ವ್ಯಾಪಾರ, ಸಾಗಣೆ ಸೇರಿದಂತೆ ದೊಡ್ಡ ಉದ್ಯಮ ಸರಪಳಿ ರೂಪುಗೊಂಡಿದೆ. ಹೀಗಾಗಿ, ತೊಗರಿಗೆ ದೊರೆಯುತ್ತಿರುವ ಜಾಗತಿಕ ಗುರುತು ಜಿಲ್ಲೆಯ ಕೃಷಿ ಆರ್ಥಿಕತೆಗೂ ಹೊಸ ಅವಕಾಶಗಳನ್ನು ತೆರೆದಿದೆ.

GI ಟ್ಯಾಗ್ ಪಡೆದ ಗುಲಬರ್ಗಾ ತೊಗರಿ ಬೇಳೆಯ ಒಂದು ಮೆಟ್ರಿಕ್ ಟನ್ ಮಾಲ್ಡೀವ್ಸ್‌ಗೆ ರಫ್ತಾಗಿದೆ. ಈ ಉತ್ಪನ್ನಕ್ಕಾಗಿ ಶ್ರಮಿಸಿರುವ ರೈತರಿಗೆ ಅಂತಾರಾಷ್ಟ್ರೀಯ ಮಾರುಕಟ್ಟೆಯಲ್ಲಿ ಶೇ.30ಕ್ಕೂ ಹೆಚ್ಚು ಹೆಚ್ಚಿನ ಬೆಲೆ ದೊರೆಯುತ್ತಿದೆ.
– **ಪಿಯೂಷ್ ಗೊಯಲ್,** ಕೇಂದ್ರ ಸಚಿವ

ಕಲಬುರಗಿ ತೊಗರಿಗೆ ಭೌಗೋಳಿಕ ಮಾನ್ಯತೆ ಜತೆಗೆ ಉತ್ತಮ ಪೌಷ್ಠಿಕ ಅಂಶಗಳಿವೆ. ರಾಜ್ಯ ಸರ್ಕಾರ 'ಭೀಮಾ ಪಲ್ಸ್' ಬ್ರ್ಯಾಂಡಿಂಗ್ ಮೂಲಕ ತೊಗರಿಗೆ ಉತ್ತೇಜನ ನೀಡುತ್ತಿದೆ. ಎಪಿಇಡಿಎ ಸಂಸ್ಥೆ ಸ್ಥಳೀಯ ತೊಗರಿಯನ್ನು ದೂರದ ಮಾಲ್ಡೀವ್ಸ್‌ಗೂ ಕೊಂಡೊಯ್ದು ರಫ್ತಿಗೆ ಸಣ್ಣ ಹೆಜ್ಜೆ ಇಟ್ಟಿದೆ.
– **ಇಕ್ರಂ ಶರೀಫ್,** ಜಿಲ್ಲಾಧಿಕಾರಿ

## ಸಂಸ್ಕೃತಿ ವಿನಿಮಯಕ್ಕೆ 'ಯುವ ಸಂಗಮ' ವೇದಿಕೆ: ನಾಳೆ

**ಉದಯವಾಹಿನಿ, ಕಲಬುರಗಿ**

ವೈವಿಧ್ಯತೆಯಲ್ಲಿ ಏಕತೆಯನ್ನು ಹೊಂದಿರುವ ಭಾರತದ ವಿವಿಧ ಭಾಗಗಳ ಸಾಂಸ್ಕೃತಿಕ, ಸಾಮಾಜಿಕ, ಶೈಕ್ಷಣಿಕ ಹಾಗೂ ಅಭಿವೃದ್ಧಿಪರ ವೈವಿಧ್ಯತೆಯನ್ನು ಪರಸ್ಪರ ವಿನಿಮಯ ಮಾಡಿಕೊಳ್ಳಲು ಮತ್ತು ವಿಶೇಷವಾಗಿ ಕರ್ನಾಟಕ-ಮಧ್ಯಪ್ರದೇಶ ಯುವಜನರ ನಡುವೆ ಬಾಂಧವ್ಯ ಬಲಪಡಿಸುವ ಉದ್ದೇಶದಿಂದ ಕೇಂದ್ರದ ಉನ್ನತ ಶಿಕ್ಷಣ ಸಚಿವಾಲಯವು "ಏಕ್ ಭಾರತ್ ಶ್ರೇಷ್ಠ ಭಾರತ್" ಕಾರ್ಯಕ್ರಮದಡಿ 7ನೇ ಹಂತದ ಯುವ ಸಂಗಮ ಕಾರ್ಯಕ್ರಮ ಹಮ್ಮಿಕೊಂಡಿದೆ ಎಂದು ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಹೇಳಿದರು.


ಉದಯವಾಹಿನಿ ಚಿತ್ರ

ಆಳಂದ ತಾಲ್ಲೂಕಿನ ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದಲ್ಲಿ ಶನಿವಾರ ಕರೆದ ಪತ್ರಿಕಾಗೋಷ್ಠಿ ಉದ್ದೇಶಿಸಿ ಮಾತನಾಡಿದ ಅವರು, ಯುವ ಸಂಗಮದ ಭಾಗವಾಗಿ ಸೆ.28 ರಿಂದ ಅಕ್ಟೋಬರ್ 3ರ ವರೆಗೆ ಮಧ್ಯಪ್ರದೇಶದ 51 ಜನ ವಿದ್ಯಾರ್ಥಿ ನಿಯೋಗವು ಕರ್ನಾಟಕದ ವಿವಿಧ ಸ್ಥಳಕ್ಕೆ ಭೇಟಿ ನೀಡಿ ಇಲ್ಲಿನ ಕಲೆ, ಸಂಸ್ಕೃತಿ, ಶ್ರೀಮಂತ ಪರಂಪರೆ, ಶೈಕ್ಷಣಿಕ, ಕೈಗಾರಿಕೆ, ಅಭಿವೃದ್ಧಿ ಕಾರ್ಯಗಳು ಕುರಿತು ಮಾಹಿತಿ ಪಡೆಯಲಿದೆ. ಇದರ ಜೊತೆಗೆ ಯುವ-ಜನ ಸಮುದಾಯದೊಂದಿಗೆ ಸಂವಾದ ಸಹ ನಡೆಸಲಿದ್ದಾರೆ ಎಂದ ಅವರು, ಈ ಹಿಂದೆ 2023ರಲ್ಲಿ 4ನೇ ಹಂತದ ಯುವ ಸಂಗಮದಲ್ಲಿ ಕರ್ನಾಟಕ-ಉತ್ತರಪ್ರದೇಶ ವಿದ್ಯಾರ್ಥಿಗಳ ತಂಡ ಪರಸ್ಪರ ರಾಜ್ಯಗಳಿಗೆ ಪ್ರವಾಸಕ್ಕೆ ತೆರಳಿದ್ದವು ಎಂದರು. ಮಧ್ಯಪ್ರದೇಶದ ತಂಡವು ಮೊದಲು ಸೆ.28ಕ್ಕೆ ಕಲಬುರಗಿಯ ಸಿ.ಯು.ಕೆ ವಿ.ವಿಗೆ ಭೇಟಿ ನೀಡುವ ಮೂಲಕ ತಂಡವು ಪ್ರವಾಸ ಆರಂಭಿಸಲಿದೆ. ನಂತರ ಕಲಬುರಗಿ ಜಿಲ್ಲೆಯ ಆಳಂದ ತಾಲ್ಲೂಕಿನ ತೆಲ್ಲೂರ ಗ್ರಾಮಕ್ಕೆ ಭೇಟಿ ನೀಡಿ ಗ್ರಾಮಸ್ಥರೊಂದಿಗೆ ಸಂವಾದ ನಡೆಸಲಿದೆ. ನಂತರ ಬೀದರ ಜಿಲ್ಲೆಯ ಹುಮನಾಬಾದ ತಾಲ್ಲೂಕಿನ ಸಾವಯವ ಬೆಲ್ಲ ತಯ್ಯಾರಿಸುವ ಕಾರ್ಖಾನೆಗೆ ಭೇಟಿ ನೀಡಲಿದೆ.

## ಬರ, ನೀರಾವರಿ ಯೋಜನೆಗಳ ಕುರಿತು ಗಮನ ಸೆಳೆದ ಶಾಸಕ

**ಉದಯವಾಹಿನಿ, ತಾಳಿಕೋಟೆ**

ಬರವನ್ನು ಕೇವಲ ಪರಿಹಾರ ನೀಡುವ ಸಮಸ್ಯೆಯಾಗಿ ನೋಡದೆ, ಭವಿಷ್ಯದಲ್ಲಿ ಮರುಕಳಿಸದಂತೆ ಶಾಶ್ವತ ಪರಿಹಾರದತ್ತ ಸರ್ಕಾರ ಗಮನ ಹರಿಸಬೇಕು. ಮಳೆಯ ಕೊರತೆ, ಮಣ್ಣಿನ ತೇವಾಂಶ, ಅಂತರ್ಜಲ ಕುಸಿತ, ಬೆಳೆ ಪರಿಸ್ಥಿತಿ ಸೇರಿದಂತೆ ವಾಸ್ತವಿಕ ಅಂಶಗಳನ್ನು ಆಧರಿಸಿ ಬರವನ್ನು ವೈಜ್ಞಾನಿಕವಾಗಿ ಗುರುತಿಸುವ ವ್ಯವಸ್ಥೆ ಇನ್ನಷ್ಟು ಪರಿಣಾಮಕಾರಿಯಾಗಬೇಕು. ವಿಶೇಷವಾಗಿ ರಿಮೋಟ್ ಸೆನ್ಸಿಂಗ್ ಆಧಾರಿತ ಮೌಲ್ಯಮಾಪನದಲ್ಲಿ ಉಂಟಾಗುವ ಲೋಪಗಳನ್ನು ಸರಿಪಡಿಸಬೇಕು ಎಂದು ಶಾಸಕ ಸಿ.ಎಸ್. ನಾಡಗೌಡ ಅಪ್ಪಾಜಿ ಆಗ್ರಹಿಸಿದರು.



ಗುರುವಾರ ವಿಧಾನಸೌಧದಲ್ಲಿ ನಡೆದ ಬರಗಾಲದ ವಿಶೇಷ ಅಧಿವೇಶನದಲ್ಲಿ ಮುದ್ದೇಬಿಹಾಳ ಸೇರಿದಂತೆ ಉತ್ತರ ಕರ್ನಾಟಕದ ರೈತರ ಸಂಕಷ್ಟಗಳನ್ನು ಸದನದ ಗಮನಕ್ಕೆ ತಂದ ಅವರು, ಈ ಭಾಗದ ರೈತರಿಗೆ ಬರ ಹೊಸದೇನಲ್ಲ. ವರ್ಷದಿಂದ ವರ್ಷಕ್ಕೆ ಮಳೆ ಪ್ರಮಾಣದಲ್ಲಿ ಏರುಪೇರು ಉಂಟಾಗುತ್ತಿದ್ದು, ಕೃಷಿ, ಕುಡಿಯುವ ನೀರು ಹಾಗೂ ಜಾನುವಾರುಗಳ ಮೇಲೂ ಅದರ ನೇರ ಪರಿಣಾಮ ಬೀರುತ್ತಿದೆ. ಈ ವರ್ಷ ಪರಿಸ್ಥಿತಿ ಮತ್ತಷ್ಟು ಗಂಭೀರವಾಗಿದ್ದು, ಇದನ್ನು ಸಾಮಾನ್ಯ ಬರಗಾಲವೆಂದು ಪರಿಗಣಿಸದೆ ಗಂಭೀರ ವಿಪತ್ತು ನಿರ್ವಹಣೆಯ ದೃಷ್ಟಿಯಿಂದ ನೋಡಬೇಕು ಎಂದರು. ಕರ್ನಾಟಕದಲ್ಲಿ ಬರ ನಿರ್ಧಾರ ಪ್ರಕ್ರಿಯೆ ಹಂತ ಹಂತವಾಗಿ ನಡೆಯುತ್ತಿದ್ದು, ಕಡ್ಡಾಯ ಸೂಚಕಗಳು, ಪರಿಣಾಮ ಸೂಚಕಗಳು ಹಾಗೂ ಅಂತಿಮವಾಗಿ ನೆಲಮಟ್ಟದ ಪರಿಶೀಲನೆ ಆಧರಿಸಿ ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗುತ್ತಿದೆ. ಸೆಪ್ಟೆಂಬರ್ 22ರಂದು ರಾಜ್ಯ ಸರ್ಕಾರ ಹೊರಡಿಸಿದ ಆದೇಶದ ಪ್ರಕಾರ ಹೆಚ್ಚುವರಿ 53 ತಾಲ್ಲೂಕುಗಳನ್ನು ಬರಪೀಡಿತ ಎಂದು ಘೋಷಿಸಲಾಗಿದ್ದು, ವಿಜಯಪುರ ಜಿಲ್ಲೆಯ ಮುದ್ದೇಬಿಹಾಳವೂ ತೀವ್ರ ಬರಪೀಡಿತ ತಾಲ್ಲೂಕುಗಳ ಪಟ್ಟಿಯಲ್ಲಿ ಸೇರಿದೆ. ಈ ಮೌಲ್ಯಮಾಪನವು ಜೂನ್ 1ರಿಂದ ಸೆಪ್ಟೆಂಬರ್ 16ರವರೆಗಿನ ಪರಿಸ್ಥಿತಿಯನ್ನು ಆಧರಿಸಿದೆ.

## ಖೊಟ್ಟಿ ದಾಖಲೆ ನೀಡಿ ಯೋಜನೆ ಪಡೆದರೆ ಕ್ರಮ

**ಉದಯವಾಹಿನಿ, ಚಿಂಚೋಳಿ**

ಕೆಲವರು ಸುಳ್ಳು ದಾಖಲೆಗಳು ಸೃಷ್ಟಿಸಿಕೋಂಡು ಸರ್ಕಾರದ ಯೋಜನೆಗಳು ಪಡೆದರೆ ಅಂಥವರ ವಿರುದ್ಧ ಕಾನೂನು ಕ್ರಮ ಕೈಗೊ ಳ್ಳಲಾಗುವುದು,ಅರ್ಹರು ಸರಕಾರದ ಯೋಜನೆಗಳ ಸದುಪಯೋಗ ಪಡೆದುಕೋಳ್ಳಬೇಕು ಎಂದು ತಹಸೀಲ್ದಾರ್ ಸುಬ್ಬಣ್ಣ ಜಮಖಂಡಿ ಹೇಳಿದರು.

ತಾಲ್ಲೂಕಿನ ಕುಂಚಾವರಂ ಗ್ರಾಮದ ಕೋಲಿ ಸಮಾಜದ ಸಮೂದಾಯ ಭವನದಲ್ಲಿ ತಾಲ್ಲೂಕಾಡಳಿತ ಮತ್ತು ಕುಂಚಾವರಂ ಗ್ರಾಪಂ,ವತಿಯಿಂದ ಆಯೋಜಿಸಿದ ಪ್ರಜಾಸೇವೆ ಅಂದೋಲನಾ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು,ಕಂದಾಯ ಇಲಾಖೆಯಲ್ಲಿ ವಿಕಲಚೇತನ,ವೃದ್ಧ್ಯಪ ವೇತನ,ವಿಧವೆ ವೇತನ,ಸಂಧ್ಯಾ ಸುರಕ್ಷಾ,ಮೈತ್ರಿ,ಮನಸ್ವಿನಿ ಇತರೆ ಇಲಾಖೆವಾರು ಸರ್ಕಾರದ ಯೋಜನೆಗಳು ಅರ್ಹ ಫಲಾನುಭವಿಗಳು ಸದುಪಯೋಗ ಪಡೆದುಕೋಳ್ಳಬೇಕು. ಸರ್ಕಾರದ ಯೋಜನೆಗಳಾಗಲಿ ಗ್ರಾಮದ ಸಮಸ್ಯೆಗಳಾಗಲಿ ಪ್ರಜಾಸೇವೆ ಕಾರ್ಯಕ್ರಮದಲ್ಲಿ ಲಿಖಿತವಾಗಿ ನೀಡಿದರೆ ನಿಮ್ಮ ಸಮಸ್ಯೆಗೆ ಪರಿಹಾರ ನೀಡಬಹುದು,ಮೌಖಿಕವಾಗಿ ಹೇಳಿದರೆ ಸಾಲದು ಸಣ್ಣಪುಟ್ಟ ಸಮಸ್ಯೆಗಳಿಗೆ ಸ್ಥಳದಲ್ಲಿಯೆ ಪರಿಹರಿಸಲಾಗು ವುದು,ಇಲಾಖಾವಾರು ದೊಡ್ಡ ಸಮಸ್ಯೆಗಳಿದ್ದರೆ ಹತ್ತುಹದಿನೈದು ದಿನಗಳಲ್ಲಿ ಸಮಸ್ಯೆಗೆ ಪರಿಹರಿಸಲಾಗುವುದು ಎಂದರು. ತಾಪಂ.ಇಒ ಸಂತೋಷ ಚವ್ಹಾಣ ಮಾತನಾಡಿದ ಅವರು,ಈಗಾಗಲೇ ತಾಲ್ಲೂಕಿನಲ್ಲಿ ಬರಗಾಲದ ಕ್ಷಯೆ ಮೂಡಿದೆ ಎಲ್ಲರೂ ನೀರು ಮೀತಿಯಲ್ಲಿ ಬಳಕೆ ಮಾಡಿಕೋಳ್ಳಿ,ಈಗಾಗಲೇ ವಿಬಿಜಿ ರಾಮ್ ಜಿ ಕೆಲಸ ಎಲ್ಲಾ ಗ್ರಾಪಂ.ಗಳಲ್ಲಿ ಚಾಲನೆಯಲ್ಲಿದೆ,ಅದರ ಸದುಪಯೋಗ ಪಡೆದುಕೋಳ್ಳಿ ಕುಂಚಾವರಂ ಗ್ರಾಪಂ.ನಲ್ಲಿ 400ಜನ ಕೂಲಿಕಾರರು ಕೆಲಸ ಮಾಡುತ್ತಿದ್ದಾರೆ,ತಾಲ್ಲೂಕಿನ್ಯಾದ್ಯಂತ 6000ಜನ ಕೂಲಿಕಾರರು ಕೆಲಸ ಮಾಡುತ್ತಿದ್ದಾರೆ,ವಿಬಿಜಿ ರಾಮ್ ಜೀ ನೂತನ ಯೋಜನೆ ಆಗಿರುವುದರಿಂದ ವೇತನದ ಸಣ್ಣ ಸಮಸ್ಯೆಯಾಗುತ್ತಿದ್ದು ಮುಂದೆ ಸರಿಪಡಿಸಲಾಗುವುದು,ಮೇವಿನ ಸಮಸ್ಯೆಯಾಗದಂತೆ ದನಕರುಗಳಿಗೆ ಜಮೀನುಗಳಲ್ಲಿ ಮೇವು ಬೆಳೆಸಿಕೋಳಿ ಎಂದರು. ಈ ಸಂದರ್ಭದಲ್ಲಿ ಕೃಷಿ ಎಡಿ ವೀರಶೆಟ್ಟಿ ರಾಠೋಡ್,ಕ್ಷೇತ್ರ ಶಿಕ್ಷಣಾಧಿಕಾರಿ ಧೂಳಪ್ಪ ಮಾಳಪನೋರ್,ಅರಣ್ಯ ಸಂಜುಕುಮಾರ ಚವ್ಹಾಣ,ಟಿಹೆಚ್ಒ ಸೈಯದ್ ಲತೀಫ್,ಕುಡಿಯುವ ನೀರು ಸರಬುರಾಜು ಎಇಇ ಉಮೇಶ ರಾಠೋಡ್,ಪಿಡಬ್ಲೂಡಿ ಅಂಬರಾಯ ಪಾಟೀಲ್,ಪಿಆರ್‌ಇ ಪ್ರವೀಣಕುಮಾರ,ಜೆಸ್ಕಾಂ ಎಇಇ ಕಾಮಣ್ಣ,ಬಿಸಿಎಂ ರಾಹುಲ್ ಪಂಚಾಶೀಲ್,ಅರಣ್ಯ ಜಗನ್ನಾಥ ಕೋರಳ್ಳಿ,ಪಶು ವೈದ್ಯಾಧಿಕಾರಿ ಮಲ್ಲಿಕಾರ್ಜುನ,ಆಹಾರ ನಿರೀಕ್ಷಕ ವಿರೇಂದ್ರ,ಆರ್‌ಐ ಆರೀಫ್,ರವಿಕುಮಾರ ಚಿಟ್ಟಾ,ಶಿವಾಜೀ ಸೇರಿದಂತೆ ತಾಲ್ಲೂಕಾ ಮಟ್ಟದ ಅಧಿಕಾರಿಗಳು ಸಿಬ್ಬಂದಿಗಳು ಸಾರ್ವಜನಿಕರು ಇದ್ದರು.


ಉದಯವಾಹಿನಿ ಚಿತ್ರ

## 'ಭೂಮಿಪೂಜೆ' ಮೂಲಕ ಸರ್ಕಾರಿ ಮೆಡಿಕಲ್ ಆಸ್ಪತ್ರೆಗೆ ಚಾಲನೆ

**ಉದಯವಾಹಿನಿ, ಪುತ್ತೂರು**

ಪುತ್ತೂರಿನಲ್ಲಿ ನೂತನವಾಗಿ ನಿರ್ಮಾಣಗೊಳ್ಳಲಿರುವ ಸರ್ಕಾರಿ ಮೆಡಿಕಲ್ ಕಾಲೇಜ್‌ಗೆ ಪೂರ್ವಭಾವಿಯಾಗಿ ನಿರ್ಮಾಣಗೊಳ್ಳಲಿರುವ ಪುತ್ತೂರು ಮೆಡಿಕಲ್ ಬೋಧನಾ ಆಸ್ಪತ್ರೆಗೆ ಶುಕ್ರವಾರ ಶಾಸಕ ಅಶೋಕ್ ಕುಮಾರ್ ರೈ ಅವರು ಭೂಮಿಪೂಜೆ ನೆರವೇರಿಸಿದರು.

ಪುತ್ತೂರು ತಾಲ್ಲೂಕಿನ ಕೋಡಿಂಬಾಡಿ ಗ್ರಾಮದ ಸೇಡಿಯಾಪುವಿನಲ್ಲಿ ನೂತನ ಮೆಡಿಕಲ್ ಕಾಲೇಜ್ ನಿರ್ಮಾಣಕ್ಕೆ ಈಗಾಗಲೇ ಸರ್ಕಾರದಿಂದ ಸುಮಾರು 550 ಕೋಟಿ ಅನುದಾನ ಮಂಜೂರುಗೊಂಡಿದೆ. ಅದಕ್ಕೂ ಮುನ್ನ ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿದ್ದ ಸಂದರ್ಭದಲ್ಲಿ ಮೆಡಿಕಲ್ ಕಾಲೇಜ್ ನಿರ್ಮಾಣಕ್ಕೆ ಪೂರ್ವಭಾವಿಯಾಗಿ 300 ಬೆಡ್‌ಗಳ ಮೆಡಿಕಲ್ ಬೋಧನಾ ಆಸ್ಪತ್ರೆಯನ್ನು ನಿರ್ಮಿಸಲು ರೂ. 182 ಕೋಟಿ ಅನುದಾನವನ್ನು ಮಂಜೂರುಗೊಳಿಸಿದ್ದರು. ಈ ಅನುದಾನದಲ್ಲಿ ಮೆಡಿಕಲ್ ಬೋಧನಾ ಕಾಲೇಜ್ ಕಟ್ಟಡ ಕಾಮಗಾರಿಗೆ ಶಾಸಕರು ಭೂಮಿಪೂಜೆ ನೆರವೇರಿಸಿದರು. ಬಳಿಕ ಮಾತನಾಡಿದ ಅವರು ಯಾರಿಗೂ ಸಾಯುವ ತನಕ ರಾಜಕೀಯ ಇರುವುದಿಲ್ಲ. ಆದರೆ ಇರುವ ಅವಧಿಯಲ್ಲಿ ಜನರು ನೆನಪಿಡುವ ಕೆಲಸ ಮಾಡಬೇಕು. ಪುತ್ತೂರಿನಲ್ಲಿ ಬೆಂಚ್‌ಮಾರ್ಕ್ ಕೆಲಸ ಆಗಬೇಕು ಎಂಬ ಕನಸು ಕಂಡಿರುವ ನಾನು ಅದನ್ನು ನನಸು ಮಾಡುವ ನಿಟ್ಟಿನಲ್ಲಿ ಈ ಮೆಡಿಕಲ್ ಕಾಲೇಜ್ ತರುವ ಪ್ರಯತ್ನ ಮಾಡಿದ್ದೇನೆ. ಈ ಬಗ್ಗೆ ನನ್ನನ್ನು ಫೇಸ್‌ಬುಕ್‌ನಲ್ಲಿ ಟೀಕಿಸಿದವರು, ಇದು ಆಗುವುದಿಲ್ಲ ಎಂದವರು ಹಲವರು ಇದ್ದಾರೆ. ಮುಂದೆ ಇಲ್ಲಿ ಮೆಡಿಕಲ್ ಕಾಲೇಜ್ ಆದಲ್ಲಿ ಅವರ ಕುಟುಂಬಸ್ಥರೂ ಆರೋಗ್ಯ ಸೇವೆಯನ್ನು ಪಡೆಯಬಹುದಾಗಿದೆ ಎಂದರು.


ಉದಯವಾಹಿನಿ ಚಿತ್ರ

## ಶಾಲೆಗಳಿಗೆ ಜಿಲ್ಲಾ ಪಂಚಾಯಿತಿ ಸಿಇಒ ರಾಹುಲ್ ಸಂಕನೂರ್ ದಿಢೀರ್ ಭೇಟಿ

**ಉದಯವಾಹಿನಿ, ಕಲಬುರಗಿ**

ಶನಿವಾರ ಬೆಳಿಗ್ಗೆ ಜಿಪಂ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಸಂಕನೂರ್ ಅವರು ಕಲಬುರಗಿ ತಾಲ್ಲೂಕಿನ ಅವರಾದ (ಬಿ) ಕರ್ನಾಟಕ ಪಬ್ಲಿಕ್ ಶಾಲೆ ಮತ್ತು ಕಮಲಾಪುರ ತಾಲ್ಲೂಕಿನ ಮಹಾಗಾವ್ ಕ್ರಾಸ್ ಸರ್ಕಾರಿ ಪ್ರೌಢಶಾಲೆಗಳಿಗೆ ದಿಢೀರ್ ಭೇಟಿ ನೀಡಿ, ವಿದ್ಯಾರ್ಥಿಗಳ ಶೂ ಮತ್ತು ಸಾಕ್ಸಗಳ ಗುಣಮಟ್ಟ ಪರಿಶೀಲನೆ ಮಾಡಿ, ಸರಬರಾಜು ವಿತರಣೆಯ ಬಗ್ಗೆ ಮುಖ್ಯ ಗುರುಗಳಿಂದ ಮಾಹಿತಿಯನ್ನು ಪಡೆದರು. ನಂತರ ವಿದ್ಯಾರ್ಥಿಗಳೊಂದಿಗೆ ಶೂ ಮತ್ತು ಸಾಕ್ಸ್‌ಗಳ ಅಳತೆಯ ವ್ಯತ್ಯಾಸ, ಗುಣಮಟ್ಟ ಬಗ್ಗೆ ಸಂವಾದ ನಡೆಸಿದರು. ಇದೆ ಸಂದರ್ಭದಲ್ಲಿ ಸ್ಥಳದಲ್ಲಿದ್ದ ಎಸ್‌ಡಿಎಂಸಿ ಸದಸ್ಯರ ಹಾಗೂ ಸಹ ಶಿಕ್ಷಕರೊಂದಿಗೂ ಮಾತನಾಡಿದರು. ಭೇಟಿ ಸಂದರ್ಭದಲ್ಲಿ ಸ್ಥಳದಲ್ಲಿ ಹಾಜರಿದ್ದ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ಶಂಕರಮ್ಮಾ ಡವಳಗಿ ಹಾಗೂ ಉತ್ತರ ವಲಯದ ಶೂ ಸಾಕ್ಸ್ ನೋಡಲ್ ಅಧಿಕಾರಿ ಸಿದ್ದಲಿಂಗ ರಾಮಗೊಂಡ ಅವರಿಗೆ, ಅಳತೆ ವ್ಯತ್ಯಾಸ ಕುರಿತು ತಾಲೂಕು ಹಂತದಲ್ಲಿಯೆ ತುರ್ತಾಗಿ ಆಂತರಿಕ ಬದಲಾವಣೆ ಕುರಿತು ಕ್ರಮ ವಹಿಸಲು ಸೂಚಿಸಿದರು. ಭೇಟಿ ಸಂದರ್ಭದಲ್ಲಿ ಇತರ ಅಧಿಕಾರಿಗಳು ಉಪಸ್ಥಿತರಿದ್ದರು.

### ಉತ್ತರ ಕರ್ನಾಟಕಕ್ಕೆ ಸಮಗ್ರ ನೀರಾವರಿ ಯೋಜನೆ ಜಾರಿಗೊಳಿಸಬೇಕು. ಪ್ರತಿ ವರ್ಷ ಜುಲೈ 21ರಂದು ರೈತ ಹುತಾತ್ಮ ದಿನಾಚರಣೆ ಆಚರಿಸಲಾಗುತ್ತದೆ

# ಬಿಡುಗಡೆ ಮಾಡಿರುವ ಬರ ಪರಿಹಾರ 2500 ರೂ. ಸಾಕಾಗುವುದಿಲ್ಲ: ರೈತರ ಅಸಮಾಧಾನ

**ಉದಯವಾಹಿನಿ, ಬೆಳಗಾವಿ**

"ವಿಶೇಷ ಅಧಿವೇಶನದಲ್ಲಿ ರಾಜ್ಯ ಸರ್ಕಾರ ರೈತರಿಗೆ ಬರಗಾಲ ಪರಿಹಾರವಾಗಿ ಕೇವಲ 2,500 ರೂಪಾಯಿ ಘೋಷಣೆ ಮಾಡಿದ್ದು, ಇದಕ್ಕೆ ರೈತರು ತಮ್ಮ ಕಡೆಯಿಂದ ಇನ್ನೊಂದು 100 ರೂಪಾಯಿ ಸೇರಿಸಿ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ನೀಡಲಿದ್ದಾರೆ" ಎಂದು ರೈತ ಮುಖಂಡರಾದ ಶಶಿಕಾಂತ ಗುರೂಜಿ ತೀವ್ರ ಆಕ್ರೋಶ ವ್ಯಕ್ತಪಡಿಸಿದ್ದಾರೆ.

**1.** ಸರ್ಕಾರದ ನಡೆ ವಿರುದ್ಧ ವಾಗ್ದಾಳಿ
**2.** ಸಮಗ್ರ ನೀರಾವರಿ ಯೋಜನೆ ಜಾರಿ
**3.** ದೇವರು ಬಂದರೂ ಹೋರಾಟ ನಿಲ್ಲಲ್ಲ

ಬೆಳಗಾವಿ ಜಿಲ್ಲೆಯ ಅಥಣಿ ತಾಲ್ಲೂಕಿನ ಶಿರಹಟ್ಟಿ ಗ್ರಾಮದಲ್ಲಿ ಬರುವ 29ರಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿಯವರ ಮನೆಗೆ ಮುತ್ತಿಗೆ ಹಾಕುವ ಸಲುವಾಗಿ ನಡೆಸಿದ ಪೂರ್ವಭಾವಿ ಸಭೆಯಲ್ಲಿ ಅವರು ಮಾತನಾಡಿ, ಸರ್ಕಾರದ ಈ ಪರಿಹಾರವನ್ನು 'ಅವಮಾನ' ಎಂದು ಕರೆದಿದ್ದಾರೆ.

ಸರ್ಕಾರದ ನಡೆ ವಿರುದ್ಧ ತೀವ್ರ ವಾಗ್ದಾಳಿ ನಡೆಸಿದ ರೈತ ಮುಖಂಡರು, "ಬರಗಾಲದ ಸಂದರ್ಭದಲ್ಲಿ ಯಾವ ತಾಲ್ಲೂಕುಗಳನ್ನು ಬರಗಾಲ ಪೀಡಿತ ಎಂದು ಘೋಷಣೆ ಮಾಡಲಾಗಿದೆಯೋ, ಆ ತಾಲ್ಲೂಕುಗಳ ರೈತರ ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕ್ ಸಾಲವನ್ನು ಸಂಪೂರ್ಣ ಮನ್ನಾ ಮಾಡಬೇಕು. ಬೆಂಬಲ ಬೆಲೆ ಹಾಗೂ ನೀರಾವರಿ ಯೋಜನೆಗಳನ್ನು ಘೋಷಣೆ ಮಾಡಬೇಕು ಮತ್ತು ನಿರಂತರ ವಿದ್ಯುತ್ ನೀಡಬೇಕು.


ಉದಯವಾಹಿನಿ ಚಿತ್ರ

ಆದರೆ, 10 ದಿನಗಳ ಅಧಿವೇಶನದಲ್ಲಿ ಕೇವಲ ವಾಲ್ಮೀಕಿ ನಿಗಮದ ನಾಗೇಂದ್ರ ಅವರ ಬಗ್ಗೆ ಚರ್ಚೆ ಮಾಡಲಾಗಿದೆ. ಇನ್ನುಳಿದ 3 ದಿನಗಳ ಅಧಿವೇಶನದಲ್ಲಿ ಹಾಡು, ಖುಷಿ, ನಗು ಹಾಗೂ ಡಿ.ಕೆ. ಶಿವಕುಮಾರ್ ಅವರ ಹಾಸ್ಯಭರಿತ ಮಾತುಗಳಿಗೆ ಸೀಮಿತವಾಗಿದೆ. ವಿಧಾನಸೌಧ ನಿಮ್ಮ ಮನೆಯಲ್ಲ, ಅದು ಶಾಸನಸಭೆ. ಎಲ್ಲಾ ರಾಜಕಾರಣಿಗಳು ಇದನ್ನು ಅರ್ಥಮಾಡಿಕೊಳ್ಳಬೇಕು" ಎಂದು ಎಚ್ಚರಿಸಿದ್ದಾರೆ.

"ಉತ್ತರ ಕರ್ನಾಟಕಕ್ಕೆ ಸಮಗ್ರ ನೀರಾವರಿ ಯೋಜನೆ ಜಾರಿಗೊಳಿಸಬೇಕು. ಪ್ರತಿ ವರ್ಷ ಜುಲೈ 21ರಂದು ರೈತ ಹುತಾತ್ಮ ದಿನಾಚರಣೆ ಆಚರಿಸಲಾಗುತ್ತದೆ. ಇಡೀ ಕರ್ನಾಟಕವನ್ನು ಬರಗಾಲ ಪೀಡಿತ ಎಂದು ಘೋಷಿಸಬೇಕು. ಒಂದು ವೇಳೆ ಸರ್ಕಾರಕ್ಕೆ ಸೌಲತ್ತುಗಳ ಕೊರತೆ ಇದ್ದರೆ, ರೈತರಿಂದಲೇ ನಾವು ಸರ್ಕಾರಕ್ಕೆ ಸಾಲ ಕೊಡುವ ಕೆಲಸ ಮಾಡುತ್ತೇವೆ" ಎಂದು ಅವರು ಸವಾಲೆಸೆದಿದ್ದಾರೆ.

"ಸಾಕ್ಷಾತ್ ದೇವರು ಬಂದರೂ ಹೋರಾಟ ನಿಲ್ಲಲ್ಲ, ದೆಹಲಿಗೆ ಬರಲ್ಲ! ಈಗಾಗಲೇ ರೈತರ ಬೃಹತ್ ಹೋರಾಟದ ಮುನ್ಸೂಚನೆ ಅರಿತಿರುವ ಸರ್ಕಾರ ಹಾಗೂ ಅಧಿಕಾರಿಗಳು ಮಾತುಕತೆಗೆ ಮುಂದಾಗಿದ್ದಾರೆ. ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಅವರ ಮುಖಾಂತರ ಧಾರವಾಡ ಹಾಗೂ ಬೆಳಗಾವಿ ಜಿಲ್ಲಾಧಿಕಾರಿಗಳು ನಮ್ಮನ್ನು ಸಂಪರ್ಕಿಸಿದ್ದಾರೆ. ವಿಮಾನ ಟಿಕೆಟ್ ಬುಕ್ ಮಾಡಿ ದೆಹಲಿಗೆ ಕರೆದೊಯ್ದು ಅಮಿತ್ ಶಾ ಹಾಗೂ ಶುಗರ್ ಕಮಿಷನರ್ ಭೇಟಿ ಮಾಡಿಸುವ ಭರವಸೆ ನೀಡಿದ್ದಾರೆ. ಆದರೆ ಸಾಕ್ಷಾತ್ ದೇವರು ಬಂದು ಕೇಳಿಕೊಂಡರೂ ಈ ಹೋರಾಟ ನಿಲ್ಲುವುದಿಲ್ಲ. 29ನೇ ತಾರೀಕು ಚೆನ್ನಮ್ಮ ಸರ್ಕಲ್‌ನಲ್ಲಿ ಲಕ್ಷಾಂತರ ರೈತರು ಸೇರುತ್ತೇವೆ. ಸಚಿವರು, ಡಿಸಿಗಳು ಅಲ್ಲಿಗೇ ಬಂದು ಸಾರ್ವಜನಿಕವಾಗಿ ಉತ್ತರಿಸಬೇಕು. ಜನ ಒಪ್ಪಿದರೆ ಮಾತ್ರ 100 ಜನರ ನಿಯೋಗ ದೆಹಲಿಗೆ ಹೋಗುತ್ತದೆ, ಇಲ್ಲದಿದ್ದರೆ ಇಲ್ಲ" ಎಂದು ಸ್ಪಷ್ಟಪಡಿಸಿದ್ದಾರೆ.

ಕಬ್ಬಿಗೆ 5,500 ರೂಪಾಯಿ ಬೆಲೆ ನೀಡಿದರೆ ಕಾರ್ಖಾನೆ ಮಾರಬೇಕಾಗುತ್ತದೆ ಎಂಬ ಡಾಕ್ಟರ್ ಪ್ರಭಾಕರ ಕೋರೆ ಹೇಳಿಕೆಗೆ ತಿರುಗೇಟು ನೀಡಿದ ರೈತ ಮುಖಂಡರು, "ಹೀಗೆ ಹೇಳಿಕೆ ನೀಡುವ ಕಾರ್ಖಾನೆ ಮಾಲೀಕರಿಗೆ ಬುದ್ಧಿಭ್ರಮಣೆಯಾಗಿದೆ
– **ಶಶಿಕಾಂತ ಗುರೂಜಿ**

### ಹಡಗು, ನಾವಿಕರ ಮೇಲಿನ ದಾಳಿ ಖಂಡಿಸಿದ ವಿದೇಶಾಂಗ ಸಚಿವ ಎಸ್. ಜೈಶಂಕರ್

# ಅಮಾಯಕ ಜೀವ ಬಲಿಯಾಗುತ್ತಿವೆ, ಇದು ಸಂಪೂರ್ಣ ಅಸಮರ್ಥನೀಯ

**ವಿಶ್ವಸಂಸ್ಥೆ:** ವಾಣಿಜ್ಯ ಹಡಗುಗಳು ಹಾಗೂ ಸಮುದ್ರಯಾನಿಕರ ಮೇಲೆ ಪದೇಪದೆ ನಡೆಯುತ್ತಿರುವ ದಾಳಿಗಳನ್ನು ವಿದೇಶಾಂಗ ಸಚಿವ ಎಸ್. ಜೈಶಂಕರ್ ತೀವ್ರವಾಗಿ ಖಂಡಿಸಿದ್ದಾರೆ.

ಗಲ್ಫ್, ಕೆಂಪು ಸಮುದ್ರ, ಕಪ್ಪು ಸಮುದ್ರ ಸೇರಿದಂತೆ ಹಲವು ಪ್ರದೇಶಗಳಲ್ಲಿ ನಡೆಯುತ್ತಿರುವ ಇಂತಹ ದಾಳಿಗಳು ಸಮುದ್ರ ವಾಣಿಜ್ಯಕ್ಕೆ ಅಡ್ಡಿಪಡಿಸುವುದರ ಜತೆಗೆ ಅಮಾಯಕ ಜೀವಗಳನ್ನೂ ಬಲಿ ಪಡೆಯುತ್ತಿವೆ ಎಂದು ವಿದೇಶಾಂಗ ಸಚಿವ ಜೈಶಂಕರ್ ಅವರು ಆತಂಕ ವ್ಯಕ್ತಪಡಿಸಿದ್ದಾರೆ.

**1.** ಭಾರತವು ಸಮುದ್ರಯಾನಿಕರ ಪ್ರಮುಖ ಮೂಲ ದೇಶ
**2.** ಲೈಬೀರಿಯಾ ಅತಿದೊಡ್ಡ ಹಡಗು ನೋಂದಣಿ ವ್ಯವಸ್ಥೆ ಹೊಂದಿದೆ
**3.** ಹಡಗುಗಳು ಮತ್ತು ಸಮುದ್ರಯಾನಿಕರ ಸುರಕ್ಷತೆ ಹಾಗೂ ಭದ್ರತೆಯನ್ನು ಪ್ರಮುಖವಾಗಿ ಎತ್ತಿಹಿಡಿಯಲು ಎರಡೂ ದೇಶಗಳು ಒಟ್ಟಾಗಿವೆ

81ನೇ ವಿಶ್ವಸಂಸ್ಥೆ ಸಾಮಾನ್ಯ ಸಭೆಯ ಹಿನ್ನೆಲೆಯಲ್ಲಿ ನಡೆದ 'ಹಡಗು ಮತ್ತು ಸಮುದ್ರಯಾನಿಕರ ಸುರಕ್ಷತೆ ಮತ್ತು ಭದ್ರತೆ ಕುರಿತ ಸ್ನೇಹಿತರ ಗುಂಪು'ದ ಸಚಿವ ಮಟ್ಟದ ಸಭೆಯಲ್ಲಿ ಮಾತನಾಡಿದ ಜೈಶಂಕರ್, ಇತ್ತೀಚಿನ ತಿಂಗಳುಗಳಲ್ಲಿ ವಾಣಿಜ್ಯ ಹಡಗುಗಳು ಹಾಗೂ ನಾವಿಕರ ಮೇಲೆ ನಡೆದ ಹಲವು ದಾಳಿಗಳನ್ನು ಉಲ್ಲೇಖಿಸಿದರು.

ಇತ್ತೀಚೆಗೆ ಓಮನ್ ಕೊಲ್ಲಿಯಲ್ಲಿ ಆಂಟಿಗುವಾ ಮತ್ತು ಬಾರ್ಬುಡಾ ಧ್ವಜ ಹೊಂದಿದ್ದ ಎಂವಿ ಕೇಪ್ ದಾವೋ ಎಂಬ ಬಲ್ಕ್ ಕ್ಯಾರಿಯರ್ ಹಡಗಿನ ಮೇಲೆ ನಡೆದ ದಾಳಿಯನ್ನು ಅವರು ಉಲ್ಲೇಖಿಸಿದರು. ಈ ಘಟನೆಯಲ್ಲಿ ಭಾರತೀಯ ನಾವಿಕರೊಬ್ಬರು ಮೃತಪಟ್ಟಿದ್ದರು.

**ನಾವಿಕರ ಮೇಲೂ ಮಾನಸಿಕ ಒತ್ತಡ:** ದಾಳಿಗಳಿಂದ ಉಂಟಾಗುತ್ತಿರುವ ಅಡಚಣೆಗಳಿಂದ ಸಮುದ್ರಯಾನಿಕರು ಹಡಗುಗಳಲ್ಲೇ ದೀರ್ಘಕಾಲ



ಸಿಲುಕಿಕೊಳ್ಳುವಂತಾಗಿದೆ. ಸಿಬ್ಬಂದಿ ಬದಲಾವಣೆ ಹಾಗೂ ಸ್ವದೇಶಕ್ಕೆ ವಾಪಸ್ ಕಳುಹಿಸುವ ಪ್ರಕ್ರಿಯೆಯಲ್ಲಿ ವಿಳಂಬವಾಗುತ್ತಿದೆ.

ಕುಟುಂಬಗಳಿಂದ ದೂರ ಉಳಿಯುವುದರ ಜತೆಗೆ ನಾವಿಕರು ಮಾನಸಿಕ ಒತ್ತಡವನ್ನೂ ಎದುರಿಸುತ್ತಿದ್ದಾರೆ ಎಂದು ಜೈಶಂಕರ್ ಗಮನ ಸೆಳೆದರು. ಇಂತಹ ದಾಳಿಗಳನ್ನು ತಡೆಯಲು ಅಂತರರಾಷ್ಟ್ರೀಯ ಸಹಕಾರವನ್ನು ಮತ್ತಷ್ಟು ಬಲಪಡಿಸುವ ಅಗತ್ಯವಿದೆ ಎಂದು ಒತ್ತಿಹೇಳಿದರು.

**ಭಾರತ–ಲೈಬೀರಿಯಾ ಮಹತ್ವದ ಉಪಕ್ರಮ:** ಇದೇ ವೇಳೆ ಭಾರತ ಮತ್ತು ಲೈಬೀರಿಯಾ ದೇಶಗಳು ಹಡಗುಗಳು ಹಾಗೂ ಸಮುದ್ರಯಾನಿಕರ ಸುರಕ್ಷತೆ ಮತ್ತು ಭದ್ರತೆಗಾಗಿ 'ಸ್ನೇಹಿತರ ಗುಂಪು' ಸ್ಥಾಪಿಸುವುದಾಗಿ ಘೋಷಿಸಿವೆ. ವಾಣಿಜ್ಯ ಹಡಗುಗಳ ಮೇಲಿನ ದಾಳಿಗಳು ಮುಂದುವರಿದಿರುವ ಹಿನ್ನೆಲೆಯಲ್ಲಿ ಈ ಮಹತ್ವದ ಸಮುದ್ರಯಾನ ಉಪಕ್ರಮವನ್ನು ಆರಂಭಿಸಲಾಗಿದೆ.

ಪ್ರಮುಖ ಹಡಗು ಮಾಲೀಕ ರಾಷ್ಟ್ರಗಳು, ಅತಿದೊಡ್ಡ ಹಡಗು ನೋಂದಣಿ ಹೊಂದಿರುವ ದೇಶಗಳು ಹಾಗೂ ಹೆಚ್ಚಿನ ಸಂಖ್ಯೆಯ ಸಮುದ್ರಯಾನಿಕರನ್ನು ಒದಗಿಸುವ ರಾಷ್ಟ್ರಗಳನ್ನು ಒಂದೇ ವೇದಿಕೆಗೆ ತರುವ ನಿಟ್ಟಿನಲ್ಲಿ ಈ ಉಪಕ್ರಮ ಉತ್ತಮ ಆರಂಭವಾಗಿದೆ ಎಂದು ಅವರು ಹೇಳಿದರು.

> ಇತ್ತೀಚಿನ ಕೆಲವು ತಿಂಗಳುಗಳಲ್ಲಿ ಗಲ್ಫ್, ಕೆಂಪು ಸಮುದ್ರ ಮತ್ತು ಅದರ ಸುತ್ತಮುತ್ತಲ ಪ್ರದೇಶಗಳಲ್ಲಿ ವಾಣಿಜ್ಯ ಹಡಗುಗಳು ಪದೇಪದೆ ದಾಳಿಗೆ ಒಳಗಾಗಿವೆ. ಸಮುದ್ರ ವಾಣಿಜ್ಯಕ್ಕೆ ಅಡ್ಡಿಪಡಿಸುವ ಹಾಗೂ ಅಮಾಯಕ ಜೀವಗಳನ್ನು ಬಲಿ ಪಡೆಯುವ ಇಂತಹ ಕೃತ್ಯಗಳನ್ನು ಯಾವುದೇ ರೀತಿಯಲ್ಲೂ ಸಮರ್ಥಿಸಲು ಸಾಧ್ಯವಿಲ್ಲ
>
> – ಎಸ್. ಜೈಶಂಕರ್, ವಿದೇಶಾಂಗ ಸಚಿವ

ಈ ಜಾಲದ ಮೂಲಕ ಸಮುದ್ರ ಪ್ರಾಧಿಕಾರಗಳು ಮತ್ತು ರಾಯಭಾರ ಕಚೇರಿಗಳನ್ನು ಸಂಪರ್ಕಿಸಿ, ತುರ್ತು ಸಂಕೇತಗಳು, ವೈದ್ಯಕೀಯ ನೆರವು, ಕುಟುಂಬ ಸದಸ್ಯರೊಂದಿಗೆ ಸಂಪರ್ಕ ಹಾಗೂ ಸ್ಥಳಾಂತರ ನೆರವು ಒದಗಿಸುವ ಉದ್ದೇಶವಿದೆ. ಜಾಗತಿಕ ಸಂಘರ್ಷಗಳು ಮುಂದುವರಿದಿರುವ ಹಿನ್ನೆಲೆಯಲ್ಲಿ ಹೋರ್ಮುಜ್ ಜಲಸಂಧಿ, ಓಮನ್ ಕೊಲ್ಲಿ, ಕೆಂಪು ಸಮುದ್ರ, ಏಡನ್ ಕೊಲ್ಲಿ, ಬಾಬ್–ಎಲ್–ಮಂದೇಬ್, ಕಪ್ಪು ಸಮುದ್ರ ಹಾಗೂ ಸೊಮಾಲಿಯಾ ಸೇರಿದಂತೆ ಹಲವು ಪ್ರದೇಶಗಳಲ್ಲಿ ವಾಣಿಜ್ಯ ಹಡಗುಗಳು ಮತ್ತು ಸಮುದ್ರಯಾನಿಕರಿಗೆ ಅಪಾಯ ಹೆಚ್ಚಾಗಿದೆ.

ಈ ಪ್ರದೇಶಗಳಲ್ಲಿ ಸಂಚರಿಸುವ ಭಾರತೀಯ ಹಾಗೂ ವಿದೇಶಿ ಧ್ವಜದ ಹಡಗುಗಳಲ್ಲಿ ಹೆಚ್ಚಿನ ಸಂಖ್ಯೆಯ ಭಾರತೀಯ ನಾವಿಕರು ಕೆಲಸ ಮಾಡುತ್ತಿರುವುದರಿಂದ ಅವರು ಕೂಡ ಸಮುದ್ರ ಭದ್ರತಾ ಅಪಾಯಗಳಿಗೆ ಒಳಗಾಗುತ್ತಿದ್ದಾರೆ.

## ಸಿನಿಮಾ ನಟನೆ ನಿಲ್ಲಿಸಿರಬಹುದು, ಜನರ ಮುಂದೆ ನಟನೆ ಮುಂದುವರಿದಿದೆ



ಎಂಕೆ ಸ್ಟಾಲಿನ್ ತೀವ್ರ ವಾಗ್ದಾಳಿ

**ಚೆನ್ನೈ:** ತಮಿಳುನಾಡು ಮುಖ್ಯಮಂತ್ರಿ ಸಿ ಜೋಸೆಫ್ ವಿಜಯ್ ವಿರುದ್ಧ ಡಿಎಂಕೆ ಅಧ್ಯಕ್ಷ ಎಂಕೆ ಸ್ಟಾಲಿನ್ ತೀವ್ರ ವಾಗ್ದಾಳಿ ನಡೆಸಿದ್ದು, 'ರಾಜಕೀಯ ದ್ವಂದ್ವ ನಿಲುವು ಮತ್ತು ಆಡಳಿತಾತ್ಮಕ ವೈಫಲ್ಯ'ದ ಆರೋಪ ಹೊರಿಸಿದ್ದಾರೆ.

ಅಕ್ಟೋಬರ್ 6 ರಂದು ನಡೆಯಲಿರುವ ಉಪಚುನಾವಣೆ ಹಿನ್ನೆಲೆಯಲ್ಲಿ ಮಧುರಾಂತಕಂನಲ್ಲಿ ವಿಜಯ್ ಮಾಡಿದ ಪ್ರಚಾರ ಭಾಷಣಕ್ಕೆ ಪ್ರತಿಕ್ರಿಯೆಯಾಗಿ ಸ್ಟಾಲಿನ್ ತಡರಾತ್ರಿ ಸಾಮಾಜಿಕ ಜಾಲತಾಣದಲ್ಲಿ ಸುದೀರ್ಘ ಪೋಸ್ಟ್ ಒಂದನ್ನು ಹಂಚಿಕೊಂಡಿದ್ದು, ಟಿವಿಕೆ 'ಶುದ್ಧ ಶಕ್ತಿ' ಮತ್ತು ಡಿಎಂಕೆ 'ದುಷ್ಟ ಶಕ್ತಿ' ಎಂದು ಮುಖ್ಯಮಂತ್ರಿ ಬಣ್ಣಿಸಿದ್ದನ್ನು ಲೇವಡಿ ಮಾಡಿದ್ದಾರೆ. ತಮ್ಮ ಪ್ರಚಾರ ಭಾಷಣದ ವೇಳೆ, ಡಿಎಂಕೆ ಒಂದು 'ದುಷ್ಟ ಶಕ್ತಿ' ಎಂಬ ತಮ್ಮ ಆರೋಪವನ್ನು ವಿಜಯ್ ಪುನರುಚ್ಚರಿಸಿದರು; ಏಪ್ರಿಲ್‌ನಲ್ಲಿ ನಡೆದ ವಿಧಾನಸಭಾ ಚುನಾವಣೆಯ ಪೂರ್ವಭಾವಿ ಹಂತದಿಂದಲೂ ಅವರು ಈ ಆರೋಪವನ್ನು ಮಾಡುತ್ತಾ ಬಂದಿದ್ದಾರೆ. ಡಿಎಂಕೆ, ಎಐಎಡಿಎಂಕೆ ಮತ್ತು ಬಿಜೆಪಿ ನಡುವೆ ಹೊಂದಾಣಿಕೆ ಇದೆ. ಅಲ್ಲದೆ, 'ಜೆಮ್ ಗ್ರಾನೈಟ್ಸ್' ಅಧ್ಯಕ್ಷ ಆರ್. ವೀರಮಣಿ ಅವರ ವಿರುದ್ಧದ ಸಂಚಲನ ಮೂಡಿಸಿದ್ದ ಪೋಕ್ಸೊ ಪ್ರಕರಣವನ್ನು ಹಿಂದಿನ ಡಿಎಂಕೆ ಸರ್ಕಾರ 'ಮುಚ್ಚಿಹಾಕಿತು' ಎಂದು ದೂರಿದರು.

ಚಲನಚಿತ್ರಗಳಲ್ಲಿ ನಟಿಸುವುದನ್ನು ನಿಲ್ಲಿಸಿರುವುದಾಗಿ ಹೇಳಿರುವ ಸಿಎಂ ವಿಜಯ್, ಜನರ ಮುಂದೆ ನಟಿಸುವುದನ್ನು ಮಾತ್ರ ಮುಂದುವರಿಸಿದ್ದಾರೆ. ಮಧುರಾಂತಕಂನಲ್ಲಿ ನಡೆದ ಚಿತ್ರೀಕರಣದ ವೇಳೆ ನಿಮ್ಮ ಸಂಭಾಷಣೆಯನ್ನು ನಾನು ಗಮನಿಸಿದೆ. ನಿಮಗೆ ನನ್ನದೊಂದು ಪ್ರಶ್ನೆಯಿದೆ' ಎಂದು ಸ್ಟಾಲಿನ್ ತಮ್ಮ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಉಪಚುನಾವಣೆಯಲ್ಲಿ ಪಕ್ಷದ ಅಭ್ಯರ್ಥಿಯಾಗಿ ಕಣಕ್ಕಿಳಿಸಿರುವ ಮರಗಥಂ ಕುಮಾರವೇಲ್ ಸೇರಿದಂತೆ, ಎಐಎಡಿಎಂಕೆಯ ಮಾಜಿ ನಾಯಕರನ್ನು ಟಿವಿಕೆ ತನ್ನ ತೆಕ್ಕೆಗೆ ತೆಗೆದುಕೊಂಡಿರುವುದನ್ನು ಪ್ರಸ್ತಾಪಿಸಿದ ಅವರು, ಇಂತಹವರ ಸೇರ್ಪಡೆಯ ನಂತರ ಟಿವಿಕೆ ತನ್ನನ್ನು ತಾನು 'ಶುದ್ಧ ಶಕ್ತಿ' ಎಂದು ಹೇಗೆ ಕರೆದುಕೊಳ್ಳಲು ಸಾಧ್ಯ ಎಂದು ಪ್ರಶ್ನಿಸಿದರು.

## ಇನ್ನೂ ಪತ್ತೆಯಾಗದ 85 ಯಾತ್ರಿಕರು



**ಚೆನ್ನೈ:** ನೇಪಾಳದ ಹಠಾತ್ ಪ್ರವಾಹ ಸಂಭವಿಸಿ ಒಂದು ತಿಂಗಳು ಕಳೆದರೂ, ತಮಿಳುನಾಡಿನ 85 ಯಾತ್ರಿಕರ ಸುಳಿವು ಇನ್ನೂ ಪತ್ತೆಯಾಗಿಲ್ಲ. ತಮ್ಮವರಿಗಾಗಿ ಕಾಯುತ್ತಿರುವ ಕುಟುಂಬಗಳು ನೋವು, ಆತಂಕದ ನಡುವೆಯೇ ದಿನದೂಡುತ್ತಿವೆ.

ಸೆಪ್ಟೆಂಬರ್ 15ರಂದು ಅವರು ಅನಿವಾಸಿ ತಮಿಳರ ಇಲಾಖೆ ಕಲ್ಯಾಣ ಸಚಿವ ಕೆ. ತೆನ್ನರಸು ಅವರನ್ನು ಭೇಟಿಯಾಗಿ, ಸೆಪ್ಟೆಂಬರ್ 21ರಂದು ಸಿಂಗಪೆರುಮಾಳ್ ಕೋಯಿಲ್‌ನಲ್ಲಿ ಉಪವಾಸ ಸತ್ಯಾಗ್ರಹವನ್ನೂ ನಡೆಸಿ ಮಾಹಿತಿ ನೀಡುವಂತೆ ಒತ್ತಾಯಿಸಿದ್ದರು.

ತಮ್ಮವರ ಕುರಿತು ಯಾವುದೇ ಖಚಿತ ಮಾಹಿತಿ ಲಭ್ಯವಾಗದ ಹಿನ್ನೆಲೆಯಲ್ಲಿ, ಕುಟುಂಬಗಳು ಬಹುತೇಕ ಏಕಾಂಗಿಯಾಗಿ ಹೋರಾಟ ನಡೆಸಬೇಕಾದ ಪರಿಸ್ಥಿತಿ ಎದುರಾಗಿದೆ ಎಂದು ಹೇಳಿದ್ದಾರೆ. ಕೆಲವರು ನೇಪಾಳಕ್ಕೆ ತೆರಳಿ ರಕ್ಷಣಾ ಕಾರ್ಯಾಚರಣೆಯಲ್ಲಿ ನೆರವಾಗಲು ಸಿದ್ಧರಿರುವುದಾಗಿಯೂ ತಿಳಿಸಿದ್ದಾರೆ.

ಮಾಧ್ಯಮಗಳಲ್ಲಿ ಈ ದುರಂತದ ಕುರಿತು ವರದಿ ಬರುತ್ತಿರುವುದು ಕಡಿಮೆಯಾಗುತ್ತಿರುವ ಬಗ್ಗೆ ಖಿಓಖಇ ಜತೆ ಮಾತನಾಡಿದ ಕ್ರೋಂಪೇಟೆಯ 55 ವರ್ಷದ ಎನ್. ಮರವೇಲ್ ನೇಪಾಳಕ್ಕೆ 49 ಯಾತ್ರಿಕರನ್ನು ಕರೆದೊಯ್ದಿದ್ದ ಮಹಾದೇವ್ ಕೈಲಾಶ್ ಯಾತ್ರೆಯ ಮಾಲೀಕರಾಗಿದ್ದಾರೆ. ಆ ಯಾತ್ರಿಕರೆಲ್ಲರೂ ಇನ್ನೂ ನಾಪತ್ತೆಯಾಗಿದ್ದಾರೆ. ಬಹುಶಃ ನಾವು ಈಗ ಹಳೆಯ ಸುದ್ದಿಯಾಗಿದ್ದೇವೆ. ತಮಿಳುನಾಡು ಮತ್ತು ಚೆನ್ನೈನಲ್ಲಿ ಪ್ರತಿದಿನ ಸಾಕಷ್ಟು ಘಟನೆಗಳು ನಡೆಯುತ್ತಿವೆ. ಹೀಗಾಗಿ ನಮ್ಮ ಸಮಸ್ಯೆಯ ಬಗ್ಗೆ ಮಾತನಾಡಲು ಯಾರಿಗೂ ಆಸಕ್ತಿ ಇಲ್ಲದಂತಾಗಿದೆ ಎಂದು ಹೇಳಿದರು.

## ಅಕ್ರಮ ನಡೆಯುವ ಚುನಾವಣೆಗಳಲ್ಲಿ ಭಾಗವಹಿಸುವುದನ್ನು ನಿಲ್ಲಿಸಿ



**ನವದೆಹಲಿ:** ಹಲವು ರಾಜ್ಯಗಳಲ್ಲಿ ಚುನಾವಣೆ ಪ್ರಕ್ರಿಯೆಯ ವಿಶ್ವಾರ್ಹತೆಯ ಪ್ರಶ್ನೆ ಮತ್ತು ಮತಗಳ್ಳತನದ ಆರೋಪಗಳ ನಡುವೆ ಅಕ್ರಮಗಳಿಂದ ಕೂಡಿದ ಚುನಾವಣೆಯಲ್ಲಿ ಸ್ಪರ್ಧಿಸುವುದನ್ನು ಕಾಕ್ರೋಚ್ ಜನತಾ ಪಕ್ಷದ ಸಂಸ್ಥಾಪಕ ಅಭಿಜಿತ್ ದೀಪ್ಕೆ ವಿಪಕ್ಷಗಳಿಗೆ ಕರೆ ನೀಡಿದ್ದಾರೆ ಚುನಾವಣೆಗಳಲ್ಲಿ ವಿರೋಧ ಪಕ್ಷದ ನಿರಂತರ ಭಾಗವಹಿಸುವಿಕೆಯು ಸ್ವತಃ ತಾವೇ ಅನ್ಯಾಯಯುತ ಎಂದು ಹೇಳಿಕೊಳ್ಳುವ ವ್ಯವಸ್ಥೆಗೆ ಮಾನ್ಯತೆ ನೀಡಿದಂತೆ ಎಂದಿದ್ದಾರೆ. ಎಕ್ಸ್ ಜಾಲತಾಣದಲ್ಲಿ ಈ ಕುರಿತು ಪೋಸ್ಟ್ ಮಾಡಿರುವ ಅವರು, ಚುನಾವಣೆಗಳು ಅಕ್ರಮಗೊಳ್ಳುತ್ತಿದೆ ಎಂದು ಭಾವಿ ಸಿದರೆ, ವಿಪಕ್ಷಗಳು ತಾವು ಸ್ಪರ್ಧಿಸುವ ಕುರಿತು ಮರು ಆಲೋಚಿಸಬೇಕಿದೆ. ಚುನಾವಣೆಗಳು ಅಕ್ರಮಗಳಿಂದ ಕೂಡಿವೆ. ಈ ಅಕ್ರಮ ಚುನಾವಣೆಯಲ್ಲಿ ಸ್ಪರ್ಧಿಸುತ್ತಿದ್ದರೆ, ಈ ಚುನಾವಣೆಯನ್ನು ಅವು ಮುಕ್ತ ಮತ್ತು ನ್ಯಾಯಯುತವಾಗಿವೆ ಎಂಬ ಭ್ರಮೆಯನ್ನು ನಾವು ಕಾಪಾಡಿದಂತೆ ಎಂದು ಅಭಿಪ್ರಾಯಪಟ್ಟಿದ್ದಾರೆ. ನಿಮ್ಮ ಅಸ್ತಿತ್ವ ಏನಾಗಲಿದೆ ಎಂಬ ಭಯದಿಂದ ನೀವು ಸ್ಪರ್ಧಿಸುತ್ತಲೇ ಇರಬಹುದು. ಆದರೆ, ಮತಗಳ್ಳತನವಾಗಬೇಕಾದರೆ ನಿಮ್ಮ ಅಸ್ತಿತ್ವ ರಕ್ಷಣೆ ಆಗುತ್ತಾ ಎಂದು ಅವರು ಪ್ರಶ್ನಿಸಿದ್ದಾರೆ. ನಿಮ್ಮ ಶಾಸಕರು ಮತ್ತು ಸಂಸದರನ್ನು ಖರೀದಿ ಮಾಡಲಾಗುತ್ತಿದೆ. ನಿಮ್ಮ ಪಕ್ಷಗಳನ್ನು ಇಬ್ಭಾಗವಾಗುತ್ತಿದೆ. ಇದು ರಾಜಕೀಯ ಉಳಿಯುವಿಕೆಯಲ್ಲ. ನೀವು ನಿಮ್ಮನ್ನು ದುರ್ಬಲಗೊಳಿಸಿರುವ ವ್ಯವಸ್ಥೆಯಲ್ಲಿ ಸುಮ್ಮನೆ ಜೀವಿಸುವ ಪ್ರಯತ್ನ. ಎಲ್ಲಿಯವರೆಗೆ ಹೀಗೆ ಜೀವಿಸುತ್ತೀರಾ ಎಂದು ವಿಪಕ್ಷಗಳನ್ನು ಪ್ರಶ್ನಿಸಿದ್ದಾರೆ. ನಿಮಗೆ ಮುಖ್ಯ ಎನಿಸುವ ರಾಜ್ಯಗಳಲ್ಲಿ ಮಾತ್ರ ಚುನಾವಣಾ ಅಕ್ರಮಗಳು ಬಗ್ಗೆ ಮಾತನಾಡಿ, ಬೇರೆಡೆ ಅಕ್ರಮ ನಡೆದಾಗ ಮೌನವಾಗಿರಲು ಸಾಧ್ಯವಿಲ್ಲ. ಚುನಾವಣೆಗಳಲ್ಲಿ ಅಕ್ರಮ ನಡೆಯುತ್ತಿದ್ದರೆ, ಅದು ಯಾವ ರಾಜ್ಯ ಅಥವಾ ಯಾವ ಪಕ್ಷದ ಮೇಲೆ ಪರಿಣಾಮ ಬೀರುತ್ತದೆ ಎಂಬುದನ್ನು ಲೆಕ್ಕಿಸಬಾರದು. ಆಟದಲ್ಲಿ ಅಕ್ರಮ ನಡೆಯುತ್ತಿದೆ ಎಂದು ಹೇಳುತ್ತಾ ಆಟ ಮುಂದುವರೆಸಲು ಸಾಧ್ಯವಿಲ್ಲ. ಇಂತಹ ಅಕ್ರಮ ಚುನಾವಣೆಯಲ್ಲಿ ಭಾಗವಹಿಸುವಿಕೆ ಅವುಗಳಿಗೆ ಮಾನ್ಯತೆ ನೀಡುತ್ತದೆ ಎಂದಿದ್ದಾರೆ.

**ಕ್ಟೋಬರ್ 2ಕ್ಕೆ ಪ್ರತಿಭಟನೆ:** ಎಸ್ಐಆರ್ ಪ್ರಕ್ರಿಯೆಗೆ ಸಂಬಂಧಿಸಿದಂತೆ ತಮ್ಮ ಸಾಂವಿಧಾನಿಕ ಕರ್ತವ್ಯಗಳನ್ನು ಉಲ್ಲಂಘಿಸಿದ್ದಾರೆ ಎಂಬ ಆರೋಪವನ್ನು ಎದುರಿಸುತ್ತಿರುವ ಮುಖ್ಯ ಚುನಾವಣಾ ಆಯುಕ್ತ ಜ್ಞಾನೇಶ್ ಕುಮಾರ್ ಅವರು ಮುಂದಿನ 24 ಗಂಟೆಗಳಲ್ಲಿ ರಾಜೀನಾಮೆ ನೀಡದಿದ್ದರೆ, ಅಕ್ಟೋಬರ್ 2ರಂದು ತಮ್ಮ ಪಕ್ಷವು ದೇಶಾದ್ಯಂತ ಪ್ರತಿಭಟನೆಯನ್ನು ಆರಂಭಿಸಲಿದೆ ಎಂದು ತಿಳಿಸಿದರು.

## ಕಾಂಗೋದಲ್ಲಿ ಸೇನಾ ವಿಮಾನ ಪತನ: ಇಬ್ಬರು ಹಿರಿಯ ಜನರಲ್‌ಗಳು ಸೇರಿ 14 ಮಂದಿ ಸಾವು

**ಕೆಂಗೆ:** ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದಲ್ಲಿ ಸಂಭವಿಸಿದ ಸೇನಾ ವಿಮಾನ ಪತನದ ದುರಂತದಲ್ಲಿ ಇಬ್ಬರು ಹಿರಿಯ ಮಿಲಿಟರಿ ಅಧಿಕಾರಿಗಳು ಸೇರಿದಂತೆ ಕನಿಷ್ಠ 14 ಮಂದಿ ಸಾವನ್ನಪ್ಪಿದ್ದಾರೆ. ವಿಮಾನವು ಕಾಂಗೋದ ನೈಋತ್ಯ ನಗರವಾದ ಕಿಕ್ವಿಟ್‌ನಿಂದ ರಾಜಧಾನಿ ಕಿನ್ಶಾಸಾಗೆ ಹಿಂತಿರುಗುತ್ತಿದ್ದಾಗ ಹಠಾತ್ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ಆ ಕುರಿತ ವರದಿ ಇಲ್ಲಿದೆ. ವರದಿಗಳ ಪ್ರಕಾರ, ಡೆಮಾಕ್ರಟಿಕ್ ರಿಪಬ್ಲಿಕ್ ಆಫ್ ಕಾಂಗೋದ ನೈಋತ್ಯ ನಗರವಾದ ಕಿಕ್ವಿಟ್‌ನಿಂದ ರಾಜಧಾನಿ ಕಿನ್ಶಾಸಾಕ್ಕೆ ಹಿಂತಿರುಗುತ್ತಿದ್ದಾಗ ಹಠಾತ್ ತಾಂತ್ರಿಕ ದೋಷ ಕಾಣಿಸಿಕೊಂಡಿದೆ. ಈ ವೇಳೆ ವಿಮಾನವನ್ನು ಕ್ವಾಂಗೋ ಪ್ರಾಂತ್ಯದ ಕೆಂಗೆ ಎಂಬಲ್ಲಿ ತುರ್ತು ಭೂಸ್ಪರ್ಶ ಮಾಡಲು ಪ್ರಯತ್ನಿಸಲಾಯಿತು. ಆದರೆ ಅಲ್ಲಿ ಸೂಕ್ತ ರನ್‌ವೇ ಲಭ್ಯವಿಲ್ಲದ ಕಾರಣ, ನಿಯಂತ್ರಣ ತಪ್ಪಿದ ವಿಮಾನವು ನೇರವಾಗಿ ವಸತಿ ಪ್ರದೇಶದ ನಿವೇಶನವೊಂದರ ಮೇಲೆ ಪತನಗೊಂಡಿದೆ. ಇದರ ಪರಿಣಾಮ ಸೇನಾ



ವಿಮಾನದಲ್ಲಿದ್ದ ಇಬ್ಬರು ಹಿರಿಯ ಮಿಲಿಟರಿ ಅಧಿಕಾರಿಗಳು ಸೇರಿದಂತೆ ಕನಿಷ್ಠ 14 ಮಂದಿ ಸಾವನ್ನಪ್ಪಿದ್ದಾರೆ. ದೇಶದ ಅತ್ಯುನ್ನತ ಮಿಲಿಟರಿ ನ್ಯಾಯಾಲಯದ ಮುಖ್ಯಸ್ಥರಾದ ಲೆಫ್ಟಿನೆಂಟ್ ಜನರಲ್ ಮುತೊಂಬೊ ಕಟಲಾಯಿ ತಿಯೆಂಡೆ ಮತ್ತು ಸಶಸ್ತ್ರ ಪಡೆಗಳ ಆಡಿಟರ್ ಜನರಲ್ ಆಗಿದ್ದ ಲೆಫ್ಟಿನೆಂಟ್ ಜನರಲ್ ಬಕುಮಿ ಲಿಕುಲಿಯಾ ಸಾವನ್ನಪ್ಪಿದ ಪ್ರಮುಖರಾಗಿದ್ದಾರೆ. ಮುಂದುವರೆದು, ಪತನಗೊಂಡ ವಿಮಾನವು ಟ್ರೇಸ್‌ಪ್ ಕಾಂಗೋ ಏವಿಯೇಷನ್ ಸಂಸ್ಥೆಗೆ ಸೇರಿದ Let L-410 ಮಾದರಿಯ ಸೇನಾ ವಿಮಾನವಾಗಿದ್ದು, ಅಪಘಾತದ ತೀವ್ರತೆಗೆ ವಿಮಾನದಲ್ಲಿದ್ದ 12 ನಿಯೋಗದ ಸದಸ್ಯರು ಮತ್ತು ಸಿಬ್ಬಂದಿ ಗುರುತು ಸಿಗದಷ್ಟು ಸುಟ್ಟು ಕರಕಲಾಗಿದ್ದಾರೆ. ಕೇವಲ ಪೈಲಟ್‌ನ ಮೃತದೇಹ ಮಾತ್ರ ವಿಮಾನದ ಅವಶೇಷಗಳಿಂದ ಹೊರಗೆ ಬಿದ್ದ ಸ್ಥಿತಿಯಲ್ಲಿ ಪತ್ತೆಯಾಗಿದೆ. ಏತನ್ಮಧ್ಯೆ, ಕಾಂಗೋ ದೇಶವು ಸದ್ಯ ಪೂರ್ವ ಪ್ರಾಂತ್ಯಗಳಲ್ಲಿ ರುವಾಂಡಾ ಬೆಂಬಲಿತ ಒ23 ಬಂಡಾಯ ಗುಂಪುಗಳ ವಿರುದ್ಧ ಭೀಕರ ಯುದ್ಧ ನಡೆಸುತ್ತಿರುವ ಈ ಸೂಕ್ಷ್ಮ ಸಮಯದಲ್ಲಿ, ಇಬ್ಬರು ಹಿರಿಯ ಸೇನಾ ಕಾಯ್ದೆ ಅಧಿಕಾರಿಗಳು ಮೃತಪಟ್ಟಿರುವುದು ದೇಶದ ರಕ್ಷಣಾ ವಲಯಕ್ಕೆ ದೊಡ್ಡ ಆಘಾತ ತಂದಿದೆ.

### ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗಿಯಾಗಲು ನವದೆಹಲಿಗೆ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಹೊರಟು ನಿಂತಾಗ ಮಿಶ್ರ ಭಾವನೆ ಕಾಡುತ್ತಿತ್ತು

# ಭಾರತ – ಚೀನಾ ರಾಜತಾಂತ್ರಿಕತೆ: ಬಗೆಹರಿಯದ ಗಡಿ ಸಮಸ್ಯೆ – ವಾಷಿಂಗ್ಟನ್ ನೆರಳು

**ನವದೆಹಲಿ:** ಸೆಪ್ಟೆಂಬರ್ 12 ರಂದು 18ನೇ ಬ್ರಿಕ್ಸ್ ಶೃಂಗಸಭೆಯಲ್ಲಿ ಭಾಗಿಯಾಗಲು ನವದೆಹಲಿಗೆ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಹೊರಟು ನಿಂತಾಗ ಮಿಶ್ರ ಭಾವನೆ ಇತ್ತು ಹಾಗೂ ವಾಸ್ತವದ ರಾಜಕೀಯ ಕ್ಷಣದಂತಿತ್ತು. ಕಾರಣ ಭಾರತ – ಚೀನಾ ಸಂಬಂಧಗಳು ಹಾಗಿದ್ದವು.

ಈ ಹಿಂದೆ ಭಾರತವು ಚೀನಾದ ದ್ವಂದ್ವ ನಿಲುವಿಗೆ ಬಲಿಯಾಗಿರುವ ಉದಾಹರಣೆ ಇದೆ. ಈ ಹಿಂದೆ ಕ್ಸಿ ಜಿನ್‌ಪಿಂಗ್ ಭಾರತಕ್ಕೆ ಭೇಟಿ ನೀಡಿದ ದಿನವೇ ಪೂರ್ವ ಲಡಾಖ್‌ನ ಚುಮಾರ್ ವಲಯದಲ್ಲಿ ಕನಿಷ್ಠ 200 ಚೀನೀ ಪಿಎಲ್‌ಎ ಸೈನಿಕರು ಗಡಿ ದಾಟಿದ್ದರು.

ಗಲ್ವಾನ್ ಬಿಕ್ಕಟ್ಟಿನ ನಂತರ ಚೀನಾ ತನ್ನ ಗಡಿಯ ಭಾಗದಲ್ಲಿ ಕೈಗೊಂಡ ಬೃಹತ್ ಪ್ರಮಾಣದ ಮೂಲಸೌಕರ್ಯ ಅಭಿವೃದ್ಧಿಯು ಯುದ್ಧಕ್ಕೆ ಕಾರಣವಾಗುವಂತಹ ಪರಿಸ್ಥಿತಿಯನ್ನು ಸೃಷ್ಟಿಸಿತ್ತು. ಗಲ್ವಾನ್ ಘಟನೆಯ ಆರು ವರ್ಷಗಳ ನಂತರ, ಭಾರತ – ಚೀನಾ ಸಂಬಂಧಗಳಲ್ಲಿದ್ದ ಬಿಕ್ಕಟ್ಟು ಶಮನಗೊಂಡಿದೆಯಾದರೂ, ಗಡಿಯಲ್ಲಿನ ಪರಿಸ್ಥಿತಿ ಮಾತ್ರ ಇನ್ನೂ ಯಥಾಸ್ಥಿತಿಯಲ್ಲೇ ಉಳಿದಿದೆ. ಆದಾಗ್ಯೂ, ಗಡಿ ಸಂಬಂಧಿತ ಮಾತುಕತೆಗಳಿಗೆ ಚೈತನ್ಯ ತುಂಬಲು ಭಾರತ ಮತ್ತು ಚೀನಾ ಕ್ರಮಗಳನ್ನು ಕೈಗೊಳ್ಳುತ್ತಿರುವುದು ಆಶಾದಾಯಕ ಬೆಳವಣಿಗೆಯಾಗಿದೆ.

**ಟ್ರಂಪ್ ನೀತಿಗಳು:** ಭಾರತ ಚೀನಾ ಸಂಬಂಧವು ಕಳೆದ ಆರು ವರ್ಷಗಳಿಂದ ನಿರಂತರವಾಗಿ ಯುದ್ಧದ ಕರಿನೆರಳಿನ ಹೊರೆಯನ್ನು ಹೊಂದಿದೆ.

ಭಾರತ ಮತ್ತು ಚೀನಾ ತಮ್ಮ ನಡುವಿನ ವೈಮನಸ್ಯ ಮರೆತು ಒಗ್ಗೂಡಲು ಮುಂದಾಗಿರುವ ಕಾರಣ ಟ್ರಂಪ್ ಆರ್ಥಿಕ ಸುಂಕಗಳಿಂದ ಹಿಡಿದು ಜಾಗತಿಕ ಮಟ್ಟದಲ್ಲಿನ ನೀತಿ ಬದಲಾವಣೆಗಳ ನೀತಿಗಳು.

ಟ್ರಂಪ್ ಅವರ ಎರಡನೇ ಅವಧಿಗೂ ಮೊದಲೇ ಅಂದರೆ 2024ರ ಅಕ್ಟೋಬರ್‌ನಲ್ಲಿಯೇ ಸಂಬಂಧಗಳಲ್ಲಿ ಸುಧಾರಣಾ ಪ್ರಕ್ರಿಯೆ ಆರಂಭವಾಗಿದ್ದರೂ, ಭಾರತ ಮತ್ತು ಚೀನಾ ನಡುವಿನ ಸಹಕಾರವನ್ನು



> **ಕಾದು ನೋಡಬೇಕಿದೆ**
>
> ಹೊಸ ಒಪ್ಪಂದವು ಎಷ್ಟರ ಮಟ್ಟಿಗೆ ಫಲ ನೀಡುತ್ತದೆ ಎಂಬುದನ್ನು ಕಾದು ನೋಡಬೇಕಾಗಿದೆ. ಎರಡು ದೇಶಗಳ ನಡುವಿನ ನಿರಂತರ ಉದ್ವಿಗ್ನತೆಯ ಮೂಲವಾದ ಪ್ರಾದೇಶಿಕ ವಿವಾದಗಳ ಮೇಲೆ ಸೂಜಿಯನ್ನು ಮುಂದಕ್ಕೆ ಚಲಿಸುತ್ತದೆಯೇ ಎಂಬುದನ್ನು ನೋಡಬೇಕಾಗಿದೆ.

ಟ್ರಂಪ್ ಆಡಳಿತವು ವೇಗಗೊಳಿಸಿದೆ. ನವದೆಹಲಿಯಲ್ಲಿ ನಡೆದ ಬ್ರಿಕ್ಸ್ ಸಭೆಯು ಮೋದಿ ಮತ್ತು ಕ್ಸಿ ಭೇಟಿಗೆ ಬೇಕಾದ ಸಿದ್ಧತೆಯ ಅಡಿಪಾಯವು ಬಿಷ್ಕೆಕ್‌ನಲ್ಲಿ ಅಲ್ಲ, ಬದಲಾಗಿ ಟಿಯಾಂಜಿನ್‌ನಲ್ಲಿ ನಡೆದ ಎಸ್‌ಸಿಒ ಶೃಂಗಸಭೆಯಲ್ಲಿಯೇ ರೂಪುಗೊಂಡಿತ್ತು.

2025ರ ಆಗಸ್ಟ್‌ನ ಎಸ್‌ಸಿಒ ಶೃಂಗಸಭೆ ವೇಳೆ ಮೋದಿ ಮತ್ತು ಕ್ಸಿ ಮೊದಲ ಬಾರಿಗೆ ಔಪಚಾರಿಕ ದ್ವಿಪಕ್ಷೀಯ ಮಾತುಕತೆ ನಡೆಸಿದ್ದರು. ವಿಶೇಷ ಪ್ರತಿನಿಧಿ ಕಾರ್ಯವಿಧಾನದ ಕಾರ್ಯವನ್ನು ಅನುಮೋದಿಸಿ, ಕ್ಸಿ ಭಾರತಕ್ಕೆ ಆಹ್ವಾನಿಸಿದರು.

ಸುಂಕದ ದರಗಳ ಏರಿಕೆ ಆಘಾತ, ಅಮೆರಿಕದ ಬದ್ಧತೆ ಅನಿಶ್ಚಿತತೆ ಮತ್ತು ಯುಎಸ್ ಇಂಡೋ – ಪ್ಯಾಸಿಫಿಕ್ ಕಮಾಂಡ್ ಮತ್ತೆ ಯುಎಸ್ ಪ್ಯಾಸಿಫಿಕ್ ಕಮಾಂಡ್ ಆಗಿ ಬದಲಾಯಿಸಿರುವುದು. ಇವೆಲ್ಲವೂ ವಾಷಿಂಗ್ಟನ್‌ನೊಂದಿಗೆ ಮೈತ್ರಿಗೆ ಕಾರಣವಾಗಿದೆ.

ಟ್ರಂಪ್ ಕ್ಸಿ ಶೃಂಗಸಭೆಯು ರಚನಾತ್ಮಕ ಕಾರ್ಯತಂತ್ರದ ಸ್ಥಿರತೆ ರಚನಾತ್ಮಕವಾಗಿ ಪರಿವರ್ತಿಸಿದರೆ, ಅದು ಭಾರತಕ್ಕೆ ಮಾತ್ರವಲ್ಲದೇ ವ್ಯಾಪಾರ, ಪೂರೈಕೆ ಸರಪಳಿಗಳು ಮತ್ತು ಪ್ರಾದೇಶಿಕ ಭದ್ರತೆಗೆ ತನ್ನದೇ ಆದ ಪರಿಣಾಮಗಳನ್ನು ಬೀರುತ್ತದೆ.

**ಮೂರು ವಲಯ– ಮೂರು ಸಮಸ್ಯೆ:** ರಾಜತಾಂತ್ರಿಕ ಸಂಬಂಧಗಳಲ್ಲಿನ ಸುಧಾರಣೆ, ಅಮೆರಿಕದ ಅನಿಶ್ಚಿತತೆಯು ಉಭಯ ದೇಶಗಳ ಬಾಂಧವ್ಯಕ್ಕೆ ಹೆಚ್ಚಿನ ವೇಗವನ್ನು ನೀಡುತ್ತಿರುವ ನಡುವೆಯೇ, ಗಡಿ ವಿವಾದದ ವಿಷಯದಲ್ಲಿ ಮುನ್ನಡೆಯಲು ಭಾರತ ಮತ್ತು ಚೀನಾ ಈ ಹೊಸ ವೇಗವನ್ನು ಬಳಸಿಕೊಳ್ಳಬಲ್ಲವೇ? ಇಲ್ಲಿಯವರೆಗೆ, ಗಡಿಯ ಮೂರು ವಲಯಗಳು ಮೂರು ಬಗೆಯ ಸಮಸ್ಯೆ ಸೃಷ್ಟಿಸಿದೆ.

3,488 ಕಿಲೋಮೀಟರ್ ಉದ್ದದ ವಾಸ್ತವಿಕ ನಿಯಂತ್ರಣ ರೇಖೆ ಮೂರು ವಲಯಗಳ ಮೂಲಕ ಹಾದುಹೋಗುತ್ತದೆ. ಗಡಿ ವಿವಾದಕ್ಕೆ ಸಂಬಂಧಿಸಿದಂತೆ ಸಮಗ್ರ ಪರಿಹಾರ ಕಂಡುಕೊಳ್ಳುವ ಕುರಿತು 2005ರಲ್ಲಿ ಭಾರತ ಮತ್ತು ಚೀನಾ ನಡುವೆ ಒಪ್ಪಂದವಾಗಿದ್ದರೂ, ಈಗ ಈ ಪ್ರತಿಯೊಂದು ವಲಯವೂ ಭಿನ್ನವಾದ ಹಾದಿಯಲ್ಲಿ ಸಾಗುತ್ತಿದೆ.

ಪಶ್ಚಿಮ ವಲಯದಲ್ಲಿ, ಡೆಪ್ಸಾಂಗ್ ಮತ್ತು ಡೆಮ್‌ಚೋಕ್ ಪ್ರದೇಶಗಳಲ್ಲಿನ ಗಸ್ತು ತಿರುಗುವಿಕೆಗೆ ಸಂಬಂಧಿಸಿದಂತೆ ಅಕ್ಟೋಬರ್ 2024ರಲ್ಲಿ ಮಾಡಿಕೊಳ್ಳಲಾದ ವ್ಯವಸ್ಥೆಯು, ಕಳೆದ ನಾಲ್ಕು ವರ್ಷಗಳಿಂದ ರಾಜಕೀಯ ಸಂಬಂಧಗಳನ್ನು ಸ್ಥಗಿತಗೊಳಿಸಿದ್ದ ಬಿಕ್ಕಟ್ಟಿಗೆ ಅಂತ್ಯ ಹಾಡಿದೆ.

# ಮಿನಿ ನ್ಯೂಸ್

## ತುಂಡಾಗಿ ಬಿದ್ದ ವಿದ್ಯುತ್ ತಂತಿ: ನಾಲ್ವರು ಸಾವು!

**ಮಂಡ್ಲಾ:** ಗಣೇಶ ಪೆಂಡಾಲ್ ನೊಳಗೆ ಮಲಗಿದವರ ಮೇಲೆ ತುಂಡಾಗಿ ವಿದ್ಯುತ್ ತಂತಿಯಿಂದ ವಿದ್ಯುತ್ ಪ್ರವಹಿಸಿ ನಾಲ್ವರು ಸಾವನ್ನಪ್ಪಿರುವ ಘಟನೆ ಮಧ್ಯಪ್ರದೇಶದ ಮಂಡ್ಲಾ ಜಿಲ್ಲೆಯಲ್ಲಿ ಶನಿವಾರ ನಸುಕಿನ ಜಾವ ನಡೆದಿದೆ. ಘಟನೆಯಲ್ಲಿ ಇತರ ಮೂವರು ಗಾಯಗೊಂಡಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಜಿಲ್ಲಾ ಕೇಂದ್ರದಿಂದ ಸುಮಾರು 50 ಕಿ.ಮೀ ದೂರದಲ್ಲಿರುವ ನೈನ್‌ಪುರದ ಹಿರಪುರ ಗ್ರಾಮದಲ್ಲಿ ಈ ಘಟನೆ ನಡೆದಿದೆ ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದ್ದಾರೆ. ಗಣೇಶ ಮೂರ್ತಿ ವಿಸರ್ಜನೆಯ ನಂತರ ಆಯೋಜಕ ಸಮಿತಿಯ ಸದಸ್ಯರು ವಾಪಸ್ಸಾಗಿದ್ದ ಎಂಟು ಮಂದಿ ಯುವಕರು ಪಂಡಾಲ್‌ನಲ್ಲಿ ಮಲಗಿದ್ದರು ಎಂದು ನೈನ್‌ಪುರ ಪೊಲೀಸ್ ಠಾಣಾಧಿಕಾರಿ ಮನ್ಸಾರಾಮ್ ವಾಗೆನ್ ಸುದ್ದಿಸಂಸ್ಥೆ ಪಿಟಿಐಗೆ ತಿಳಿಸಿದ್ದಾರೆ.

## ನಾಗಲ್ಯಾಂಡ್‌ನಲ್ಲಿ ನಕಲಿ ಲಿಕ್ಕರ್ ಸೇವಿಸಿ 19 ಮಂದಿ ಸಾವು

**ಮೊಕೊಕ್‌ಚುಂಗ್ (ನಾಗಾಲ್ಯಾಂಡ್):** ನಾಗಾಲ್ಯಾಂಡ್‌ನ ಎರಡು ಜಿಲ್ಲೆಗಳಲ್ಲಿ ಕಳೆದೆರಡು ದಿನಗಳಲ್ಲಿ ನಕಲಿ ಅಥವಾ ಕಳಪೆ ಗುಣಮಟ್ಟದ ಕಲಬೆರಕೆ ಮದ್ಯ ಸೇವಿಸಿ 19 ಮಂದಿ ಸಾವನ್ನಪ್ಪಿರುವ ಆರೋಪ ಕೇಳಿಬಂದಿದೆ. ರಾಜ್ಯದಲ್ಲಿ 1990ರಿಂದಲೂ ಮದ್ಯಪಾನ ನಿಷೇಧ ಜಾರಿಯಲ್ಲಿದ್ದು, ಈ ಘಟನೆ ಬೆನ್ನಲ್ಲೇ ಶಂಕಿತ ಕಲಬೆರಕೆ ಮದ್ಯದ ಪೂರೈಕೆ ಜಾಲವನ್ನು ಪತ್ತೆಹಚ್ಚಲು ಪೊಲೀಸರು ತಂಡ ಕಾರ್ಯ ಪ್ರವೃತ್ತವಾಗಿದೆ. ಅಕ್ರಮ ಕಲಬೆರಕೆ ಮದ್ಯ ಸೇವನೆಯಿಂದಾಗಿ ಕಳೆದ ಎರಡು ದಿನಗಳಲ್ಲಿ ಮೊಕೊಕ್‌ಚುಂಗ್ ಜಿಲ್ಲೆಯಲ್ಲಿ ಎಂಟು ಮತ್ತು ಟುಯೆನ್‌ಸಾಂಗ್ ಜಿಲ್ಲೆಯಲ್ಲಿ 11 ಮಂದಿ ಸಾವನ್ನಪ್ಪಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ. ಕಲಬೆರಕೆ ಮದ್ಯದಿಂದ ಸಂಭವಿಸಿದ ಸಾವುಗಳ ಕುರಿತು ತನಿಖೆ ನಡೆಸಲು ಹಾಗೂ ಆ ಮದ್ಯದ ಮೂಲ ಮತ್ತು ಪೂರೈಕೆ ಜಾಲವನ್ನು ಪತ್ತೆಹಚ್ಚಲು, ಹೆಚ್ಚುವರಿ ಪೊಲೀಸ್ ವರಿಷ್ಠಾಧಿಕಾರಿ ಐ. ಬಂಗ್ಲಾಂಗ್ ಚಾಂಗ್ ಅವರ ನೇತೃತ್ವದಲ್ಲಿ ವಿಶೇಷ ತನಿಖಾ ತಂಡವೊಂದನ್ನು ರಚಿಸಲಾಗಿದೆ ಎಂದು ಹಿರಿಯ ಪೊಲೀಸ್ ವರಿಷ್ಠಾಧಿಕಾರಿ ವೆಸುಪ್ರಾ ಕೆಜೊ ತಿಳಿಸಿದ್ದಾರೆ. ಕಲಬೆರಕೆ ಮದ್ಯ ಸೇವನೆಯಿಂದ ಈ ಸಾವುಗಳು ಸಂಭವಿಸಿವೆಯಾ ಎಂಬ ಕಾರಣವನ್ನು ಖಚಿತಪಡಿಸಿಕೊಳ್ಳಲು ಮಾದರಿಗಳನ್ನು ವಿಧಿವಿಜ್ಞಾನ ಪರೀಕ್ಷೆಗಾಗಿ ಗುವಾಹಟಿಗೆ ಕಳಿಸಲಾಗಿದೆ. ವೈದ್ಯಕೀಯ ಹಾಗೂ ಇತರೆ ಪೂರಕ ಸಾಕ್ಷ್ಯಗಳ ಆಧಾರದ ಮೇಲೆ ಅದನ್ನು ನಿರ್ಧರಿಸಲಾಗುವುದು ಎಂದಿದ್ದಾರೆ.

## ಕೊಂಡ ಟೆಕ್ಕಿ; ಈಗ 964 ಕೋಟಿ ರೂ ಪರಿಹಾರಕ್ಕೆ ಬೇಡಿಕೆ!

**ಲಂಡನ್:** ಕೆಲಸದ ನಿಮಿತ್ತ ವಿದೇಶಕ್ಕೆ ತೆರಳಿದ್ದ ವೇಳೆ ಸೌನಾದಲ್ಲಿ ಮಲಗಿದ್ದಕ್ಕಾಗಿ ಉದ್ಯೋಗ ಕಳೆದುಕೊಂಡ ಉದ್ಯೋಗಿಯೊಬ್ಬರು ಇದೀಗ 964 ಕೋಟಿ ರೂ ಪರಿಹಾರ ನೀಡುಂತೆ ಕೋರ್ಟ್ ಮೆಟ್ಟಿಲೇರಿದ್ದಾರೆ. ಅಚ್ಚರಿಯಾದರೂ ಸತ್ಯ.. ಬ್ರಿಟನ್‌ನ ಹಿರಿಯ ಟೆಕ್ ಎಕ್ಸಿಕ್ಯೂಟಿವ್ ಇದೀಗ ಸುಮಾರು 964 ಕೋಟಿ ರೂ ಪರಿಹಾರ ಕೋರಿ ಕಾನೂನು



ಹೋರಾಟ ನಡೆಸುತ್ತಿದ್ದು, ಈ ಮೊತ್ತ ಬ್ರಿಟನ್‌ನ ಉದ್ಯೋಗ ನ್ಯಾಯಮಂಡಳಿಯೊಂದರಿಂದ ನೀಡಬಹುದಾದ ಅತಿ ದೊಡ್ಡ ಪರಿಹಾರಗಳಲ್ಲಿ ಒಂದಾಗುವ ಸಾಧ್ಯತೆ ಇದೆ ಎಂದು Independent ವರದಿ ಮಾಡಿದೆ. ಮೂಲಗಳ ಪ್ರಕಾರ, ಶ್ಯಾನನ್ ಬರ್ನ್ಸ್ ಅವರು ADHD ಹೊಂದಿದ್ದು, Gitpod ಕಂಪನಿಯಲ್ಲಿ ಎಂಜಿನಿಯರಿಂಗ್ ವಿಭಾಗದ ಉಪಾಧ್ಯಕ್ಷೆಯಾಗಿ ಕೆಲಸ ಮಾಡುತ್ತಿದ್ದರು. 2023ರ ಏಪ್ರಿಲ್‌ನಲ್ಲಿ ಆಸ್ಟ್ರಿಯಾದ ಲೋಫರ್‌ನಲ್ಲಿ ನಡೆದ ತಂಡದ ಕಾರ್ಯಕ್ರಮಕ್ಕೆ ಅವರು ತೆರಳಿದ್ದರು. ಈ ವೇಳೆ ಅವರು ಮದ್ಯಪಾನ ಮಾಡಿದ್ದರು. ಬಳಿಕ ತಮ್ಮ ಕೊಠಡಿಯ ಕೀ ಕಳೆದುಕೊಂಡಿದ್ದರಿಂದ ಕೊಠಡಿಗೆ ಪ್ರವೇಶಿಸಲು ಸಾಧ್ಯವಾಗಿರಲಿಲ್ಲ. ಪರಿಣಾಮವಾಗಿ ಆ ರಾತ್ರಿ ಸೌನಾದಲ್ಲೇ ಮಲಗಬೇಕಾಯಿತು ಎಂದು ವರದಿಯಾಗಿದೆ. ಈ ಘಟನೆ ಬಳಿಕ Gitpod ಸಿಇಒ ಜೊಹಾನ್ಸ್ ಲ್ಯಾಂಡ್‌ಗ್ರಾಫ್, ಬರ್ನ್ಸ್ ಅವರ ವೃತ್ತಿಪರ ಹೊಣೆಗಾರಿಕೆಯ ಬಗ್ಗೆ ಕಳವಳ ವ್ಯಕ್ತಪಡಿಸಿದ್ದರು. ಬಳಿಕ 2023ರ ಜೂನ್‌ನಲ್ಲಿ ಅವರನ್ನು ಹುದ್ದೆಯಿಂದ ವಜಾಗೊಳಿಸಲಾಗಿತ್ತು.

**ಅಂಗವೈಕಲ್ಯ ಕಾರಣಕ್ಕೆ ವಜಾ ಎಂದ ನ್ಯಾಯಮಂಡಳಿ:** 2025ರಲ್ಲಿ ಬರ್ಮಿಂಗ್‌ಹ್ಯಾಮ್ ಉದ್ಯೋಗ ನ್ಯಾಯಮಂಡಳಿ, ಬರ್ನ್ಸ್ ಅವರನ್ನು ಅವರ ಅಂಗವೈಕಲ್ಯಕ್ಕೆ ಸಂಬಂಧಿಸಿದ ಕಾರಣಗಳಿಂದ ವಜಾಗೊಳಿಸಲಾಗಿದೆ ಎಂದು ತೀರ್ಪು ನೀಡಿತ್ತು. ಈ ಮೂಲಕ ಅವರು ದಾಖಲಿಸಿದ್ದ ಅಂಗವೈಕಲ್ಯ ಆಧಾರಿತ ತಾರತಮ್ಯ ಪ್ರಕರಣದಲ್ಲಿ ಜಯಗಳಿಸಿದ್ದರು. ಇದೀಗ ತಮ್ಮ ಭವಿಷ್ಯದ ಆದಾಯ ನಷ್ಟವನ್ನು ಆಧರಿಸಿ ಸುಮಾರು 964 ಕೋಟಿ ರೂ ಪರಿಹಾರ ಕೋರುತ್ತಿದ್ದಾರೆ. ಕಂಪನಿಯು ಅವರ ಪರಿಹಾರ ಬೇಡಿಕೆಯನ್ನು 12.68 ಕೋಟಿ ರೂಗೆ ಸೀಮಿತಗೊಳಿಸಬೇಕು ಎಂದು ಅರ್ಜಿ ಸಲ್ಲಿಸಿತ್ತು. 12.68 ಕೋಟಿ ರೂ ಗಿಂತ ಹೆಚ್ಚಿನ ಮೊತ್ತದ ಬೇಡಿಕೆ ಯಶಸ್ವಿಯಾಗುವ ಸಾಧ್ಯತೆ ಕಡಿಮೆ ಎಂದು ವಾದಿಸಿದ್ದ ಕಂಪನಿ, 1.27 ಲಕ್ಷ ರೂ ಠೇವಣಿ ವಿಧಿಸುವಂತೆಯೂ ಕೋರಿತ್ತು. 964 ಕೋಟಿ ರೂ ಪರಿಹಾರದ ಬೇಡಿಕೆಯನ್ನು ಕಂಪನಿ "ಅಸಾಮಾನ್ಯ" ಎಂದು ಬಣ್ಣಿಸಿದ್ದು, ಅದರ ಲೆಕ್ಕಾಚಾರವನ್ನು "ಸ್ಪಷ್ಟವಾಗಿ ಅಸಂಬದ್ಧ" ಎಂದು ವಾದಿಸಿತ್ತು. ಆದರೆ ನ್ಯಾಯಾಧೀಶೆ ರೇಚೆಲ್ ವೆಡ್ಡರ್ಸ್ಪೂನ್ ಅವರು ಕಂಪನಿಯ ಅರ್ಜಿಯನ್ನು ತಿರಸ್ಕರಿಸಿದರು. ಬರ್ನ್ಸ್ ಅವರು ಈ ಹಿಂದೆ ಅಸಾಧಾರಣ ಮಟ್ಟದ ವೇತನ ಪಡೆದಿದ್ದು, ಅವರ ಪರಿಹಾರದ ಲೆಕ್ಕಾಚಾರದಲ್ಲಿ ವೇತನ ಮತ್ತು ಷೇರುಗಳ ಮೌಲ್ಯದ ನಷ್ಟವೂ ಸೇರಿದೆ ಎಂದು ನ್ಯಾಯಾಧೀಶರು ಹೇಳಿದರು.

## ಇರಾನ್‌ನ 7 ದಿನಗಳ ಕದನ ವಿರಾಮ ಪ್ರಸ್ತಾಪ

**ಅಮೆರಿಕ:** ಆಯಕಟ್ಟಿನ ಹಾರ್ಮುಜ್ ಜಲಸಂಧಿಯನ್ನು ಮತ್ತೆ ತೆರೆಯಲು ಇರಾನ್ 7 ದಿನಗಳ ಯೋಜನೆ ಮುಂದಿಟ್ಟಿದೆ ಎಂದು ಇರಾನ್ ಪ್ರಸ್ತಾಪ ಮುಂದಿಟ್ಟ ಕೆಲವೇ ಗಂಟೆಗಳಲ್ಲಿ ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಈ ಪ್ರಸ್ತಾವವನ್ನು ತಿರಸ್ಕರಿಸಿದ್ದಾರೆ ಎಂದು ತಿಳಿದುಬಂದಿದೆ. ವಿಶ್ವದ ತೈಲ ಪೂರೈಕೆಗೆ ಪ್ರಮುಖವಾಗಿರುವ ಈ ಜಲಮಾರ್ಗವು ಅಮೆರಿಕ ಮತ್ತು ಇರಾನ್ ನಡುವಿನ ಸಂಘರ್ಷದ ಕೇಂದ್ರಬಿಂದುವಾಗಿದೆ. ಸುಮಾರು ಏಳು ತಿಂಗಳಿನಿಂದ ನಡೆಯುತ್ತಿರುವ ಈ ಸಂಘರ್ಷ ಸದ್ಯ ಸ್ಥಗಿತ ಸ್ಥಿತಿಯಲ್ಲಿದೆ. ಆದರೆ, ಈ ವಾರ ನ್ಯೂಯಾರ್ಕ್‌ನಲ್ಲಿ ನಡೆದ ವಿಶ್ವ ನಾಯಕರ ವಿಶ್ವಸಂಸ್ಥೆ ಸಭೆಯ ವೇಳೆ ನಡೆದ ಹೊಸ ಮಧ್ಯಸ್ಥಿಕೆ ಪ್ರಯತ್ನಗಳು ಒಪ್ಪಂದವೊಂದರತ್ತ ಮುನ್ನಡೆಯುವ ಬಗ್ಗೆ ಆಶಾವಾದ ಮೂಡಿಸಿವೆ. ಇರಾನ್‌ನ ವಿದೇಶಾಂಗ ಸಚಿವ ಅಬ್ಬಾಸ್ ಅರಾಘ್ಚಿ ಡೊನಾಲ್ಡ್ ಟ್ರಂಪ್ ಅವರ ರಾಯಭಾರಿ ಸ್ಟೀವ್ ವಿಟ್ಕಾಫ್ ಅವರೊಂದಿಗೆ ಮಾತುಕತೆ ನಡೆಸಿದ್ದರು. ಇದಕ್ಕೂ ಮುನ್ನ ಅವರು ಯುದ್ಧವನ್ನು ಕೊನೆಗೊಳಿಸಲು ಹಾಗೂ ಪ್ರಮುಖ ಹಡಗು ಸಂಚಾರ ಮಾರ್ಗವನ್ನು ಮತ್ತೆ ತೆರೆಯಲು ಇರಾನ್ ವಿಧಿಸಿರುವ ಷರತ್ತುಗಳನ್ನು ತಿಳಿಸಿದ್ದರು. ಇರಾನ್, ಕತಾರ್ ಮೂಲಕ ಅಮೆರಿಕಕ್ಕೆ ಏಳು ದಿನಗಳ ನಿರ್ದಿಷ್ಟ ಯೋಜನೆಯೊಂದನ್ನು ತಿಳಿಸಿದೆ. ಅಗತ್ಯ ಷರತ್ತುಗಳನ್ನು ಈಡೇರಿಸಿದರೆ, ಜಲಸಂಧಿಯನ್ನು ಮತ್ತೆ ತೆರೆಯಬಹುದು ಮತ್ತು ಏಳು ದಿನಗಳೊಳಗೆ ಸಾಮಾನ್ಯ ಸಮುದ್ರ ಸಂಚಾರವನ್ನು ಪುನಃಸ್ಥಾಪಿಸಬಹುದು ಎಂದು ವಿಶ್ವಸಂಸ್ಥೆಯಲ್ಲಿ ಹೇಳಿದರು. ಈಗ ಆಯ್ಕೆ ಅಮೆರಿಕದ ಕೈಯಲ್ಲಿದೆ. ಇರಾನ್ ಬಲವಂತ, ಬೆದರಿಕೆ ಅಥವಾ ಒತ್ತಡವನ್ನು ಒಪ್ಪಿಕೊಳ್ಳುವುದಿಲ್ಲ. ಒತ್ತಡಕ್ಕೆ ಮಣಿದು ತನ್ನ ಸಾರ್ವಭೌಮ ಹಕ್ಕುಗಳನ್ನು ಇರಾನ್ ಬಿಟ್ಟುಕೊಡುವುದಿಲ್ಲ ಎಂದು ಹೇಳಿದರು.



ಟ್ರಂಪ್ ತಿರಸ್ಕೃತ

## ನಾನು, ನಿರ್ಮಾಪಕ ಮಂಜು ಕ್ರಿಕೆಟ್ ಆಡುವ ಸಂದರ್ಭ ಶುರುವಾದ ಕಥೆಯೇ

# ಬೃಂದಾವಿಹಾರಿ

ನಮಸ್ಕಾರ ನಮಸ್ಕಾರ ಎಂದು ಹೇಳುತ್ತಾ ಖಾಸಗಿ ಕಾರ್ಯಕ್ರಮದ ಮೂಲಕ ಕನ್ನಡಿಗರ ಮನೆಮಾತಾದ ಗಣೇಶ್ ನಂತರ ಸ್ಯಾಂಡಲ್ ವುಡ್‌ನಲ್ಲಿ ಗೋಲ್ಡನ್ ಸ್ಟಾರ್ ಆಗಿ ಸಕ್ಸಸ್ ಕಂಡಿದ್ದು, ಸದ್ಯ 'ಬೃಂದಾವಿಹಾರಿ' ಸಿನಿಮಾ ಬಿಡುಗಡೆಗೆ ಎದುರು ನೋಡುತ್ತಿದ್ದಾರೆ. ಚಿತ್ರದ ಐದನೇ ಹಾಡು 'ಒಂದೇ ಒಂದು' ಇತ್ತೀಚಿಗೆ ಬೆಂಗಳೂರಿನ ಅರಮನೆ ಆವರಣದಲ್ಲಿ ಅದ್ದೂರಿಯಾಗಿ ಅನಾವರಣಗೊಂಡಿತು.

ನಿರ್ಮಾಪಕ ಸಮೃದ್ಧಿ ಮಂಜುನಾಥ್ ಪತ್ನಿ ಪದ್ಮ ಮಂಜುನಾಥ್ ಅವರು ಈ ಹಾಡನ್ನು ಬಿಡುಗಡೆ ಮಾಡಿದರು. ಕವಿರತ್ನ ವಿ.ನಾಗೇಂದ್ರ ಪ್ರಸಾದ್ ಬರೆದಿರುವ ಗೀತೆಯನ್ನು ಹೆಸರಾಂತ ಗಾಯಕಿ ಕೆ.ಎಸ್ ಚಿತ್ರ ಹಾಗೂ ಖ್ಯಾತ ಗಾಯಕ ಜಸ್ಕರಣ್ ಸಿಂಗ್ ಹಾಡಿದ್ದಾರೆ. ಹೇಶಮ್ ಅಬ್ದುಲ್ ವಹಾಬ್ ಸಂಗೀತ ನೀಡಿರುವ ಹಾಡಿಗೆ ಗಣೇಶ್ ಹಾಗೂ ದೇವಿಕ ಭಟ್ ಹೆಜ್ಜೆ ಹಾಕಿದ್ದಾರೆ.

ಕೃಷ್ಣಂ ಪ್ರಣಯ ಸಖಿ ಚಿತ್ರದ ನಂತರ ನಟ ಗಣೇಶ್ ಹಾಗೂ ನಿರ್ದೇಶಕ ಶ್ರೀನಿವಾಸರಾಜು ಜೋಡಿ ತೆರೆಮೇಲೆ ಮತ್ತೊಮ್ಮೆ ಮೋಡಿ ಮಾಡುವ ಎಲ್ಲಾ ಲಕ್ಷಣಗಳಿವೆ. ಸಮಾರಂಭದಲ್ಲಿ ಮಾತನಾಡಿದ ನಟ ಗಣೇಶ್. ಈ ಬೃಂದಾವಿಹಾರಿ ಸಿನಿಮಾ ನಾನು ಮತ್ತು ನಿರ್ಮಾಪಕ ಸಮೃದ್ಧಿ ಮಂಜುನಾಥ್ ಕ್ರಿಕೆಟ್ ಆಡುವ ಸಂದರ್ಭದಲ್ಲಿ ಶುರುವಾಯಿತು. ಮಂಜು ಅವರು ನಿಮಗೆ ಒಂದೊಳ್ಳೆ ಫ್ಯಾಮಿಲಿ ಸಿನಿಮಾ ಮಾಡೋಣ ಅಂತಾ ಹೇಳಿದಾಗ ಶುರುವಾದ ಕಥೆಯೇ ಈ ಬೃಂದಾವಿಹಾರಿ.

ಈಗಾಗಲೇ ನಾಲ್ಕು ಹಾಡುಗಳು ಕೇಳುಗರ ಮನಸ್ಸು ಗೆದ್ದಿದೆ. ಈಗ ಐದನೇ ಹಾಡು ಬಿಡುಗಡೆ ಆಗಿದೆ. ಒಳ್ಳೆಯ ಸಾಲುಗಳನ್ನು ಕೊಟ್ಟಾಗ ನಮಗೆ ಅಷ್ಟೊಂದು ಕೆಲಸ ಇರುವುದಿಲ್ಲ. ಅಂತಹ ಅದ್ಭುತ ಸಾಲುಗಳನ್ನು ಕೊಟ್ಟ ವಿ.ನಾಗೇಂದ್ರ ಪ್ರಸಾದ್ ಅವರಿಗೆ, ಸಂಗೀತ ನಿರ್ದೇಶಕ ಹೇಶಮ್ ಅಬ್ದುಲ್ ವಹಾಬ್ ಅವರಿಗೆ, ಗಾಯಕ ಜಸ್ಕರಣ್ ಸಿಂಗ್ ಅವರಿಗೆ, ನಿರ್ದೇಶಕ ಶ್ರೀನಿವಾಸರಾಜು ಹಾಗೂ ಚಿತ್ರವನ್ನು ಸಮೃದ್ಧಿಯಾಗಿ ನಿರ್ಮಾಣ ಮಾಡಿರುವ ನಿರ್ಮಾಪಕ ಸಮೃದ್ಧಿ ಮಂಜುನಾಥ್ ಅವರಿಗೆ ಈ ಸಂದರ್ಭದಲ್ಲಿ ಧನ್ಯವಾದ ಹೇಳುತ್ತೇನೆ. ಈ ಹಾಡನ್ನು ನೋಡಿದವರು ನೀವು ಈ ಹಾಡಿನಲ್ಲಿ ತುಂಬಾ ಮುದ್ದಾಗಿ ಕಾಣುತ್ತೀರಿ ಹಾಗೂ ಅಭಿನಯ ಕೂಡಾ ಚೆನ್ನಾಗಿದೆ ಎಂದು ಹೇಳುತ್ತಿದ್ದಾರೆ. ನಾನು ಎಲ್ಲವನ್ನು ಪ್ರೀತಿಯಿಂದ ಮಾಡುತ್ತೇನೆ. ಆದರೆ, ಅದು ತೆರೆಯ ಮೇಲೆ ಚೆನ್ನಾಗಿ ಕಾಣಲು ನೀವೆಲ್ಲರೂ ನನ್ನ ಮೇಲಿಟ್ಟಿರುವ ಪ್ರೀತಿಯೇ ಕಾರಣ. ಆ ಪ್ರೀತಿ ಸದಾ ಇರಲಿ ಎಂದು ಕೇಳಿಕೊಂಡರು. ನಿರ್ಮಾಪಕ ಸಮೃದ್ಧಿ ಮಂಜುನಾಥ್ ಮಾತನಾಡಿ, ಕ್ರಿಕೆಟ್‌ನಿಂದ ನಮ್ಮ ಸ್ನೇಹ ಆರಂಭವಾಯಿತು. ನನ್ನನ್ನು ಚಿತ್ರರಂಗಕ್ಕೆ ಕರೆತಂದವರು ಗಣೇಶ್ ಅವರೇ. ಈಗ ನಮ್ಮ ಸಂಸ್ಥೆಯ ನಿರ್ಮಾಣದ ಚಿತ್ರಕ್ಕೆ ಅವರೇ ನಾಯಕರಾಗಿರುವುದು ಬಹಳ ಖುಷಿಯಾಗಿದೆ. ಬೃಂದಾವಿಹಾರಿ ಒಂದೊಳ್ಳೆ ಕೌಟುಂಬಿಕ ಚಿತ್ರ. ಹಾಡುಗಳು ಒಂದಕ್ಕಿಂತ ಒಂದು ಅದ್ಭುತ. ಇಂದು ನಮ್ಮ ಸಮೃದ್ಧಿ ಸಂಸ್ಥೆಗೆ ಹದಿನೈದು ವರ್ಷ ತುಂಬಿದೆ. ಈ ಸಂದರ್ಭದಲ್ಲಿ ಸಾವಿರಾರು ಜನರ ಸಮ್ಮುಖದಲ್ಲಿ ಒಂದೇ ಒಂದು ಹಾಡು ಕೂಡಾ ಬಿಡುಗಡೆಯಾಗಿರುವುದು ಬಹಳ ಸಂತಸ ತಂದಿದೆ. ಈ ಹಾಡನ್ನು ನಾನು ನಮ್ಮ ಸಮೃದ್ಧಿ ಸಂಸ್ಥೆಯ ಎಲ್ಲರಿಗೂ ಅರ್ಪಿಸುತ್ತೇನೆ ಎಂದರು.

ಆನಂದ್ ಆಡಿಯೋ ಮೂಲಕ ಈ ಚಿತ್ರದ ಹಾಡುಗಳು ಬಿಡುಗಡೆಯಾಗಿದೆ. ನಾಡಹಬ್ಬ ದಸರಾ ಸಂದರ್ಭದಲ್ಲಿ **ಅಕ್ಟೋಬರ್ 16ರಂದು ಬೃಂದಾವಿಹಾರಿ ಸಿನಿಮಾ ರಾಜ್ಯಾದ್ಯಂತ ತೆರೆ ಕಾಣಲಿದೆ.**



ನಿರ್ದೇಶಕ ಶ್ರೀನಿವಾಸ ರಾಜು ಮಾತನಾಡಿ, ಈಗಾಗಲೇ ಬಿಡುಗಡೆಯಾಗಿರುವ ನಮ್ಮ ಚಿತ್ರದ ನಾಲ್ಕು ಹಾಡುಗಳನ್ನು ತಾವೆಲ್ಲರೂ ತುಂಬಾನೆ ಮೆಚ್ಚಿಕೊಂಡಿದ್ದೀರಿ. ಐದನೇ ಹಾಡಾಗಿ ಒಂದೇ ಒಂದು ಬಿಡುಗಡೆಯಾಗಿದೆ. ಈ ಹಾಡನ್ನು ಬರೆಯಲು ನಾಗೇಂದ್ರ ಪ್ರಸಾದ್ ಅವರು ಎರಡು ತಿಂಗಳ ಸಮಯ ತೆಗೆದುಕೊಂಡಿದ್ದಾರೆ. ಸಾಮಾನ್ಯವಾಗಿ ಹದಿನಾರರಿಂದ ಅರವತ್ತು ವಯಸ್ಸಿನವರೆಗೂ ಎಲ್ಲಾ ಹೆಂಗಸರು ತಾವು ಪ್ರೀತಿಸುವ ಗಂಡಸರನ್ನು ಕೇಳುವ ಪ್ರಶ್ನೆ, ನೀವು ನನ್ನನ್ನು ಎಷ್ಟು ಪ್ರೀತಿಸುತ್ತೀರಾ? ಎಂದು. ಅವರೆಲ್ಲರ ಪ್ರಶ್ನೆಗೆ ಉತ್ತರವಾಗಿ ಈ ಹಾಡು ಮೂಡಿಬಂದಿದೆ. ನಮ್ಮ ಚಿತ್ರದ ಎಲ್ಲಾ ಹಾಡುಗಳನ್ನು ನಾಗೇಂದ್ರ ಪ್ರಸಾದ್ ಅವರೇ ಬರೆದಿದ್ದಾರೆ. ಹೇಶಮ್ ಅಬ್ದುಲ್ ವಹಾಬ್ ಸಂಗೀತ ನೀಡಿದ್ದಾರೆ. ಈ ಹಾಡನ್ನು ಕೆ.ಎಸ್ ಚಿತ್ರ ಹಾಗೂ ಜಸ್ಕರಣ್ ಸಿಂಗ್ ಹಾಡಿದ್ದಾರೆ. ನಮ್ಮ ಚಿತ್ರ ಅಕ್ಟೋಬರ್ 16ರಂದು ತೆರೆಗೆ ಬರುತ್ತಿದೆ. ಎಲ್ಲರಿಗೂ ಮೆಚ್ಚುಗೆಯಾಗುವ ಭರವಸೆ ಇದೆ" ಎಂದರು. ಗೀತೆರಚನೆಕಾರರಾದ ವಿ.ನಾಗೇಂದ್ರ ಪ್ರಸಾದ್ ಮಾತನಾಡಿ, ಈ ಚಿತ್ರದಲ್ಲಿ ಏಳು ಹಾಡುಗಳಿವೆ. ವಿಶೇಷ ಎಂದರೆ ಎಲ್ಲಾ ಹಾಡುಗಳನ್ನು ದ್ವಿರುಕ್ತಿ ಬಳಸಿ ಬರೆದಿದ್ದೇನೆ. "ರಾಮ ರಾಮ", " ರಾಧೆ ರಾಧೆ" ಹೀಗೆ... ಪ್ರಸ್ತುತ "ಒಂದೇ ಒಂದು" ಹಾಡು ಬಿಡುಗಡೆ ಯಾಗಿದೆ. ಈ ಹಾಡನ್ನು ತೆರೆಯ ಮೇಲೆ ನೋಡಿದ ಮೇಲೆ ಮನಸ್ಸು ತುಂಬಿ ಬಂದಿದೆ ಎಂದರು.



## ನಿರ್ದೇಶಕ ರಾಜೇಶ್ ಸಿನಿಮಾದಲ್ಲಿ ಸಿಎಂ ಆಗಿ ಸಿದ್ದರಾಮಯ್ಯ ನಟನೆ

**ಬೆಂಗಳೂರು:** ಕರ್ನಾಟಕದ ಹಿರಿಯ ರಾಜಕಾರಣಿ, ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಮೊದಲ ಬಾರಿಗೆ ಪೂರ್ಣ ಪ್ರಮಾಣದ ಸಿನಿಮಾವೊಂದರಲ್ಲಿ ನಟಿಸುವ ಮೂಲಕ ಬೆಳ್ಳಿತೆರೆಗೆ ಕಾಲಿಡುತ್ತಿದ್ದಾರೆ. ಅದರಲ್ಲೂ, ರಿಯಲ್ ಲೈಫ್‌ನಲ್ಲಿ ಕರ್ನಾಟಕದ ಇತಿಹಾಸದಲ್ಲಿಯೇ ಅತ್ಯಂತ ದೀರ್ಘಕಾಲ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ ದಾಖಲೆ ನಿರ್ಮಿಸಿರುವ ಟಗರು, ಈಗ ರೀಲ್ ಲೈಫ್‌ನಲ್ಲೂ ಮುಖ್ಯಮಂತ್ರಿಯ ಪಾತ್ರದಲ್ಲೇ ಕಾಣಿಸಿಕೊಳ್ಳುತ್ತಿರುವುದು ಅವರ ಅಭಿಮಾನಿಗಳಲ್ಲಿ ಭಾರಿ ಕುತೂಹಲ ಮೂಡಿಸಿದೆ. ಆ ಕುರಿತ ವರದಿ ಇಲ್ಲಿದೆ:

**ವರ್ಲ್ಡ್ ರೆಕಾರ್ಡ್ ಮಾಡಲು ಟಗರು ರೆಡಿ:**

ನಟ ಹಾಗೂ ನಿರ್ಮಾಪಕ ರಾಜೇಶ್ ಗೌಡ ಅವರ ಆರ್.ಎ. ಫಿಲ್ಮ್ ಫ್ಯಾಕ್ಟರಿ ಬ್ಯಾನರ್ ಅಡಿಯಲ್ಲಿ ಮೂಡಿಬರಲಿರುವ ಹೊಸ ಸಿನಿಮಾಗೆ 'ಮುಖ್ಯಮಂತ್ರಿ' ಎಂಬ ಟೈಟಲ್ ಇಡುವ ಸಾಧ್ಯತೆಯಿದ್ದು, ಈಗಾಗಲೇ ನಿರ್ದೇಶಕರು ಹೇಳಿದ ಕಥೆಯನ್ನು ಕೇಳಿ ಮೆಚ್ಚಿಕೊಂಡಿರುವ ಸಿದ್ದರಾಮಯ್ಯ ಅವರು, ಸಿನಿಮಾದಲ್ಲಿ ಪ್ರಮುಖವಾಗಿ ಬರುವ ಮುಖ್ಯಮಂತ್ರಿಯ ಪಾತ್ರದಲ್ಲಿಯೇ ನಟಿಸಲು ಒಪ್ಪಿಗೆ ಸೂಚಿಸಿದ್ದಾರೆ. ಅದರಲ್ಲೂ, ಈ ಸಿನಿಮಾದ ಚಿತ್ರಕಥೆ ಬರೆಯುವುದರಿಂದ ಹಿಡಿದು, ಚಿತ್ರೀಕರಣ, ಪೋಸ್ಟ್ ಪ್ರೊಡಕ್ಷನ್, ಸೆನ್ಸಾರ್ ಪ್ರಕ್ರಿಯೆ ಹಾಗೂ ಚಿತ್ರಮಂದಿರದಲ್ಲಿ ಪ್ರದರ್ಶನ ಮಾಡುವವರೆಗಿನ ಎಲ್ಲಾ ಹಂತಗಳನ್ನು ಕೇವಲ 48 ಗಂಟೆಗಳಲ್ಲಿ ಮುಗಿಸಿ ವಿಶ್ವ ದಾಖಲೆ ಬರೆಯುವ ಮಹತ್ವಾಕಾಂಕ್ಷೆಯ ಯೋಜನೆಯನ್ನು ಚಿತ್ರತಂಡ ಹೊಂದಿದೆ.



ಬೆಳ್ಳಿತೆರೆಗೆ ಕಾಲಿಟ್ಟ ಮಾಜಿ ಸಿಎಂ

**ನಟನೆಯೊಂದಿಗೆ ಮೊದಲ ಪ್ರಯತ್ನವೇ?**

ಇದು ಕನ್ನಡ ಚಿತ್ರರಂಗಕ್ಕೆ ಸಿದ್ದರಾಮಯ್ಯ ಅವರ ಮೊದಲ ಎಂಟ್ರಿಯಾದರೂ, ಅವರಿಗೆ ನಟನೆ ಹೊಸದೇನಲ್ಲ. ಯಾಕಂದ್ರೆ, ತಮ್ಮ ವಿದ್ಯಾರ್ಥಿ ಜೀವನದಲ್ಲಿ ಅವರು ನಾಟಕಗಳಲ್ಲಿ ಅಭಿನಯಿಸಿದ್ದರು. ಅಲ್ಲದೆ, 2017 ರಲ್ಲಿ ಕವಿತಾ ಲಂಕೇಶ್ ನಿರ್ದೇಶನದ ಸಮ್ಮರ್ ಹಾಲಿಡೇಸ್ ಎಂಬ ಮಕ್ಕಳ ಚಿತ್ರದಲ್ಲೂ ಸಣ್ಣದೊಂದು ಅತಿಥಿ ಪಾತ್ರದಲ್ಲಿ ಕಾಣಿಸಿಕೊಂಡಿದ್ದರು. ಇದರ ಜೊತೆಗೆ, ಸಿದ್ದರಾಮಯ್ಯ ಅವರ ಜೀವನಗಾಥೆಯನ್ನಾಧರಿಸಿದ ಲೀಡರ್ ರಾಮಯ್ಯ ಎಂಬ ಬಯೋಪಿಕ್ ಚಿತ್ರದ ಕೆಲಸಗಳೂ ಪ್ರತ್ಯೇಕವಾಗಿ ನಡೆಯುತ್ತಿದ್ದು, ಅದರಲ್ಲಿ ತಮಿಳು ಚಿತ್ರರಂಗದ ಖ್ಯಾತ ನಟ ವಿಜಯ ಸೇತುಪತಿ ಪ್ರಮುಖ ಪಾತ್ರ ಮಾಡಲಿದ್ದಾರೆ ಎಂಬ ಮಾತು ಕೇಳಿಬರುತಿದೆ. ಏತನ್ಮಧ್ಯೆ, ಈ ಹಿಂದೆ ಮಾಜಿ ಸಿಎಂ ಬಿ.ಎಸ್. ಯಡಿಯೂರಪ್ಪ ಅವರು ಕೂಡ ಸಿನಿಮಾವೊಂದರಲ್ಲಿ ಮುಖ್ಯಮಂತ್ರಿಯಾಗಿ ನಟಿಸಿದ್ದರು.

## ನೀವಿನ್ನೂ ಮ್ಯಾಂಗೋ ಪಚ್ಚ ವೀಕ್ಷಿಸಿಲ್ವಾ?

ಮೈಸೂರಿನ ಭೂಗತ ಲೋಕದ ಹಿನ್ನೆಲೆಯ ಕಥೆಯೊಂದಿಗೆ ಪ್ರೇಕ್ಷಕರ ಮೆಚ್ಚುಗೆ ಗಳಿಸಿದ್ದ ಮ್ಯಾಂಗೋ ಪಚ್ಚ ಸಿನಿಮಾ ಇದೀಗ ಡಿಜಿಟಲ್ ವೇದಿಕೆಗೆ ಲಗ್ಗೆಯಿಟ್ಟಿದೆ. ಕಿಚ್ಚ ಸುದೀಪ್ ಅವರ ಸೋದರಳಿಯ ಸಂಚಿತ್ ಸಂಜೀವ್ ಅಭಿನಯದ ಚೊಚ್ಚಲ ಚಿತ್ರ ಚಿತ್ರಮಂದಿರಗಳಲ್ಲಿ ಜೂನ್ 5ಕ್ಕೆ ತೆರೆಕಂಡು ಉತ್ತಮ ಪ್ರದರ್ಶನ ಕಂಡಿತ್ತು. ಥಿಯೇಟರ್‌ಗಳಲ್ಲಿ ಸಿನಿಮಾ ವೀಕ್ಷಿಸದವರು ಇಂದಿನಿಂದ ಒಟಿಟಿಯಲ್ಲಿ ವೀಕ್ಷಿಸಬಹುದಾಗಿದೆ. ಈ ಸಿನಿಮಾದಲ್ಲಿ ಸಂಚಿತ್ ಸಂಜೀವ್, ಪ್ರಶಾಂತ್ ಅಲಿಯಾಸ್ ಪಚ್ಚ ಎಂಬ ಪವರ್‌ಫುಲ್ ಶೇಡ್ ಹೊಂದಿರುವ ಪಾತ್ರಕ್ಕೆ ಜೀವ ತುಂಬಿದ್ದಾರೆ. ಸಾಮಾನ್ಯ ಮಧ್ಯಮ ವರ್ಗದ ಬದುಕನ್ನು ಸಾಗಿಸುತ್ತಿದ್ದ ಯುವಕನೊಬ್ಬ, ಅಪರಾಧ ಲೋಕಕ್ಕೆ ಹೇಗೆ ಕಾಲಿಡುತ್ತಾನೆ ಆದ ಬಲವಾದ ಪ್ರಭಾವ ಬೆಳೆಸಿಕೊಂಡು ಈ ಚಿತ್ರ ಅತ್ಯಂತ ನೈಜವಾಗಿ ತೆರೆದಿಡುತ್ತದೆ. ಮ್ಯಾನರಿಸಂ ಬಹುತೇಕ ಪ್ರೇಕ್ಷಕರ ಮೆಚ್ಚುಗೆ ಮೂಡಿಬಂದಿರುವ ಈ ಚಿತ್ರವು 2001ರಿಂದ ಸಾಗುತ್ತದೆ. ಆ ಕಾಲಘಟ್ಟದ ನಡುವಿನ ರಕ್ತಸಿಕ್ತ ಸಂಘರ್ಷ, ಪ್ರೀತಿಯ ನಡುವೆ ನಾಯಕನ ಅನಿವಾರ್ಯ ಪರಿಸ್ಥಿತಿಗಳ ಸುಳಿಗೆ ಸಿಲುಕಿ ಹಾಗೂ ಕಾಲಕ್ರಮೇಣ ಅದೇ ಜಗತ್ತಿನಲ್ಲಿ ತನ್ನದೇ ಹೇಗೆ ಬೆಳೆಯುತ್ತಾನೆ ಎಂಬ ಮಾಸ್ ಜರ್ನಿಯನ್ನು ಸಂಚಿತ್ ಅವರ ನಟನೆ, ಬಾಡಿ ಲಾಂಗ್ವೇಜ್ ಮತ್ತು ಸಂಪಾದಿಸಿದೆ. ನಿರ್ದೇಶಕ ವಿವೇಕ್ ಸಾರಥ್ಯದಲ್ಲಿ 2011ರ ನಡುವಿನ ಮೈಸೂರಿನ ಹಿನ್ನೆಲೆಯಲ್ಲಿ ಸ್ಥಳೀಯ ರಾಜಕೀಯ, ಗ್ಯಾಂಗ್‌ಗಳ ಕುಟುಂಬದ ಭಾವನೆಗಳು ಮತ್ತು ಬದುಕು ತೆಗೆದುಕೊಳ್ಳುವ ತಿರುವುಗಳನ್ನು ಕಥೆಯಲ್ಲಿ ಕುತೂಹಲಕಾರಿಯಾಗಿ ಕಟ್ಟಿಕೊಡಲಾಗಿದೆ. ಸಂಚಿತ್ ಸಂಜೀವ್ ಜೊತೆ ಕಾಜಲ್ ಕುಂದರ್ ತೆರೆಹಂಚಿಕೊಂಡಿದ್ದಾರೆ. ಉಳಿದಂತೆ ಮಯೂರ್ ಪಟೇಲ್, ಭಾವನಾ, ಹರಿಣಿ ಶ್ರೀಕಾಂತ್, ಹಂಸಾ, ಉಗ್ರಂ ಮಂಜು, ವಿಜಯ್ ರಾಘವೇಂದ್ರ ಅವರ ಅಳಿಯ ಜೈ ಗೋಪಿನಾಥ್ ಸೇರಿದಂತೆ ಅನೇಕರು ತಾರಾಬಳಗದಲ್ಲಿದ್ದಾರೆ. ಶೇಖರ್ ಚಂದ್ರ ಛಾಯಾಗ್ರಹಣ ಮತ್ತು ಚರಣ್ ರಾಜ್ ಸಂಗೀತ ನಿರ್ದೇಶನ ಈ ಸಿನಿಮಾಗಿದೆ. ಚಿತ್ರದ ಮತ್ತೊಂದು ವಿಶೇಷತೆಯೆಂದರೆ ಅರಗಿಣಿಯೇ ಎಂಬ ಹಾಡಿಗೆ ಸುದೀಪ್ ಪುತ್ರಿ ಸಾನ್ವಿ ದನಿ ನೀಡಿದ್ದಾರೆ. ಕೆಆರ್‌ಜಿ ಮತ್ತು ಕಿಚ್ಚ ಸುದೀಪ್ ದಂಪತಿಯ ಸುಪ್ರಿಯಾನ್ವಿ ಪ್ರೊಡಕ್ಷನ್ಸ್ ಜಂಟಿಯಾಗಿ ಈ ಸಿನಿಮಾವನ್ನು ಅದ್ದೂರಿಯಾಗಿ ನಿರ್ಮಾಣ ಮಾಡಿದೆ.



**ಈಗ OTTಯಲ್ಲಿ ನೋಡಿ ಆನಂದಿಸಿ ಸುದೀಪ್ ಸೋದರಳಿಯನ ಚೊಚ್ಚಲ ಚಿತ್ರ**

## ಮಹಿಳಾ ಕಬಡ್ಡಿಯಲ್ಲಿ ಚಿನ್ನ ಗೆದ್ದು ಇತಿಹಾಸ ಸೃಷ್ಟಿಸಿದ ಭಾರತ

ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಮತ್ತೊಂದು ಚಿನ್ನದ ಪದಕ ಗೆದ್ದಿದೆ. ಭಾರತೀಯ ಮಹಿಳಾ ಕಬಡ್ಡಿ ತಂಡ ಫೈನಲ್‌ನಲ್ಲಿ ಇರಾನ್ ತಂಡವನ್ನು 37–34 ಅಂತರದಿಂದ ಮಣಿಸಿ ಚಿನ್ನವನ್ನು ಗೆದ್ದುಕೊಂಡಿತ್ತು. ಏಷ್ಯನ್ ಕ್ರೀಡಾಕೂಟದ ಇತಿಹಾಸದಲ್ಲಿ ಭಾರತೀಯ ಮಹಿಳಾ ತಂಡಕ್ಕೆ ಸಿಕ್ಕ ನಾಲ್ಕನೇ ಚಿನ್ನದ ಪದಕ ಇದಾಗಿದೆ. 2022ರಲ್ಲಿ ನಡೆದಿದ್ದ ಹ್ಯಾಂಗ್‌ಝೌ ಏಷ್ಯನ್ ಗೇಮ್ಸ್‌ನಲ್ಲೂ ಭಾರತ ಚಾಂಪಿಯನ್ ಆಗಿ ಹೊರಹೊಮ್ಮಿತ್ತು ಎಂಬುದು ಗಮನಾರ್ಹ.

ಫೈನಲ್‌ನಲ್ಲಿ, ಭಾರತೀಯ ತಂಡವು ಆರಂಭದಿಂದಲೂ ಆಕ್ರಮಣಕಾರಿ ತಂತ್ರವನ್ನು ಬಳಸಿತು ಮತ್ತು ಪಂದ್ಯದುದ್ದಕ್ಕೂ ತನ್ನ ಪ್ರಾಬಲ್ಯವನ್ನು ಕಾಯ್ದುಕೊಂಡಿತು. ಇದು ಅರ್ಧಾವಧಿಯಲ್ಲಿ 22–16 ಅಂತರದಿಂದ ಮುನ್ನಡೆಗೆ ಕಾರಣವಾಯ್ತು. ನಂತರ ದ್ವಿತಿಯಾರ್ಧದಲ್ಲಿ ಇರಾನ್ ಬಲಿಷ್ಠ ಪುನರಾಗಮನ ಮಾಡಿತ್ತಾದರೂ ಭಾರತ ಅಂತಿಮವಾಗಿ ಅದ್ಭುತ ಪ್ರದರ್ಶನವನ್ನು ನೀಡಿ ಪಂದ್ಯವನ್ನು ಗೆದ್ದ ಇತಿಹಾಸ ಸೃಷ್ಟಿಸಿತು. ಆರಂಭದಲ್ಲಿ ಎರಡೂ ತಂಡಗಳ ನಡುವಿನ ಪಂದ್ಯ ಸಮಬಲದಿಂದ ಕೂಡಿತ್ತು. ಮೊದಲ ಸೆಷನ್‌ನಲ್ಲಿ ಭಾರತ 22–16 ಮುನ್ನಡೆ ಸಾಧಿಸಿತು. ಒಂದು ಹಂತದಲ್ಲಿ ಇದು ತಂಡಕ್ಕೆ ಸುಲಭ ಗೆಲುವಿನ ಸೂಚನೆ ನೀಡಿತ್ತು. ಆದಾಗ್ಯೂ ನಂತರ ಎರಡನೇ ಸೆಷನ್‌ನಲ್ಲಿ ಇರಾನ್ ಹಿನ್ನಡೆಯಿಂದ ಚೇತರಿಸಿಕೊಂಡಿತು. ಬಲವಾಗಿ ಕಮ್‌ಬ್ಯಾಕ್ ಮಾಡಿ ನಿರಂತರ ಅಂಕಗಳನ್ನು ಕಲೆಹಾಕಿತು. ಒಂದು ಹಂತದಲ್ಲಿ, ಸ್ಕೋರ್ 27–26ಕ್ಕೆ ತಲುಪಿತು ಈ ವೇಳೆ ಇರಾನ್ ಭಾರತವನ್ನು ಮಣಿಸುತ್ತದೆ ಎಂದು ತೋರುತ್ತಿತ್ತು. ಆದಾಗ್ಯೂ, ಒತ್ತಡದ ನಡುವೆಯೂ ಭಾರತೀಯರು ಅದ್ಭುತ ಪ್ರದರ್ಶನ ನೀಡಿದರು. ಪಂದ್ಯದ ಅಂತಿಮ ಕ್ಷಣಗಳಲ್ಲಿ ಇರಾನ್ ಹಲವಾರು ತಪ್ಪುಗಳನ್ನು ಮಾಡಿ ಅನಾವಶ್ಯಕವಾಗಿ ಅಂಕಗಳನ್ನು ಬಿಟ್ಟುಕೊಟ್ಟಿತು. ಇರಾನ್‌ನ ಇಬ್ಬರು ರೈಡರ್‌ಗಳು ಡಬಲ್ ಎಂಟ್ರಿ ಮಾಡಿದರು. ಈ ತಪ್ಪುಗಳ ತಂಡದ




ಗೆಲುವು ಕಸಿದುಕೊಂಡಿತು. ಭಾರತ ಈ ಪಂದ್ಯವನ್ನು 37–34 ಅಂತರದಿಂದ ಗೆದ್ದುಕೊಂಡಿತು.

**ಏಷ್ಯನ್ ಕ್ರೀಡಾಕೂಟದಲ್ಲಿ ಮುಂದುವರೆದ ಭಾರತದ ಪ್ರಾಬಲ್ಯ:** 2010ರಿಂದ ಏಷ್ಯನ್ ಕ್ರೀಡಾಕೂಟಕ್ಕೆ ಮಹಿಳಾ ಕಬಡ್ಡಿ ಸೇರ್ಪಡೆಗೊಂಡಿತು. ಅಂದಿನಿಂದ, ಭಾರತ ಕ್ರೀಡಾಕೂಟದ ಅತ್ಯಂತ ಯಶಸ್ವಿ ತಂಡವಾಗಿ ಗುರುತಿಸಿಕೊಂಡಿದೆ. ಮೊದಲ ಎರಡು ಆವೃತ್ತಿಗಳಾದ ಗುವಾಂಗ್‌ಝೌ 2010 ಮತ್ತು ಇಂಚಿಯಾನ್ 2014ರ ಕ್ರೀಡಾಕೂಟದಲ್ಲಿ ಚಿನ್ನದ ಪದಕಗಳನ್ನು ಗೆದ್ದಿತು. ನಂತರ 2022ರಲ್ಲಿ ಭಾರತ ಮತ್ತೆ ಚಿನ್ನದ ಪದಕವನ್ನು ಗೆದ್ದಿತು. 2018ರ ಜಕಾರ್ತಾ ಏಷ್ಯನ್ ಕ್ರೀಡಾಕೂಟದಲ್ಲಿ ತಂಡದ ಏಕೈಕ ಸೋಲು ಕಂಡಿತು, ಅಲ್ಲಿ ಇರಾನ್ ಭಾರತವನ್ನು ಫೈನಲ್‌ನಲ್ಲಿ ಸೋಲಿಸಿತು. ನಂತರ ಭಾರತ 2022ರ ಹ್ಯಾಂಗ್‌ಝೌ ಏಷ್ಯನ್ ಕ್ರೀಡಾಕೂಟದಲ್ಲಿ ಗಮನಾರ್ಹ ಪುನರಾಗಮನ ಮಾಡಿತು, ಮತ್ತೆ ಚಿನ್ನದ ಪದಕವನ್ನು ಗೆದ್ದು ತನ್ನ ಪ್ರಾಬಲ್ಯವನ್ನು ಪುನಃ ಸ್ಥಾಪಿಸಿತು. ಈಗ, 2026 ರಲ್ಲಿ, ಭಾರತ ಮತ್ತೊಮ್ಮೆ ಇರಾನ್ ಅನ್ನು ಫೈನಲ್‌ನಲ್ಲಿ ಸೋಲಿಸಿ ಚಿನ್ನದ ಪದಕವನ್ನು ಗೆದ್ದುಕೊಂಡಿದೆ. ಒಟ್ಟಾರೆಯಾಗಿ, ಭಾರತೀಯ ಮಹಿಳಾ ಕಬಡ್ಡಿ ತಂಡವು ಏಷ್ಯನ್ ಕ್ರೀಡಾಕೂಟದಲ್ಲಿ ಅತ್ಯುತ್ತಮ ದಾಖಲೆ ಹೊಂದಿದೆ. ಇದುವರೆಗೆ ನಾಲ್ಕು ಚಿನ್ನದ ಪದಕಗಳು ಮತ್ತು ಒಂದು ಬೆಳ್ಳಿ ಪದಕ ಗೆದ್ದುಕೊಂ ಡಿದೆ. ಇದು ಮಹಿಳಾ ಕಬಡ್ಡಿ ಇತಿಹಾಸದಲ್ಲಿ ಅತ್ಯಂತ ಯಶಸ್ವಿ ತಂಡವನ್ನಾಗಿ ಮಾಡಿದೆ.




**ಭಾರತದ ಪದಕಗಳ ಸಂಖ್ಯೆ 27ಕ್ಕೆ ಏರಿಕೆ**

ಮೂರು ಚಿನ್ನ, 11 ಬೆಳ್ಳಿ ಮತ್ತು 13 ಕಂಚಿನ ಪದಕಗಳೊಂದಿಗೆ, 2026ರ ಏಷ್ಯನ್ ಕ್ರೀಡಾಕೂಟದಲ್ಲಿ ಭಾರತ ಪದಕಗಳ ಸಂಖ್ಯೆ 27ಕ್ಕೆ ತಲುಪಿದೆ. ಪ್ರಸ್ತುತ ಅಂಕಪಟ್ಟಿಯಲ್ಲಿ 12ನೇ ಸ್ಥಾನದಲ್ಲಿದೆ ಮತ್ತು ಮುಂಬರುವ ಈವೆಂಟ್‌ಗಳಲ್ಲಿ ಇನ್ನೂ ಉತ್ತಮ ಪ್ರದರ್ಶನ ನೀಡುವ ಭರವಸೆಯಲ್ಲಿದೆ. ಪುರುಷರ ಕಬಡ್ಡಿ ತಂಡವು ಸಹ ಚಿನ್ನದ ನಿರೀಕ್ಷೆಯಲ್ಲಿದೆ. ಭಾರತ ಇರಾನ್ ಪುರುಷರ ಕಬಡ್ಡಿ ಪಂದ್ಯ ಇಂದೇ ನಡೆಯಲಿದೆ.

## ಕ್ವಾರ್ಟರ್ ಫೈನಲ್‌ನಲ್ಲಿ ಭಾರತ VS ಅಫ್ಘಾನಿಸ್ತಾನ ಮುಖಾಮುಖಿ

ಜಪಾನ್‌ನಲ್ಲಿ ನಡೆಯುತ್ತಿರು ಏಷ್ಯನ್ ಕ್ರೀಡಾಕೂಡದ ಪುರುಷರ ಟಿ20 ಕ್ರಿಕೆಟ್ ಟೂರ್ನಮೆಂಟ್‌ನ ಕ್ವಾರ್ಟರ್ ಫೈನಲ್ ಪಂದ್ಯಗಳು ಸೆಪ್ಟೆಂಬರ್ 28 ರಿಂದ ಪ್ರಾರಂಭಗೊಳ್ಳಲಿವೆ. ಇದರಲ್ಲಿ ಭಾರತ, ಪಾಕಿಸ್ತಾನ, ಶ್ರೀಲಂಕಾ ಮತ್ತು ಬಾಂಗ್ಲಾದೇಶ ಅಂತರಾಷ್ಟ್ರೀಯ ಶ್ರೇಯಾಂಕಗಳ ಆಧಾರದ ಮೇಲೆ ನೇರವಾಗಿ ಕ್ವಾರ್ಟರ್ ಫೈನಲ್‌ಗೆ ಮುನ್ನಡೆದಿವೆ. ಏತನ್ಮಧ್ಯೆ, ಅಫ್ಘಾನಿಸ್ತಾನ, ನೇಪಾಳ, ಜಪಾನ್ ಮತ್ತು ಹಾಂಗ್ ಕಾಂಗ್ ಸೇರಿದಂತೆ ತಂಡಗಳು ಅರ್ಹತಾ ಸುತ್ತಿನ ಪಂದ್ಯಗಳಲ್ಲಿ ಭಾಗಿಯಾದವು. ಈ ಪರಿಸ್ಥಿತಿಯಲ್ಲಿ, ಇಂದು ನಡೆದಿದ್ದ ನೇಪಾಳ ಮತ್ತು ಜಪಾನ್ ನಡುವಿನ ಅರ್ಹತಾ ಸುತ್ತಿನ ಪಂದ್ಯವು ಮಳೆಯಿಂದಾಗಿ ಅರ್ಧಕ್ಕೆ ರದ್ದುಗೊಂಡಿತು.

ಈ ಪಂದ್ಯದಲ್ಲಿ ಟಾಸ್ ಸೋತು ಮೊದಲು ಬ್ಯಾಟಿಂಗ್ ಮಾಡಿದ ನೇಪಾಳ 10 ಓವರ್ ಗಳಲ್ಲಿ 4 ವಿಕೆಟ್ ನಷ್ಟಕ್ಕೆ 84 ರನ್ ಗಳಿಸಿತು. ಆರಂಭಿಕ ಜೋಡಿ ಸುಂದೀಪ್ ಜೋರಾ ಮತ್ತು ಲೋಕೇಶ್ ಭಾಮ್ ಪಂದ್ಯದ ಗತಿಯನ್ನು ಬದಲಾಯಿಸಿದರು. ಕೊನೆಯವರೆಗೂ ಔಟಾಗದೆ ಉಳಿದಿದ್ದ ಸುಂದೀಪ್ ಜೋರಾ 32 ಎಸೆತಗಳಲ್ಲಿ 57 ರನ್ ಗಳಿಸಿದರು ಮತ್ತು ಲೋಕೇಶ್ ಭಾಮ್ 22 ಎಸೆತಗಳಲ್ಲಿ 52 ರನ್ ಗಳಿಸಿ ತಂಡದ ಸ್ಕೋರ್ ಹೆಚ್ಚಿಸಿದರು.

ನಂತರ ತಂಡವು 15 ಓವರ್‌ಗಳಲ್ಲಿ 4 ವಿಕೆಟ್‌ಗಳ ನಷ್ಟಕ್ಕೆ




149 ರನ್ ಗಳಿಸಿದಾಗ ಮಳೆ ಇನ್ನಿಂಗ್ಸ್‌ಗೆ ಅಡ್ಡಿಪಡಿಸಿತು. ನಿರಂತರ ಮಳೆಯಿಂದಾಗಿ ಪಂದ್ಯವನ್ನು ಅರ್ಧಕ್ಕೆ ರದ್ದುಗೊಳಿಸಲಾಯ್ತು ಮತ್ತು ಎರಡೂ ತಂಡಗಳಿಗೆ ತಲಾ ಒಂದು ಅಂಕಗಳನ್ನು ಹಂಚಿಕೆ ಮಾಡಲಾಯ್ತು.

ಇದರೊಂದಿಗೆ ನೇಪಾಳ ತಂಡ 3 ಅಂಕಗಳೊಂದಿಗೆ ಗ್ರೂಪ್ ಎ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದು ಕ್ವಾರ್ಟರ್ ಫೈನಲ್‌ಗೆ ಮುನ್ನಡೆದರೆ, ಜಪಾನ್ ತಂಡ ಕೇವಲ ಒಂದು ಅಂಕದೊಂದಿಗೆ ಮುಂದಿನ ಸುತ್ತಿಗೆ ಮುನ್ನಡೆಯುವ ಅವಕಾಶವನ್ನು ಕಳೆದುಕೊಂಡಿತು. ಅದೇ ಸಮಯದಲ್ಲಿ, ರನ್ ರೇಟ್ ಮತ್ತು ಪಾಯಿಂಟ್‌ಗಳ ಆಧಾರದ ಮೇಲೆ ಅಫ್ಘಾನಿಸ್ತಾನ ತಂಡವೂ ಆ ವಿಭಾಗದಲ್ಲಿ ಮುಂದಿನ ಸುತ್ತಿಗೆ ಮುನ್ನಡೆಯಿತು.

ಇದರೊಂದಿಗೆ ಅಫ್ಘಾನಿಸ್ತಾನವು ಕ್ವಾರ್ಟರ್ ಫೈನಲ್‌ನಲ್ಲಿ ಬಲಿಷ್ಠ ಭಾರತವನ್ನು ಎದುರಿಸಲಿದೆ. ಎರಡೂ ತಂಡಗಳ ನಡುವಿನ ಈ ಪಂದ್ಯವು ಸೆಪ್ಟೆಂಬರ್ 28 ರಂದು ಭಾರತೀಯ ಕಾಲಮಾನ ಬೆಳಿಗ್ಗೆ 10 ಗಂಟೆಗೆ ಪ್ರಾರಂಭಗೊಳ್ಳಲಿದೆ. ಇತರ ಕ್ವಾರ್ಟರ್ ಫೈನಲ್ ಪಂದ್ಯಗಳಲ್ಲಿ ಹಾಂಗ್ ಕಾಂಗ್ VS ಪಾಕಿಸ್ತಾನ, ನೇಪಾಳ ತಿ ಶ್ರೀಲಂಕಾ ಮತ್ತು ಮಲೇಷ್ಯಾ VS ಬಾಂಗ್ಲಾದೇಶ ತಂಡಗಳು ಮುಖಾಮುಖಿ ಆಗಲಿವೆ. ಇಲ್ಲಿಯ ವಿಜೇತ ತಂಡಗಳು ಸೆಮಿಫೈನಲ್‌ಗೆ ಮುನ್ನಡೆಯಲಿವೆ.

**ಏಷ್ಯನ್ ಕ್ರೀಡಾಕೂಟಕ್ಕೆ – ಭಾರತ ಪುರುಷರ ತಂಡ:** ಶ್ರೇಯಸ್ ಅಯ್ಯರ್, ತಿಲಕ್ ವರ್ಮಾ, ರವಿ ಬಿಷ್ಣೋಯ್, ಅಭಿಷೇಕ್ ಶರ್ಮಾ, ನಿತೀಶ್ ಕುಮಾರ್ ರೆಡ್ಡಿ, ಜಸ್ಪ್ರೀತ್ ಬುಮ್ರಾ, ಸಂಜು ಸ್ಯಾಮ್ಸನ್, ಅಕ್ಷರ್ ಪಟೇಲ್, ಹರ್ಷಿತ್ ರಾಣಾ, ಇಶಾನ್ ಕಿಶನ್, ವಾಷಿಂಗ್ಟನ್ ಸುಂದರ್, ಅರ್ಷದೀಪ್ ಸಿಂಗ್, ಶಿವಂ ದುಬೆ, ವರುಣ್ ಚಕ್ರವರ್ತಿ, ವೈಭವ್ ಸೂರ್ಯವಂಶಿ.

## ಮ್ಯಾರಥಾನ್‌ನಲ್ಲಿ ಪದಕ ಗೆದ್ದ ಬರ್ವಾಲ್

ಜಪಾನ್‌ನಲ್ಲಿ ನಡೆದ ಏಷ್ಯನ್ ಕ್ರೀಡಾಕೂಟದಲ್ಲಿ, ಭಾರತ ಕ್ರೀಡಾಪಟು ಮತ್ತು ಹವಾಲ್ದಾರ್ ಸಾವನ್ ಬರ್ವಾಲ್ ಅವರು 44 ವರ್ಷಗಳ ಸುದೀರ್ಘ ಕಾಯುವಿಕೆಯ ನಂತರ ಭಾರತಕ್ಕೆ ಮ್ಯಾರಥಾನ್‌ನಲ್ಲಿ ಪದಕವನ್ನು ಗೆದ್ದುಕೊಡುವ ಮೂಲಕ ಇತಿಹಾಸ ನಿರ್ಮಿಸಿದ್ದಾರೆ.

ಶನಿವಾರ ನಡೆದ ಪುರುಷರ ಮ್ಯಾರಥಾನ್ ಸ್ಪರ್ಧೆಯಲ್ಲಿ, ಸಾವನ್ ಅವರು 2 ಗಂಟೆ, 11 ನಿಮಿಷ ಮತ್ತು 37 ಸೆಕೆಂಡುಗಳಲ್ಲಿ ಓಟವನ್ನು ಪೂರ್ಣಗೊಳಿಸಿ ಬೆಳ್ಳಿ ಪದಕವನ್ನು ತಮ್ಮದಾಗಿಸಿಕೊಂಡರು. ಈ ಸಾಧನೆಯು ಈ ವಿಭಾಗದಲ್ಲಿ ಭಾರತದ ದೀರ್ಘಕಾಲದ ಪದಕ ಬರಕ್ಕೆ ತೆರೆ ಎಳೆದಿದೆ.

ಹಿಮಾಚಲ ಪ್ರದೇಶದವರಾದ 28 ವರ್ಷದ ಸಾವನ್ ಬರ್ವಾಲ್ ಅವರು ಭಾರತೀಯ ಸೇನೆಯಲ್ಲಿ ಹವಾಲ್ದಾರ್ ಆಗಿ ಸೇವೆ ಸಲ್ಲಿಸುತ್ತಿದ್ದಾರೆ. ಅವರು ಆರಂಭದಿಂದಲೇ ಓಟದಲ್ಲಿ ಪ್ರಾಬಲ್ಯ ಸಾಧಿಸಿದ್ದರು ಮತ್ತು 35 ಕಿಲೋಮೀಟರ್‌ಗಳ ಹಂತದವರೆಗೂ ಮುನ್ನಡೆಯನ್ನು ಕಾಯ್ದುಕೊಂಡಿದ್ದರು. ಆದಾಗ್ಯೂ, ಅಂತಿಮ 7 ಕಿಲೋಮೀಟರ್‌ಗಳಲ್ಲಿ ಅವರ ವೇಗ ಸ್ವಲ್ಪ ಕಡಿಮೆಯಾಯಿತು ಮತ್ತು ಅಂತಿಮವಾಗಿ ಅವರು ಎರಡನೇ ಸ್ಥಾನಕ್ಕೆ ತೃಪ್ತಿಪಡಬೇಕಾಯಿತು. ಜಪಾನ್‌ನ ಇಚಿತಕ ಯಮಶಿತಾ ಅವರು 2 ಗಂಟೆ, 10 ನಿಮಿಷ ಮತ್ತು 49 ಸೆಕೆಂಡುಗಳಲ್ಲಿ ಓಟವನ್ನು ಪೂರ್ಣಗೊಳಿಸಿ ಚಿನ್ನದ ಪದಕವನ್ನು ಗೆದ್ದುಕೊಂಡರು. ಗಮನಾರ್ಹವೆಂದರೆ, ಸಾವನ್ ಕೇವಲ 48 ಸೆಕೆಂಡುಗಳ ಅಂತರದಿಂದ ಚಿನ್ನದ ಪದಕವನ್ನು ತಪ್ಪಿಸಿಕೊಂಡರು. ಇದೇ ವೇಳೆ, ಚೀನಾದ ಪೆಯಿಯು ಕಂಚಿನ ಪದಕವನ್ನು ಗೆದ್ದುಕೊಂಡರು.

ಏಷ್ಯನ್ ಕ್ರೀಡಾಕೂಟದ ಮ್ಯಾರಥಾನ್‌ನಲ್ಲಿ ಭಾರತ ಪದಕ ಗೆದ್ದಿರುವುದು ಇದು ನಾಲ್ಕನೇ ಬಾರಿ. ಭಾರತವು ಈ ಹಿಂದೆ 1951ರಲ್ಲಿ ದೆಹಲಿಯಲ್ಲಿ ನಡೆದ ಕ್ರೀಡಾಕೂಟದಲ್ಲಿ ಚಿನ್ನ ಮತ್ತು ಕಂಚಿನ ಪದಕಗಳನ್ನು ಗೆದ್ದಿತ್ತು. ನಂತರ, 1982ರಲ್ಲಿ ನಮ್ಮ ದೇಶದಲ್ಲಿ ಏಷ್ಯನ್ ಕ್ರೀಡಾಕೂಟ ನಡೆದಾಗ ಸೀತಾರಾಮ್ ಕಂಚಿನ ಪದಕವನ್ನು ಗೆದ್ದಿದ್ದರು. ಇದೀಗ, 44 ವರ್ಷಗಳ ನಂತರ, ಸಾವನ್ ವಿದೇಶಿ ನೆಲದಲ್ಲಿ ಬೆಳ್ಳಿ ಪದಕವನ್ನು ಗೆಲ್ಲುವ ಮೂಲಕ ಮಿಂಚಿದ್ದಾರೆ.

ಈ ಸ್ಪರ್ಧೆಯಲ್ಲಿ ಸಾವನ್ 2:11:37 ಗಂಟೆಗಳಲ್ಲಿ ಓಟವನ್ನು ಪೂರ್ಣಗೊಳಿಸಿದರು ಇದು ಅವರ ವೃತ್ತಿಜೀವನದ ಅತ್ಯುತ್ತಮ ವೈಯಕ್ತಿಕ ಸಾಧನೆಯಾಗಿದೆ. ಈ ವರ್ಷದ ಆರಂಭದಲ್ಲಿ, ಏಪ್ರಿಲ್‌ನಲ್ಲಿ, ಸಾವನ್ ನೆದರ್‌ಲ್ಯಾಂಡ್ಸ್‌ನಲ್ಲಿ ನಡೆದ ಮ್ಯಾರಥಾನ್ ಅನ್ನು 2:11:58 ಗಂಟೆಗಳಲ್ಲಿ ಪೂರ್ಣಗೊಳಿಸಿದ್ದರು. ಇದರೊಂದಿಗೆ ಭಾರತೀಯ ಮ್ಯಾರಥಾನ್ ಓಟಗಾರ ಶಿವನಾಥ್ ಸಿಂಗ್ (2:12:00 ಗಂಟೆಗಳು) ಅವರ ಹೆಸರಿನಲ್ಲಿದ್ದ ದಾಖಲೆಯನ್ನು ಮುರಿದಿದ್ದರು. ಇದೀಗ ಅವರು ತಮ್ಮದೆ ದಾಖಲೆಯನ್ನು ಮುರಿದಿರುವುದು ಗಮನಾರ್ಹ.




Printed by : A. BALACHANDRA, Printed at : RAJHANS ENTERPRISES No. 134, 4th Main Road, Industrial Town, Rajajinagar, Bengaluru - 560044, Karnataka. Owned By, Published By, Editor :T. HOMBE GOWDA, No. 1230, Jayamahal, Ground Floor, 13th Cross, 2nd Phase, Girinagar, Bengaluru - 560 085, Karnataka. Email Id: udayavahininews@yahoo.com , epaper. udayavahini.in www.udayavahini.in Udaya vahini news Udaya vahini news